ಇದು ಚರ್ಚೆ ಮಾಡುವುದಕ್ಕೆ ಪ್ರಮುಖವಾದ ವಿಚಾರವೆಂದು ಹೇಳಿ. ನೀವು ಕರೆದಾಗ ದಯಮಾಡಿ Monday ತೆಗೆದುಕೊಳ್ಳಿ ಎಂದು ನಾನು ವಿನಂತಿಸಿಕೊಂಡೆ. ನೀವು ಅವೊತ್ತೇ ನನ್ನನ್ನು ಕರೆದಿರಿ. ಆಗ ನೀವು ಯಾರೂ ಇಲ್ಲವೆಂದು, ನಿಮಗೆ ಗೌರವ ಕೊಟ್ಟು, ನೀವು ಇಲ್ಲದೆ ಚರ್ಚೆ ಮಾಡಿದರೆ, ಅದಕ್ಕೇನೂ ಅರ್ಥವಿರುವುದಿಲ್ಲವೆಂದು ಹೇಳಿದ್ದೇನೆ.

ಅಧ್ಯಕ್ಷರು : ದೇಶಪಾಂಡೆಯವರು ಅವಸರವಾಗಿ ಊರಿಗೆ ಹೋಗಬೇಕಾಗಿತ್ತು. ಆದುದರಿಂದ........

ಶ್ರೀ ಸಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರವಾದ ನರಗುಂದದಲ್ಲಿ ಜುಲೈ ತಿಂಗಳಿನಲ್ಲಿ ಸಾಕಷ್ಟು ಮಳೆಯಾಗಿ ಮುಂಗಾರು ಬಿತ್ತನೆಯಾಗಿದೆ. ಆದರೆ........

ಅಧ್ಯಕ್ಷರು : ಈಗ ನೀವು ಏನು ಹೇಳುತ್ತಿದ್ದೀರಿ? Zero Hour ಗೆ ತಾವು ಈಗ ಕಳುಹಿಸಿಕೊಟ್ಟಿದ್ದೀರಿ. ತಾವು ನಮ್ಮ ಕೊಠಡಿಗೆ ಬಂದು ಕೊಟ್ಟಿದ್ದರೆ, ಈಗ ಬರುತ್ತಿತ್ತು. ಆದರೆ, ತಾವು ಈಗ ಕಳುಹಿಸಿಕೊಟ್ಟಿರುವುದರಿಂದ ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಈಗ ಸದನವನ್ನು ಪುನಃ ಮಧ್ಯಾಹ್ನ 2.45 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಭೋಜನ ವಿರಾಮಕ್ಕೆಂದು ಸದನವು ಮಧ್ಯಾಹ್ನ 2.42 ಗಂಟೆಗೆ ಮುಂದೂಡಲ್ಪಟ್ಟು ಪುನಃ 2.45 ಗಂಟೆಗೆ ಸೇರಲು ತೀರ್ಮಾನಿಸಲಾಯಿತು)

(ಸದನವು ಮಧ್ಯಾಹ್ನ 3.06ಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರು (ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

5. ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು : ಶ್ರೀ ಎನ್. ಸೂರ್ಯನಾರಾಯಣ ರೆಡ್ಡಿಯವರು ಅನಾರೋಗ್ಯದ ಕಾರಣ ದಿನಾಂಕ: 19.6.06 ರಂದು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ;

"ಶ್ರೀ ಎನ್. ಸೂರ್ಯನಾರಾಯಣ ರೆಡ್ಡಿಯವರು ಅನಾರೋಗ್ಯದ ಕಾರಣ ದಿನಾಂಕ: 19.6.06 ರಿಂದ 7.7.06 ರವರೆಗೆ ಗೈರು ಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿರುತ್ತಾರೆ".

ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?

ಸಭೆಯು ಒಪ್ಪಿಗೆ ಸೂಚಿಸಿತು

ಅಧ್ಯಕ್ಷರು : ಮಾನ್ಯ ಸದಸ್ಯರ ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

6. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ : ಬಿ.ಎಂ.ಐ.ಸಿ. ಯೋಜನೆ ಕುರಿತು.

ಶ್ರೀ ಆರ್. ದಿನೇಶ್ ಗುಂಡೂರಾವ್ : ಸರ್ಕಾರಕ್ಕೆ ಈ ವಿಷಯದ ಬಗ್ಗೆ ಕಾಳಜಿ ಇಲ್ಲವೆಂದು ಈಗ ಗೊತ್ತಾಗುತ್ತದೆ. ಮಂತ್ರಿಗಳು ಯಾರೂ ಇಲ್ಲ. ಕೇವಲ ಪ್ರಚಾರಕ್ಕೋಸ್ಕರ ಮಾಡುತ್ತಾರೆ.

ಅಧ್ಯಕ್ಷರು : ಚೀಫ್ ವಿಪ್‌ರವರೇ, ಮೊದಲನೇ ಸಾಲಿನ ಮಂತ್ರಿಗಳಿಗೆ ಆದಷ್ಟು ಬೇಗ ಕರೆಸಿ. ಬರುತ್ತಾರೆ, ಹೇಳಿ ಕಳುಹಿಸಿದ್ದೇನೆ ಬರುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಬಹಳ ಗಹನವಾದ ವಿಷಯದ ಬಗ್ಗೆ ನಾವು ಇವತ್ತು ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಗೃಹ ಸಚಿವರು ಹಾಗೂ ಮಾನ್ಯ ಕಾನೂನು ಸಚಿವರು ವಿಷಯ ಪ್ರಸ್ತಾಪವಾದಾಗ ಹೇಳಿದರು, ಸನ್ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದಾಗ ಸರ್ಕಾರಕ್ಕೂ ಚರ್ಚೆ ಬೇಕಾಗಿದೆ ಎಂದು ಹೇಳಿದರು. ಇಲ್ಲಿನ ವಾತಾವರಣ ನೋಡಿದರೆ, ಸರ್ಕಾರಕ್ಕೆ ಚರ್ಚೆ ಬೇಡ ಎಂದ ಹಾಗೆ ಕಾಣುತ್ತದೆ. ಇಲ್ಲಿ ಸಂಬಂಧಪಟ್ಟ ಯಾವ ಮಂತ್ರಿಗಳೂ ಇಲ್ಲ, ಲೋಕೋಪಯೋಗಿ ಸಚಿವರು ಇರಬೇಕಾಗಿತ್ತು, who is the nodal agency for the Department. Luckily ಕೈಗಾರಿಕಾ ಸಚಿವರು ಇದ್ದಾರೆ. ನಮ್ಮ ಕಾಲದಲ್ಲಿ ಮಾಡಿದ್ದು ಸರಿಯೋ ತಪ್ಪು ಎಂದು ಹೇಳಲಿಕ್ಕೆ, ಅವರು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗಿತ್ತು, Ministers ಇರಬೇಕಾಗಿತ್ತು, ಹಾಗಾಗಿ ಕೇವಲ ಹೈಕೋರ್ಟ್‌ಗೆ, ಸುಪ್ರೀಂಕೋರ್ಟ್‌ಗೆ ತೋರಿಸಲಿಕ್ಕೆ ನಮಗೆ ಸೀರಿಯಸ್‌ನೆಸ್ ಇದೆ ಎಂದು ಹೇಳಿದರೆ, ಅದಕ್ಕೂ ಉತ್ತರ ಇದೆ, ಬರುತ್ತದೆ. ಮುಖ್ಯವಾಗಿ ಮಾನ್ಯ ಅಧ್ಯಕ್ಷರೆ, ಹಲವಾರು ಹಿರಿಯ ಗೌರವಾನ್ವಿತ ಸದಸ್ಯರು ಶ್ರೀಮಾನ್ ಶ್ರೀರಾಮರೆಡ್ಡಿಯವರು, ಗೌರವಾನ್ವಿತ ಮಾಧುಸ್ವಾಮಿಯವರು, ಗೌರವಾನ್ವಿತ ಶ್ರೀ ರಮೇಶ್‌ಕುಮಾರ್‌ರವರು, ತಮ್ಮದೇ ಆದ ಧಾಟಿಯಲ್ಲಿ ತಮ್ಮ ಮಾಹಿತಿ ಪ್ರಕಾರ, ತಮಗೆ ಬಂದ ಇನ್‌ಫರ್ಮೇಷನ್ ಪ್ರಕಾರ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇವತ್ತು 1995ನೇ ಇಸವಿಯಲ್ಲಿ ಈ MOU ಏನು ಸೈನ್ ಆಯಿತು, ಆ ಸಮಯದಲ್ಲಿ ಗೌರವಾನ್ವಿತ ಮಾನ್ಯ ದೇವೇಗೌಡರ ಸರ್ಕಾರ ಇತ್ತು. 1997ರಲ್ಲಿ ಯಾವಾಗ ಫ್ರೇಮ್‌ವರ್ಕ್ ಅಗ್ರಿಮೆಂಟ್ ಸೈನ್ ಆಯಿತು, ಆ ಸಮಯದಲ್ಲಿ ಗೌರವಾನ್ವಿತ ದಿವಂಗತ ಜೆ.ಹೆಚ್. ಪಟೇಲರ ಸರ್ಕಾರ ಇತ್ತು. 1999–04ನೇ ಇಸವಿಯಲ್ಲಿ ಎಸ್.ಎಂ. ಕೃಷ್ಣರವರ ಸರ್ಕಾರ ಇತ್ತು. ಅದರ ನಂತರ ನಮ್ಮ ನಾಯಕರಾದ ಮಾನ್ಯ ಧರ್ಮಸಿಂಗ್‌ರವರ ಸಮ್ಮಿಶ್ರ ಸರ್ಕಾರ ಇತ್ತು. ನನಗೆ ಈ ನಾಲ್ಕು ಸರ್ಕಾರಗಳಲ್ಲಿ ಕೆಲಸ ಮಾಡಲಿಕ್ಕೆ ಅವಕಾಶ ಸಿಕ್ಕಿತ್ತು. 1995ರ ಸರ್ಕಾರದಲ್ಲಿ, 1997ರ ಸರ್ಕಾರದಲ್ಲಿ, ಈ ಮನೆಯಲ್ಲಿ ಮಾನ್ಯ ಜೆ.ಹೆಚ್. ಪಟೇಲ್‌ರವರ ಸರ್ಕಾರದಲ್ಲಿ, ಮಾನ್ಯ ದೇವೇಗೌಡರ ಸರ್ಕಾರದಲ್ಲಿ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಇದ್ದರು. ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಇದ್ದರು, ಮಾನ್ಯ ಉದಾಸಿಯವರು ಮಾನ್ಯ ಜೆ.ಹೆಚ್.ಪಟೇಲ್‌ರವರ ಸರ್ಕಾರದಲ್ಲಿ ಇದ್ದರು. ಇಷ್ಟು ಬಿಟ್ಟರೆ ನನ್ನ information ಪ್ರಕಾರ ಬೇರೆ ಯಾರೂ ಇರಲಿಲ್ಲ. ಮಾನ್ಯ ಕೃಷ್ಣರವರ ಸರ್ಕಾರದಲ್ಲಿ ಮಾನ್ಯ ಶಿವಕುಮಾರ್‌ರವರು, ಮಾನ್ಯ ಧರ್ಮಸಿಂಗ್‌ರವರು ಇದ್ದರು, ಮಾನ್ಯ ಖರ್ಗೆಯವರು ಇದ್ದರು, ಮಾನ್ಯ ಗುರುಪಾದಪ್ಪನವರು ಇದ್ದರು, ಮಾನ್ಯ ಕೃಷ್ಣರವರು ಇದ್ದರು. ಇದರ ನಂತರ ಬಂದ ಜೆ.ಡಿ.(ಎಸ್) ಸಮ್ಮಿಶ್ರ ಸರ್ಕಾರದಲ್ಲಿ ನಾವಿದ್ದೆವು. ನಾವು ಸ್ವಲ್ಪ ಹೊರಗೆ ಬಂದೆವು. ಇದೇ ಪ್ರಾಜೆಕ್ಟ್‌ನಲ್ಲಿ ಕೆಲವು ಕಾಲ ನಮ್ಮ ಮೇಲೆ ಆಪಾದನೆ ಮಾಡಿ, ನೀವು ಸ್ವಲ್ಪ ಹೊರಗಿರಿ ಎಂದು ಹೇಳಿದರು. ಇದು

ನಮ್ಮ ಹೈಕಮಾಂಡ್‌ಗೆ ಸತ್ಯ ಏನು ಅಸತ್ಯ ಎಂಬುದು ಗೊತ್ತಾಯಿತು, ಅದು ಒಂದು ಕಡೆ ಇರಲಿ. ನಾನು ಈ ರಾಜ್ಯದ ಕೈಗಾರಿಕಾ ಮಂತ್ರಿಯಾಗಿ ಸಾವಿರಾರು ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಿದ್ದೇನೆ. ಆದರೆ ಯಾವುದೇ ಪ್ರಾಜೆಕ್ಟ್‌ನಲ್ಲೂ ಸಹ ಈ ತರಹದ ಕಾಂಟ್ರವರ್ಸಿಯನ್ನು ನಾನು ನೋಡಿರಲಿಲ್ಲ. Airport ಗಾಗಿ 4,500 ಎಕರೆ ನಾನೇ land acquire ಮಾಡಿದ್ದೆ, ಆಗ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಿದ್ದರು, ಮಾನ್ಯ ಜೆ.ಹೆಚ್. ಪಟೇಲ್‌ರವರು ಇದ್ದರು. ಯಾರೂ ಏನೂ ಮಾತನಾಡಲಿಲ್ಲ. ಅಲ್ಲೂ ಕೂಡ ರೈತರು ಇದ್ದಾರಲ್ಲವೇ? 5 ಲಕ್ಷ ರೂಪಾಯಿಗಳಂತೆ acquire ಮಾಡಿದ್ದೆವು. ಅಲ್ಲಿ ರೈತರ ಪರವಾಗಿ agitation ಮಾಡುವವರು ಯಾರೂ ಇರಲಿಲ್ಲವೆಂದು ಕಾಣುತ್ತದೆ. ಹೊಸಕೋಟೆಯಲ್ಲಿ ವೋಲ್ವೋಗೆ ಲ್ಯಾಂಡ್ ಅನ್ನು ಕೊಟ್ಟೆವು, ಟೊಯೊಟಾಗೇ 200 ಎಕರೆ ಲ್ಯಾಂಡ್ ಕೊಟ್ಟೆವು, ಟಾಟಾಗೆ ಧಾರವಾಡದಲ್ಲಿ 1000 ಎಕರೆ ಕೊಟ್ಟೆವು. ಎಂಆರ್‌ಪಿಎಲ್‌ಗೆ ಕೊಟ್ಟೆವು, ವಿಜಯನಗರ ಜಿಂದಾಲ್‌ಗೆ ಸಾವಿರಾರು ಎಕರೆಗಳನ್ನು ಕೊಟ್ಟೆವು. ಆಗ ಯಾರೂ ಮಾತನಾಡಲಿಲ್ಲವಲ್ಲಾ? ಟಿವಿಎಸ್ ಇರಬಹುದು, ಎಸ್. ಕುಮಾರ್ ಇರಬಹುದು, ಟೆಲ್ಕೋ ಇರಬಹುದು, ಐಟಿ ಇರಬಹುದು, ಬಿಟಿ ಇರಬಹುದು, ಏರ್‌ಪೋರ್ಟ್ ಪ್ರಾಜೆಕ್ಟ್ ಇರಬಹುದು, ಒಂದು ಚಕಾರದ ಶಬ್ದವನ್ನೂ ಯಾರೂ ಮಾತನಾಡಲಿಲ್ಲ. ಹಾಗಾದರೆ ಈ ಪ್ರಾಜೆಕ್ಟ್‌ನಲ್ಲಿ ಅಂತಹ ಕಾಂಟ್ರವರ್ಸಿ ಇದೆ. 1995ರಿಂದ ಯಾರೂ ಮಾತನಾಡಲಿಲ್ಲ. 2004ನೇ ಇಸವಿಯತನಕ 9–10 ವರ್ಷಗಳ ಕಾಲ ಒಂದೇ ಬಾರಿ ಈ ಸದನದಲ್ಲಿ ಚರ್ಚೆಯಾಗಿತ್ತು. 1997ರಲ್ಲಿ ಗೌರವಾನ್ವಿತ ಉಪ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದಾಗ ಚರ್ಚೆಯಾಗಿತ್ತು. ಮುಖ್ಯವಾಗಿ ಆ ಸೈಡ್‌ನಿಂದ ಚರ್ಚೆಗೆ ಮಾನ್ಯ ನಾಣಯ್ಯನವರು ಉತ್ತರ ಕೊಟ್ಟಿದ್ದರು. ಆಗ ನಮ್ಮ ಗೌರವಾನ್ವಿತ ರಮೇಶ್ ಕುಮಾರ್‌ರವರು ಸ್ಪೀಕರ್ ಆಗಿದ್ದರು. ಆಗ ಚಕಾರ ಎತ್ತಿದ್ದು ಬಿಟ್ಟರೆ ಬೇರೆ ಯಾವ ಮಾತು ಇಲ್ಲ. Acquisition ಬಗ್ಗೆ ಇಲ್ಲ, ಕೊಡುವ ಬಗ್ಗೆ ಇಲ್ಲ, ಆದರೆ 2004ನೇ ಇಸವಿಯಲ್ಲಿ ಪ್ರಾರಂಭವಾಯಿತು, ಗೌರವಾನ್ವಿತ ಮಾಜಿ ಪ್ರಾಧನಮಂತ್ರಿಗಳು ಈ ಬಗ್ಗೆ ಒಂದು ಮೆಮೋರ್‍ಯಾಂಡಮ್ ಅನ್ನು ಕೊಡುತ್ತಾರೆ. ಆಗ ಚರ್ಚೆ ಶುರುವಾಯಿತು. ಆ ಚರ್ಚೆಯಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರ ಗೌರ್ನಮೆಂಟ್ ಮನಸ್ಸಿಗೆ ಬಂದ ಹಾಗೆ ಬೆಂಗಳೂರಿನಲ್ಲಿ ಲ್ಯಾಂಡ್ ಕೊಟ್ಟರು, ಮನಸ್ಸಿಗೆ ಬಂದ ಹಾಗೆ ಲ್ಯಾಂಡ್ acquire ಮಾಡಿದರು, letter of comfort ಕೊಟ್ಟರು, ICICI ನಿಂದ 150 ಕೋಟಿ ರೂಪಾಯಿಗಳನ್ನು ತೆಗೆದುಕೊಂಡರು. ಕೈಗಾರಿಕಾ ಮಂತ್ರಿಗಳಾಗಿದ್ದ ದೇಶಪಾಂಡೆಯವರು ಮನಸ್ಸಿಗೆ ಬಂದ ಹಾಗೆ land acquire ಮಾಡಿದರು, ಸಾವಿರಾರು ಎಕರೆ acquire ಮಾಡಿದರು, ಸಾವಿರಾರು ಎಕರೆ de-notify ಮಾಡಿದರು, ಅಂತ ಎಲ್ಲಾ ಹೇಳಿದರು. ಆದರೆ ಈಗ ಇವತ್ತು ನಾವು ವಿರೋಧ ಪಕ್ಷದಲ್ಲಿದ್ದೇವೆ. ಸರ್ಕಾರದಲ್ಲಿ ನೀವು ಕುಳಿತಿದ್ದೀರಿ. ಅವರು ರೆಕಾರ್ಡ್ ನೋಡಿ ಹೇಳಬೇಕು. ಇದರಲ್ಲಿ ಸತ್ಯ ಏನಿದೆ? ಅಸತ್ಯ ಏನಿದೆ? ನನಗೆ ಸಂತೋಷ ಇವತ್ತು, ನಾನು ಮಾಡಿದ್ದ order ಗಳನ್ನು ಕೆಲವರು ತೆಗೆದುಕೊಂಡು ಕೆಲವು ಜನ ಹಿರಿಯ ನಾಯಕರು, ಸ್ನೇಹಿತರು ಕೋಟ್ ಮಾಡಿ ಓದಿದರು. ದೇಶಪಾಂಡೆಯವರೂ ಕೂಡ excess land de-notify ಮಾಡಲಿಕ್ಕೆ ಹೇಳಿದ್ದಾರೆ, ಇದು real

estate project ಆಗಬಾರದು ಎಂದು ಇವತ್ತೂ ಕೂಡ ಆ ವಾದವನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. Really, ಇದರೊಳಗಡೆ ಸತ್ಯ ಏನೆಂಬುದನ್ನು ತಿಳಿದುಕೊಳ್ಳಲಿಕ್ಕೆ ನಾನು ಪ್ರಯತ್ನ ಮಾಡಬೇಕು. ಒಂದು ವೇಳೆ ಯಾವ ಸರ್ಕಾರ ಇರಲಿ, ಯಾವ ವ್ಯಕ್ತಿ ಇರಲಿ, ಅವರು ತಪ್ಪು ಮಾಡಿದ್ದರೆ ಶಿಕ್ಷೆ ಆಗಲೇಬೇಕು. CBI enquiry ಮಾಡಿ ಅಥವಾ ಮತ್ಯಾವುದೇ enquiry ಮಾಡಿ ಯಾವುದೇ enquiry ಮಾಡಿ, ಅದಕ್ಕೆ ನಮ್ಮ ವಿರೋಧವೇನಿಲ್ಲ. ಇವತ್ತು Petitioners ಮೂರು ಬಾರಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗೆ ಹೋದರು. CBI enquiry ಮಾಡಿ ಎಂದರು. High Court has rejected it. ಈಗ ಬೇಕಾದರೆ ಸರ್ಕಾರ Petitioner ಸಮಾಧಾನ ಮಾಡಲಿಕ್ಕೆ ಒಂದು CBI enquiry ಮಾಡಲಿ, ಏನೂ ತೊಂದರೆ ಇಲ್ಲ. ಸತ್ಯ ಹೊರಗಡೆ ಬರಬೇಕು ಎಂದು ಹೇಳಿದಾಗ, CBI ನವರಾದರೂ ಮಾಡಲಿ, ಸರ್ಕಾರದವರೇ ಮಾಡಲಿ, judicial commisison ನವರು ಮಾಡಲಿ, ಅಥವಾ ಸರ್ಕಾರಕ್ಕೆ ನಮ್ಮ ಹತ್ತಿರವೇ ಎಲ್ಲಾ ಮಾಹಿತಿ ಇದೆ ಮತ್ತು ಸರಿಯಾದ ದಾಖಲೆಗಳು ಇದೆ ಎನ್ನುವುದಾದರೆ, ತಾವೇ ಉತ್ತರ ಕೊಡಿ. ಸತ್ಯ ಏನಿದೆ ಎಂದು ಹೇಳಿ. ಮಾನ್ಯ ಅಧ್ಯಕ್ಷರೆ, MOU sign ಮಾಡಿದ್ದು 20.12.1995. ಇದರ ಬಗ್ಗೆ ಈಗಾಗಲೇ ಮಾತನಾಡಿದ ನನ್ನ ಸ್ನೇಹಿತರು ಹೇಳಿದ್ದಾರೆ. ನಾನು ಆ ಬಗ್ಗೆ ಡೀಟೈಲ್ಲಾಗಿ ಹೋಗುವುದಿಲ್ಲ. ಇದರ ಬಗ್ಗೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಮಾಡಿದರು. ರಾಮಕೃಷ್ಣ ಹೆಗಡೆಯವರು ಬಹಳ vizionary ಪ್ರೈವೇಟ್ sector ನಲ್ಲಿ ಪವರ್ ಪ್ರಾಜೆಕ್ಟ್‌ಗಳು ಬರಬೇಕು ಎಂದು ಹೇಳಿದ್ದರು. ಆಗ ಅವರ ಮೇಲೆ ಟೀಕೆಯಾಯಿತು, ಆದರೆ ಇವತ್ತು ಅವರು ಇಲ್ಲ. ಇವತ್ತು ನಾಗಾರ್ಜುನದವರಿಗೆ ನಾಲ್ಕು ಸಾವಿರ ಎಕರೆಗಳನ್ನು ಮಂಗಳೂರಿನಲ್ಲಿ ಕೊಡುತ್ತಿದ್ದೇವಲ್ಲಾ? ಥಾಪರ್‌ಗೆ ದಾಂಡೇಲಿಯಲ್ಲಿ ದಾಂಡೇಲಿ Dam ಕೊಡಬೇಕೆಂದು ಮಾನ್ಯ ರಾಮಕೃಷ್ಣ ಹೆಗಡೆಯವರು ರೆಕ್ಮಂಡ್ ಮಾಡಿದಾಗ ದೊಡ್ಡ ಗಲಾಟೆಯಾಯಿತು. ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾಗ, ನಾನು Urban Development Minister ಆಗಿದ್ದಾಗ ಹೌಸಿಂಗ್ ಕಾಲೋನಿಗೆ 110 ಎಕರೆ ಜಮೀನನ್ನು NRI ಲೋಖಂಡವಾಲಾಗೆ ಕೊಡಬೇಕೆಂದು ಮಾನ್ಯ ರಾಮಕೃಷ್ಣ ಹೆಗಡೆಯವರು ನಿರ್ಣಯ ಮಾಡಿದರು. ಆಗ ದೊಡ್ಡ ಗಲಾಟೆಯಾಯಿತು. ಕುಲದೀಪ್‌ಸಿಂಗ್ ಕಮಿಷನ್ ಅನ್ನು ಇದಕ್ಕಾಗಿ constitute ಮಾಡಿದಿರಿ. ಮಾನ್ಯ ವಾಟಾಳ್ ನಾಗರಾಜ್‌ರವರೆ, ಇವತ್ತು ಸಾವಿರ ಎಕರೆ, ಎರಡು ಸಾವಿರ ಎಕರೆ, ಮೂರು ಸಾವಿರ ಎಕರೆ ಜಮೀನನ್ನು ಹೌಸಿಂಗ್ ಪ್ಲಾನ್ ಡೆವಲಪ್ ಮಾಡಲಿಕ್ಕಾಗಿ ಕೊಡುತ್ತಿದ್ದೇವಲ್ಲಾ? ನಾನು blame ಮಾಡುವುದಿಲ್ಲ – concept ನಲ್ಲಿ thinking ನಲ್ಲಿ change ಆಯಿತು. ಏನು 25 ವರ್ಷಗಳ ಹಿಂದೆ ಚಿಂತನೆ ನಾವು ಮಾಡುತ್ತಿದ್ದೇವೋ, ಅವತ್ತಿನ ಚಿಂತನೆಗೂ ಇವತ್ತಿನ ಚಿಂತನೆಗೂ ಬಹಳಷ್ಟು ಬದಲಾವಣೆಗಳಾಗಿವೆ. 1991ನೇ ಇಸವಿಯಲ್ಲಿ ಈ ದೇಶದಲ್ಲಿ ಉದಾರೀಕರಣ ಬಂದ ನಂತರ, private sector ತನ್ನ ಹೆಚ್ಚಿನ ಪಾತ್ರವನ್ನು ವಹಿಸಲು ಪ್ರಾರಂಭ ಮಾಡಿತು. ಹೀಗಾಗಿ, ಇವತ್ತು ನಾವು ನೋಡಬೇಕಾಗಿದೆ, ಮಾನ್ಯ ರಾಮಕೃಷ್ಣಹೆಗಡೆಯವರ ಕಾಲದಲ್ಲಿ ಬೆಂಗಳೂರು ಮತ್ತು ಮೈಸೂರು ಬಹಳ ಮಹತ್ವದ ಸ್ಥಳ, historical importance ಇದೆ, tourism importance ಇದೆ. economic importance ಇದೆ. ಹೀಗಿರುವಾಗ

High way ಮಾಡುವುದಕ್ಕೆ ಪ್ರಯತ್ನವಾಯಿತು. ಆಗ ಟೆಂಡರ್ ಕರೆದಾಗ ಒಬ್ಬರೋ ಇಬ್ಬರೋ ಟೆಂಡರ್ ಹಾಕುತ್ತಿದ್ದರು. ಅವರು ಕಂಡೀಷನ್ಸ್ ಬಹಳಷ್ಟು ಹಾಕಿದರು. ಇಷ್ಟು ಹಣ ಕೊಡಬೇಕು, ಲ್ಯಾಂಡ್ ಫ್ರೀ ಕೊಡಬೇಕು; ಅದೂ ಆಗಲಿಲ್ಲ. ಆಗ ADB ನವರಿಗೆ approach ಮಾಡಿದರು, ಅದೂ ಆಗಲಿಲ್ಲ. ಆ ಸಮಯದಲ್ಲಿ, ಅಂದರೆ 1995ರಲ್ಲಿ ಗೌರವಾನ್ವಿತ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ, ನಾನು ಕೈಗಾರಿಕಾ ಮಂತ್ರಿಯಾಗಿದ್ದಾಗ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಂತ್ರಿಯಾಗಿದ್ದರು, ಮಾನ್ಯ ಸಿಂಧ್ಯರವರೂ ಇದ್ದರು. ಇದು ಒಳ್ಳೆಯ ವಿಚಾರ, ಬೆಂಗಳೂರು-ಮೈಸೂರು ಮಧ್ಯೆ ಒಂದು ರಸ್ತೆಯಾಗಬೇಕು. ಈ ವಿಚಾರದಲ್ಲಿ ಯುಎಸ್‌ಎ ಗೌರ್ನರ್ ವಿಲಿಯಮ್ ಬಂದಾಗ ಒಂದು MOU ದಿನಾಂಕ: 20.2.1995ರಲ್ಲಿ sing ಆಯಿತು, ಈ MOU ನಲ್ಲಿ ಏನಿದೆ? ಇದರಲ್ಲಿ townships ಮಾಡುವ ಬಗ್ಗೆ ಇಲ್ಲ. ಕೇವಲ ಒಂದು ರಸ್ತೆ ಮಾಡಬೇಕೆಂದು ಮಾತ್ರ MOU ನಲ್ಲಿ ಇತ್ತು. ಆ relevant portion ಅನ್ನು ನಾನೀಗ ಓದಬಯಸುತ್ತೇನೆ. "The consortium expressed interest in taking up the Bangalore-Mysore Express Highway project". ಇದರಲ್ಲಿ ಟೌನ್‌ಶಿಪ್ಸ್ ಇಲ್ಲ, peripheral roads ಇಲ್ಲ, So, 1995 ನಲ್ಲಿ the desire and the intention of the then Government thorugh MOU was just to have a road. Nothing inch more, nothing inch less. This was the MOU. ಮುಂದೆ ಏನಾಯಿತು? ಅದರ ನಂತರ Project report ಮಾಡಬೇಕಾಗಿತ್ತು. ಅವರು ಮಾಡಿದರು. ಆಗ 29.04.1995 ರಲ್ಲಿ ಆಗಿನ ಮುಖ್ಯಮಂತ್ರಿಗಳಿಗೆ, ಈ promoters, ಒಂದು presentation ಕೊಟ್ಟರು. ಆಗ ಅವರು ಏನು ಹೇಳಿದರು ಎಂಬುದನ್ನು ಓದಿ ಹೇಳುತ್ತೇನೆ. "The Managing Director, Bharath Forge Limited explained that the attempt made to conduct the preliminary studies, such as options available along the proposed alignment, traffic volume and assess the important link road along Bangalore and Mysore, which influences the Express way. He further expressed that to make the project commercially viable, it is necessary to develop Housing project and industrial project enroute the Express way. So, suggestion ಬಂತು. Bharath Forge Company ಛೇರ್ಮನ್‌ರವರಿಂದ ಇದರಲ್ಲಿ ಕೇವಲ ರಸ್ತೆ ಮಾಡುವುದರಿಂದ ಏನೂ ಆಗುವುದಿಲ್ಲ, ಈ ರಸ್ತೆ ಜೊತೆಗೆ ಟೌನ್‌ಶಿಫ್‌ಗಳನ್ನೂ ಸಹ ಮಾಡಬೇಕು ಎಂದರು. ಆಗ ಮುಖ್ಯಮಂತ್ರಿಗಳಾಗಿದ್ದವರು This concept was welcomed by the Hon'ble Chief Minister. So, ಆಗಿನ ಮುಖ್ಯಮಂತ್ರಿಗಳಿಗೆ ಒಳ್ಳೆಯ ಮನಸ್ಸಿನಿಂದ ಒಳ್ಳೆಯ ವಿಚಾರದಿಂದ, ಆಗಲಿ, ಆಗಲಿ, project feasible ಆಗಬೇಕಾದರೆ ರಸ್ತೆ ಜೊತೆಗೆ ಟೌನ್‌ಶಿಫ್ ಮಾಡಬೇಕು ಎಂಬ ಪ್ರಸ್ತಾಪ ಎರಡನೆಯದು ಆಯಿತು. It was just to have an express highway project. ಅದರ ನಂತರ ಮುಂದೆ ಏನಾಯಿತು? Hon'ble Chief Minister assured that he could be

approached if any serious problem arises in respect of this road project and the scheme will be brought to a reality on priority. ಈ ಪ್ರಾಜೆಕ್ಟ್ ಏನಿದೆ, ನಾವು ರಿಯಾಲಿಟಿ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದು ಆ ದಿನ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕೈಗಾರಿಕಾ ಮಂತ್ರಿಯಾದ ನಾನೂ ಹೇಳಿದ್ದೆ. Let me notrunning away from this issue. ಮಾನ್ಯ ಎಂ.ಪಿ. ಪ್ರಕಾಶ್ ಕೂಡ ಆ ಸಮಯದಲ್ಲಿದ್ದರು. ಯಾರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ತಪ್ಪು ಮಾಡಿದರು ಎಂದು ಹೇಳುತ್ತಿಲ್ಲ. Facts are this. ಅದರ ನಂತರ ಒಂದು ಕಮಿಟಿ, ಹೈ ಲೆವೆಲ್ ಕಮಿಟಿ ಫಾರಂ ಮಾಡಿದರು; under the Chairmanship of the PWD Minister. ಫಾರಂ ಮಾಡಿ, ಅದಕ್ಕೆ ಹೈ ಪವರ್ ಕಮಿಟಿ ಎಂದು ಹೇಳಿದರು. ಇದಾದನಂತರ, ನಾನು ಈಗಾಗಲೇ ಹೇಳಿದ ಹಾಗೆ ಸರ್ಕಾರ, ಅದು ಯಾವುದೇ ಸರ್ಕಾರ ಇರಲಿ ಇದೊಂದು welfare state. ಸಾಮಾನ್ಯ ಜನರ ಬಗ್ಗೆ, ಬಡವರ ಬಗ್ಗೆ, ರೈತರ ಬಗ್ಗೆ ಬಹಳ ಚಿಂತನೆ ಮಾಡಬೇಕಾಗುತ್ತದೆ. ಅದು ಕುಡಿಯುವ ನೀರಿರಬಹುದು, ಅದು ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಇರಬಹುದು, ಫುಡ್ ಸಬ್ಸಿಡಿ ಇರಬಹುದು, ಒಂದು ಹೆಲ್ತ್ ಕೇರ್ ಇರಬಹುದು, ಪ್ರೈಮರಿ ಎಜುಕೇಷನ್ ಇರಬಹುದು. ಇದೆಲ್ಲಾ ಸರ್ಕಾರದ ಜವಾಬ್ದಾರಿ. ಆದರೆ ಇವತ್ತು ಏನಾಗಿದೆ? ಇವತ್ತಿನ ಪರಿಸ್ಥಿತಿಯಲ್ಲಿ ಯಾವ ಸರ್ಕಾರಕ್ಕೂ ಸಹ ಜನರನ್ನು ಸ್ಯಾಟಿಸ್‌ಫೈ ಮಾಡುವುದಕ್ಕೆ ಆಗುತ್ತಿಲ್ಲ. ಜನರ ಎಕ್ಸ್‌ಪೆಕ್ಟೇಷನ್ ಜಾಸ್ತಿಯಾಗುತ್ತಾ ಇದೆ. ಹಾಗಾಗಿ ಸರ್ಕಾರ ಏನು ವಿಚಾರ ಮಾಡಿತು ಎಂದರೆ ಕೇವಲ ಕರ್ನಾಟಕ ಸರ್ಕಾರ ಅಲ್ಲ, ಕೇವಲ ಭಾರತ ಸರ್ಕಾರ ಅಲ್ಲ, ಈ ದೇಶದಲ್ಲಿ ಇದ್ದಂತಹ ಪ್ರತಿಯೊಂದು ಸರ್ಕಾರ ಏನು ವಿಚಾರ ಮಾಡಿತೆಂದರೆ government has no business to be in business. ಇದು ನಮ್ಮ ಕೆಲಸ ಅಲ್ಲ. ಇನ್‌ಫ್ರಾಸ್ಟ್ರಕ್ಚರ್ ಪ್ರೊವೈಡ್ ಮಾಡುವುದು, ಏರ್‌ಪೋರ್ಟ್ ಮಾಡುವುದು ದೊಡ್ಡ ಇಂಡಸ್ಟ್ರೀ ಮಾಡುವುದು. ಒಂದು ಕಾಲದಲ್ಲಿ ಪೂಜ್ಯ ಸರ್.ಎಂ. ವಿಶ್ವೇಶ್ವರಯ್ಯನವರು ಎಲ್ಲಾ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದರು. ನನಗೆ ಹೇಳಿ ಕಳೆದ 25 ವರ್ಷಗಳಲ್ಲಿ ಎಷ್ಟು ಪ್ರೈವೇಟ್ ಹಾಗೂ ಗೌವರ್ನ್‌ಮೆಂಟ್ ಸೆಕ್ಟರ್‌ನಿಂದ ಕೈಗಾರಿಕೆಗಳು ಪ್ರಾರಂಭವಾಗಿದೆ? ಇವತ್ತು ಗೌವರ್ನ್‌ಮೆಂಟ್ ಆಫ್ ಇಂಡಿಯಾದವರ ಬಿ.ಇ.ಎಲ್, ಬಿ.ಇ.ಎಂ.ಎಲ್. ಇದೆ, ಬಿ.ಹೆಚ್.ಇ.ಎಲ್. ಇದೆ, ಹೆಚ್.ಎ.ಎಲ್. ಇದೆ How many industries the Government of India have started now? ಇಲ್ಲ. role ಚೇಂಜ್ ಆಗಿದೆ. ಜನರ ಸೇವೆ ಮಾಡುವುದಕ್ಕೆ ಜನರ ಪರವಾಗಿ ವೆಲ್‌ಫೇರ್ ಸ್ಕೀಮ್ ತೆಗೆದುಕೊಳ್ಳುವುದಕ್ಕೆ ಗೌವರ್ನ್‌ಮೆಂಟ್ ಕಡೆ ಇವತ್ತು ರಿಸೋರ್ಸಸ್ ಕಡಿಮೆ ಇದೆ. ಹಾಗಾಗಿ ಇವತ್ತು foreign investments ಎಂದು ಹೇಳುತ್ತಿದ್ದೇವೆ. Private investments ಇರುತ್ತವೆ, ಪ್ರೈವೇಟ್ ಪಬ್ಲಿಕ್ ಪಾರ್ಟ್‌ನರ್‌ಶಿಫ್ ಎಂದು ಹೇಳುತ್ತೇವೆ. ಈಗ ನಾವು ಎಷ್ಟು ಹಣ ತರುವುದಕ್ಕೆ ಸಾಧ್ಯ ಮಾನ್ಯ ಗೌರವಾನ್ವಿತ ಮುಖ್ಯಮಂತ್ರಿಗಳು ದುಬೈ ಹಾಗೂ ಸಿಂಗಪೂರ್‌ಗೆ ಹೋಗಿದ್ದರು. I am happy about it. ನಮ್ಮ ರಾಜ್ಯದಲ್ಲಿ ಒಳ್ಳೆಯದು ಆಗುವುದಿದ್ದರೆ Why should we come in the way? Individuals are not important. The state's interests are important. ಹಾಗಾಗಿ ಸರ್ಕಾರದ

ರೋಲ್‌ಗಳು ಕಡಿಮೆಯಾಗುತ್ತಾ ಹೋಯಿತು. ಪ್ರೈವೇಟ್ ಅಂಡ್ ಪಬ್ಲಿಕ್ ಪಾರ್ಟಿಸಿಪೇಷನ್‌ಗೆ ಹೆಚ್ಚು ಮಹತ್ವ ಬಂತು. ಸರ್ಕಾರದ ಕಡೆಯಿಂದ ಇನ್‌ಅಡಿಕ್ವೇಟ್ ರಿಸೋರ್ಸಸ್; ಸೋಷಿಯಲ್ ಆಬ್ಲಿಗೇಷನ್ಸ್ ಹೆಚ್ಚಿವೆ. ಮತ್ತು ಮೂಲಭೂತ ಸೌಕರ್ಯಗಳು ವಿದೇಶದಲ್ಲಿ more than 8-8.5% GDP growth ಆಗುತ್ತಿದೆ. After China, our growth is the highest. ಕರ್ನಾಟಕ ಸಹ, it is growing more faster than the national average. ಆದರೆ ಇನ್ನೂ ನಮ್ಮ ಕಡೆ ಬಡತನ ಕಾಣಿಸುತ್ತದೆ. ಇನ್ನೂ ನಮ್ಮ ಜನರ ಕಷ್ಟ ಕಾಣಿಸುತ್ತಿದೆ. ಪೇಪರ್‌ನಲ್ಲಿ ಮೊನ್ನೆ ಮಾನ್ಯ ಮುಖ್ಯಮಂತ್ರಿಂಗಳ ಜನತಾ ದರ್ಶನದ ಬಗ್ಗೆ ನೋಡಿದೆ. 400 ರಿಂದ 500 ಜನ ತಾವು ನೋಡಿದಿರಿ. ಏಕೆ? ಇಷ್ಟೆಲ್ಲಾ ಆದರೂ ಸಹ ಹಲವಾರು ಸಮಸ್ಯೆಗಳು ಸಮಸ್ಯೆಗಳಾಗಿ ಉಳಿದಿವೆ. ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದರಲ್ಲಿ ಏನಾಗಿದೆ? ಒಂದು ರಾಷ್ಟ್ರ, ಒಂದು ರಾಜ್ಯ ಬೆಳೆಯಬೇಕಾದರೆ ಮಾನವ ಸಂಪನ್ಮೂಲ ಮತ್ತು ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಶಕ್ತಿ ಇರಬೇಕು. ಕರ್ನಾಟಕದಲ್ಲಿ ಐಟಿ:ಬಿಟಿಯಲ್ಲಿ ನಾವು foresront ಇದ್ದೇವೆ. Let us be honest. Government role is very limited. 1997 ವರೆಗೆ ಐಟಿ : ಬಿಟಿ ಯಾರೂ ನೋಡಿಲ್ಲ. Nobody looked at IT, BT. Only in 1997, the Government of Karnataka brought an IT Policy. They were growing on their own. 97ನೇ ಇಸವಿಯಿಂದ ನಾವು ನೋಡಿದೆವು, ಗೌವರ್ನ್‌ಮೆಂಟ್ ಆಫ್ ಇಂಡಿಯಾದವರು, ಇನ್‌ಕಂ ಟ್ಯಾಕ್ಸ್ ಎಗ್ಸಂಪ್‌ಷನ್ ಕೊಟ್ಟರು. ಹಾಗಾಗಿ ಇವತ್ತು ಐಟಿ : ಬಿಟಿ ಕರ್ನಾಟಕದಲ್ಲಿ ಡೆವಲಪ್ ಆದರೆ, ಮೂಲಭೂತ ಸೌಕರ್ಯಗಳು ಇರಬೇಕು. ನಾವು ಇಲ್ಲಿ ನೆಲೆಸಬೇಕು. ಏನೇ ಆಗಲಿ ಟೀಕೆ ಟಿಪ್ಪಣಿ ಮಾಡಲಿ, ನಮ್ಮ ಗೌವರ್ನ್‌ಮೆಂಟ್ ಮೆಡಿಕಲ್ ಕಾಲೇಜಸ್ ಇರಬಹುದು ಗೌವರ್ನ್‌ಮೆಂಟ್ ಇಂಜಿನಿಯರಿಂಗ್ ಕಾಲೇಜ್ ಇರಬಹುದು, ನಮ್ಮ ಮಠಾಧೀಶರು ಪ್ರಾರಂಭ ಮಾಡಿರುವಂತಹ ಇಂಜಿನಿಯರಿಂಗ್ ಕಾಲೇಜಸ್ ಇರಬಹುದು, ಮೆಡಿಕಲ್ ಕಾಲೇಜಸ್ ಇರಬಹುದು, They have helped in creating human resource. ಇವತ್ತು ಎಂಜಿನಿಯರ್ಸ್ ಇಲ್ಲ, ಡಾಕ್ಟರ್ಸ್ ಇಲ್ಲ, ಎಂ.ಡಿ ಗಳು ಇಲ್ಲ. ಎಲ್ಲಿ ಐಟಿ, ಎಲ್ಲಿ ಬಿಟಿ ಇಲ್ಲಿಗೆ ಬರುತ್ತಿತ್ತು? ಆದುದರಿಂದ ಮೂಲಭೂತ ಸೌಕರ್ಯಗಳು ಬೆಳೆಯಬೇಕು. ರಸ್ತೆಗಳು ಆಗಬೇಕು, ಸೇತುವೆಗಳು ಆಗಬೇಕು. ಎಕ್ಸ್‌ಪ್ರೆಸ್ ಹೈವೇ ಆಗಬೇಕು. ಫ್ಲೈಓವರ್ಸ್ ಆಗಬೇಕು ಏರ್‌ಪೋರ್ಟ್ ಆಗಬೇಕು. ಪೋರ್ಟ್ ಆಗಬೇಕು. ಇದಾದರೆ prosperity ಬರುವುದು. ಜನರಿಗೆ ಉದ್ಯೋಗಾವಕಾಶಗಳು ಸಿಗುವುದು. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇರಬಾರದಲ್ಲಾ. ಹಾಗಾಗಿ ಆ ಸಮಯದಲ್ಲಿ ದೇವೇಗೌಡರೂ ಸಹ ಮುಖ್ಯಮಂತ್ರಿಯಾಗಿದ್ದಾಗ ಈ ಸರ್ಕಾರದಲ್ಲಿ ಚೆನ್ನಾಗಿ ಕೆಲಸವಾಗಬೇಕು, ಇದಾಗಬೇಕು ಎಂದು ಒಳ್ಳೆಯ ಇಂಟೆನ್‌ಷನ್‌ನಲ್ಲಿ ಕ್ಯಾಬಿನೆಟ್ ಆ ಸಮಯದಲ್ಲಿ ಡಿಸಿಷನ್ ತೆಗೆದುಕೊಂಡಿತು ಎಂದು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಪೇಪರ್‌ನಲ್ಲಿ ನೋಡಿರಬಹುದು. ಮಾನ್ಯ ಪ್ರಕಾಶ್‌ರವರೇ ನಾಲ್ಕೈದು ದಿವಸದ ಹಿಂದಿನ ಪೇಪರ್‌ನಲ್ಲಿ ತಾವು ಓದಿರಬಹುದು. ರಿಲಯನ್ಸ್, ಹರಿಯಾಣದಲ್ಲಿ ಎಸ್‌ಇಜೆಡ್ ಹಾಕುತ್ತಿದ್ದಾರೆ 20 ಸಾವಿರ ಎಕರೆ ಕೊಡುತ್ತಿದ್ದಾರೆ. ಎಂ.ಓ.ಯು ಸೈನ್ ಆಗಿದೆ. ಪಂಜಾಬ್‌ನಲ್ಲಿ Mil Products ಅಗ್ರಿ ಬಿಸಿನೆಸ್

ಮಾಡುತ್ತಿದ್ದಾರೆ. 2,500 ಎಕರೆ ಎಂ.ಓ.ಯು ಸೈನ್ ಆಗಿದೆ. ರಾಜಸ್ಥಾನದಲ್ಲಿ 2,500 ಎಕರೆ ಜಮೀನಿಗೆ ಎಂ.ಓ.ಯು ಸೈನ್ ಆಗಿದೆ. ಇವತ್ತು ಮಂಗಳೂರಿನಲ್ಲಿ ನಾಗಾರ್ಜುನ ಬರುತ್ತಿದೆ. ಅವರಿಗೂ ಒಂದೂವರೆಯಿಂದ ಎರಡು ಸಾವಿರ ಎಕರೆ ಜಮೀನನ್ನು ಕೊಡುತ್ತಿದ್ದೇವೆ. ವಿಜಯನಗರ ಜಿಂದಾಲ್ ತಮ್ಮ ನಗರದಲ್ಲಿ ಬಂದಿದೆ, ಅದಕ್ಕೆ ನಮ್ಮ ಸರ್ಕಾರದಿಂದ ಸಾವಿರಾರು ಎಕರೆ ಜಮೀನು ಕೊಟ್ಟೆವೋ ಇಲ್ಲವೋ? ಈಗ ಜಮೀನನ್ನು ಮನಸ್ಸಿಗೆ ಬಂದ ಹಾಗೆ ಕೊಡುವುದಕ್ಕಾಗುವುದಿಲ್ಲ. There should be a necessity. In one incident, if there has any excess, the government should have immediately taken it back. ಅದು ನಂದಿ ಇರಲಿ, ಯಾವುದೇ ಇರಲಿ. We are not here to defend Nandi, or anybody else. We are here to defend the State's interest or the farmer's interests, and the other interests of the people. ಇವತ್ತು ಮುಖ್ಯವಾಗಿ ಏರ್‌ಪೋರ್ಟ್ ಪ್ರಾಜೆಕ್ಟ್ ಪ್ರಕಾಶ್‌ರವರೆ, ಮೊದನೆಯದಾಗಿ 94 ಡಿಸೆಂಬರ್‌ನಲ್ಲಿ ನಾವು ಪ್ರಾಜೆಕ್ಟ್ ಕ್ಲಿಯರ್ ಮಾಡಿದೆವು. ಮಾನ್ಯ ಗೌರವಾನ್ವಿತ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು. ದಿ: 3.1.95 ನಾನು ಮತ್ತು ಮಾನ್ಯ ದೇವೇಗೌಡರು, we went to Calcutta foa a CII Meet. ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು ರತನ್ ಟಾಟಾಗೆ letter of intent ಗೆ ಕೊಟ್ಟರು. ರತನ್ ಟಾಟಾ ಹೇಳಿದರು, "Hon'ble Chief Minister, this is a new year gift to me". 4,500 ಎಕರೆ ಜಮೀನು ತೆಗೆದುಕೊಂಡಿದ್ದೇವೆ. 2.500 ಎಕರೆ ಜಮೀನು ಪ್ರೈವೇಟದ್ದು ಇದೆ. ಆ ಅಕ್ವಿಸಿಷನ್ ನಮ್ಮ ಕಾಲದಲ್ಲಿ ಆಗಿದ್ದು. ಯಾರೂ ಮಾತನಾಡಲಿಲ್ಲ. ಒಂದೇ ಹೇಳಿದರು, ಪ್ರಾಜೆಕ್ಟ್ ಇಲ್ಲೇ ಆಗಬೇಕು. ಬಿಡದಿಯಲ್ಲಿ ಆಗಬೇಕು, ರಾಮನಗರದಲ್ಲಿ ಆಗಬೇಕು, ಇಷ್ಟೇ ಚರ್ಚೆ ಇತ್ತು ವಿನಹ No other discussions were there. No allegations were there. No counter-allegations were there. ಆ ಲ್ಯಾಂಡ್ ಅನ್ನು ನಾವು 5 ಲಕ್ಷ ರೂಪಾಯಿಗೆ ಎಕರೆಗೆ ಎಂದು ತೆಗೆದುಕೊಂಡಿದ್ದು. ಇವತ್ತು ಮಾನ್ಯ ರಮೇಶ್ ಕುಮಾರ್ ರವರೇ, ನೀವು ಆ ಸೈಡ್‌ನಿಂದ ಹೋಗುತ್ತಿರೋ ಇಲ್ಲವೋ ಗೊತ್ತಿಲ್ಲ. ಈಗ ಅಲ್ಲಿನ ಪ್ರೈಸ್ ಕೋಟಿ ಆಗಿದೆ, ಎರಡು ಕೋಟಿ ರೂಪಾಯಿ ಆಗಿದೆ, 50 ಲಕ್ಷ ರೂಪಾಯಿ ಆಗಿದೆ ಅಂತ. ಹಾಗಾಗಿ ಇವತ್ತು ಆ ಪ್ರಾಜೆಕ್ಟ್‌ಅನ್ನು ಟಾಟಾರವರ ಕಡೆಯಿಂದ ಇಂಟರ್‌ನ್ಯಾಷನಲ್ ಫ್ಲೈಟ್ಸ್ ಶುರುವಾಗಿ ಐದು ವರ್ಷವಾಗುತ್ತಿತ್ತು. ಆದರೆ ಇರಲಿ, ಇದಕ್ಕೆ ಯಾರನ್ನು ಬ್ಲೇಮ್ ಮಾಡುವ ಅವಶ್ಯಕತೆಯಿಲ್ಲ. We should say, we were unlucky to get this project and execute it. ನಾನು ಇಲ್ಲಿ ಅಲಿಗೇಷನ್ ಮಾಡುವುದಕ್ಕೆ ನಿಂತಿಲ್ಲ. I want to throw the light and tell what is the truth. ಅದರ ನಂತರ ಹೈ ಪವರ್ ಕಮಿಟಿ ರಚನೆಯಾಯಿತು. ಹೈ ಪವರ್ ಕಮಿಟಿಯ ಹಲವಾರು ಸಭೆಗಳಾದವು. High Power Committee was headed by PWD Minister. ಇವತ್ತು ಮಾನ್ಯ ನಾಯ್ಡು ರವರೆ, ಕೆ.ಐ.ಎ.ಡಿ.ಬಿ ಇಂಡಸ್ಟ್ರೀ ಮಿನಿಸ್ಟರ್ ಆಗಿದ್ದೀರಿ. ಈ ಪ್ರಾಜೆಕ್ಟ್‌ನಲ್ಲಿ ನೀವು ಯಾವುದೇ ಕಮಿಟಿ ಮೆಂಬರ್ ಆಗಿಲ್ಲ. Core Committee ಯಲ್ಲಿ ಇಲ್ಲ ಎಂಪವರ್ಡ್ ಕಮಿಟಿಯಲ್ಲಿ ಇಲ್ಲ, ಹೈ ಪವರ್ ಕಮಿಟಿಯಲ್ಲಿ ಇಲ್ಲ. You are only a member. ಆ ಕಮಿಟಿ ಇದ್ದರೆ if it is still alive, it is only Cabinet Sub-Committee. Industries Minister was not

a Member of any Committee. It was the PWD Minister, who is the Chairman of the high-power committee. ಅದರಿಂದ ಹಲವಾರು ಡಿಸಿಷನ್ಸ್ ಆಯಿತು. ಆ ಡಿಸಿಷನ್‌ನಲ್ಲಿ ಮುಖ್ಯವಾಗಿ ನಮ್ಮ ಪ್ರಮೋಟರ್ಸ್ ಏನು ಹೇಳುತ್ತಾರೆ ನೋಡಿ.

14th June, 1995.

"Therefore, the consortium wanted a commitment from the Government of Karnataka for such a type of development and to modify the scope of MOU".

"......to modify the scope of MOU". So, they wanted modified MOU and it was modified as Bangalore-Mysore Expressway Corridor Project. They wanted it to be known as, not the Bangalore-Mysore road, but 'Bangalore-Mysore Express Coriddor Project', because MOU was signed only for a road, not for townships. It further says:

> "...expressway between Bangalore and Mysore as per the new alignment plan for which land is to be acquired, Development of industrial, residential and tourist resorts by private enterpreneurs who will be allowed to purchase required land at market value".

This happened, also after the MOU on 14th June, 1995.

"Then the consortium also wanted approval for enlarging the scope of MOU and to have revised MOU".

They said 'revised MOU'.

"They also proposed a logo for this project Nandi as Chamundi Hills as logo for this project was proposed by him".

Then what happened. It was all agreed. Logo was agreed. Consortium was agreed and the road became a corridor project with 7 townships. Subsequently, they were reduced to 5 townships. We are all party to that decision. I am party to that decision. Along with the then Chief Minister, Mr. Prakash, you are a party. Sri Sindhia, who is here is a party. I am not going to run away and say I am not a party to that decision. The decision was taken in good interest of the State. That decision was taken to see that this project is implemented and

infrastructure is built. That was the intention. ಬೆಂಗಳೂರಿನಲ್ಲಿ ಟ್ರಾಫಿಕ್ ಹೆಚ್ಚಾಗಿತ್ತು. ಬೆಂಗಳೂರಿನಲ್ಲಿ ಬಹಳ ತೊಂದರೆಯಾಗುತ್ತಿತ್ತು. ಇವತ್ತಿನ ಪ್ರಾಬ್ಲಂ ಅನ್ನು ನೋಡಿ, ನಾನು ಆರ್.ಟಿ.ನಗರದಿಂದ ಇಲ್ಲಿಗೆ ಬರಬೇಕೆಂದರೆ ಒಂದೂವರೆ ತಾಸು ಸಮಯ ಬೇಕಾಗುತ್ತದೆ, ಟ್ರಾಫಿಕ್ ಕಂಡೀಷನ್‌ಗೆ ಬರಬೇಕು, ಟೌನ್ ಶಿಪ್ಸ್ ದೂರ ಹೋಗಬೇಕು. ಎನ್‌ವಾಯರ್‌ಮೆಂಟ್ ಬೆಂಗಳೂರಿನಲ್ಲಿ ಬಹಳ ಪರಿಣಾಮವಾಗುತ್ತಿದೆ. So many was aspects were thought ecology and done ಆ ಅಸೆಪ್ಟ್ಸ್ and thought ಕರೆಪ್ಟ್ ಇತ್ತು, ಅಂದರೆ it is difficult. Then we are guilty. We are all Criminals. We have to be punished. There is no other argument for that. Then a video presentation was also given. I was there. I don't know whether Sri Prakash was there. Chief Minister Sri Deve Gowda was there. Video presentation was given to us. Project was presented before us. We approved this. It is all borneaut in facts. ನಾನು ನನ್ನ ಮನೆಯಿಂದ ಕಾಗದಗಳನ್ನು ತಂದು ಹೇಳುತ್ತಾ ಇಲ್ಲ. What the high-level committed recommended? I don't know at that time whether Sri Udasi had come or Sri Koujalagi continued. I don't know. But, what it recommended?

> "The project should be contemplated with expressway between Bangalore and Mysore and 7 townships. There is no financial investment, commitment whatsoever by Government of Karnataka".

ನಾಲ್ಕು ನೂರ MW ಪವರ್ ಪ್ರಾಜೆಕ್ಟ್ ಆಗಬೇಕು, 2 ಟಿ.ಎಂ.ಸಿ. ಕಾವೇರಿ ನಿಂದ ವಾಟರ್ ಕೊಡಬೇಕು. BMRDA and KIADB Act should be modified. ರೆಡ್ಡಿ ಸಾಹೇಬರು ಕೆಐಎಡಿಬಿ ಆ್ಯಕ್ಟ್ ಅಮೆಂಡ್ ಮಾಡಿದರು ಎಂದು ಕೇಳಿದರು. This was as per the decision of the Cabinet, the high-power Committee and because, KIADB earlier used to acquire lands only for industries. ಅದರ scope ಎನ್‌ಲಾರ್ಜ್ ಆಗಬೇಕು, ಟೂರಿಸಂನದು, ಇನ್‌ಫ್ರಾಸ್ಟ್ರಕ್ಚರ್‌ದು, ಅದು ಅಕ್ವಾಯರ್ ಆಗಬೇಕೆಂದು ಇದೇ ಸಭೆಯಲ್ಲಿ ಡಿಸ್‌ಕಸ್ ಆಗಿ ಪಾಸ್ ಆಗಿ, ಗೌವರ್ನ್‌ಮೆಂಟ್ ಆಫ್ ಇಂಡಿಯಾದಿಂದ ಬಂದಿದ್ದು. This was mainly because of the decision of the Cabinet and also of the high-power committee. Then, ಮತ್ತೊಂದು ಮಾನ್ಯ ಮುಖ್ಯಮಂತ್ರಿಗಳೇ, We are forgetting that part. Displaced farmers ಬಗ್ಗೆ ಏನು ಮಾಡಬೇಕೆಂದು ಬರೆದಿದ್ದಾರೆ. ಅವರಿಗೆ ಕಾಂಪನ್ಸೇಷನ್ ಕೊಡಬೇಕು, ಅವರಿಗೆ ಜಾಗ ಕೊಡಬೇಕು. ಅವರಿಗೆ ಅವಶ್ಯವಿದ್ದರೆ ಮನೆ ಕೊಡಬೇಕು.

It is all there. But, nobody is discussing about that. So, government will have to take note of that. Whether it is Nandi or any other project, if you want the project to be implemented, do this for my people. ಕೊಡಿ ಮನೆ, ಕೊಡಿ ಜಾಗ, There is a provision. Discuss ಮಾಡಿ, ಅದರ ಬಗ್ಗೆ ಯಾರೂ ಮಾತನಾಡುವುದಿಲ್ಲ. Nobody speaks about that. ಇವತ್ತು ಮಾನ್ಯ ಮುಖ್ಯಮಂತ್ರಿಗಳೇ, ಈ ದೇಶದಲ್ಲಿ ಬಹಳ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಬಂದಿದೆ. Thousands of acres of land have been acquired. ಆ ಜಮೀನು ಯಾರದು? ರೈತರದು ಅಲ್ಲವಾ? Crocodile tears will not help. Rule is one. Law is one. ಎಲ್ಲಾದರೂ ಎಕ್ಸಸ್ ಲ್ಯಾಂಡ್ ಹೋದರೆ, ಈ ಪ್ರಾಜೆಕ್ಟ್ ಬೇಡ. Take every inch of it. If the government feels that this project is not required, if you feel Baba, if you want to take over, come on, bring a legislation. Let us see as to how is the legislation. ಇದು ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳೇ, Karnataka is a very progressive state. ಕರ್ನಾಟಕ ರಾಜ್ಯಕ್ಕೆ ಬಹಳ ಗೌರವ ಇದೆ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ನಾನು ದೇವೇಗೌಡರ ಜೊತೆ, ಜೆ.ಹೆಚ್. ಪಟೇಲ್‌ರವರ ಜೊತೆಗೆ Isrel, Davos, World Economic Forum, America, London ಗೆ ಹೋದಾಗ, 1995–1996ರಲ್ಲಿ I used to tell. 'Karnataka is to the South of India. And Bangalore is its capital'. This is the story in 1995-96. Do you understand this? To-day Karnataka has attracted world's attention. ಒಬ್ಬ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರು ಇದ್ದಾರೆಂದರೆ, with pride and affection, they will receive you, because you are known as the Chief Minister of a progressive state. ಇದನ್ನು ವಿಚಾರ ಮಾಡಬೇಕಲ್ಲಾ, ಇದರಲ್ಲಿ ಬಹಳ ಕಷ್ಟ ಪಟ್ಟಿದ್ದೇವೆ. ಪರಿಚಯ ಮಾಡುವುದು ಕಷ್ಟ ಇತ್ತು, ಅದು ದೇವರಿಗೆ ಗೊತ್ತಿದೆ. I used to give presentation. ಹಾಗಾಗಿ ಇವತ್ತು 30 ವರ್ಷಗಳು ಲೀಸ್ ಕೊಡಬೇಕು. ಅಲ್ಲಿ ಲ್ಯಾಂಡ್‌ಅನ್ನು ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ಅಕ್ಸೆಪ್ಟ್ ಮಾಡಿದ್ದು ಎಷ್ಟು? 7,748 ಎಕರೆ ಲ್ಯಾಂಡ್ಸ್ Then in project report, the land accepted was that 7,748 acres of land should be given to toll roads and 14,200 acres of land should be given to 5 townsips. So, total land which was identified in the project report, to be given was 21,958 acres. This was agreed as per the project report of the consortium. Then, Finance Department said, 'No'. ಏಳು ಟೌನ್ ಶಿಪ್ಸ್ ಮಾಡುವುದಕ್ಕೆ ಬರುವುದಿಲ್ಲ, ಐದು ಟೌನ್ ಶಿಪ್ಸ್ ಅನ್ನು ಮಾಡಿ ಅಂತ. It was agreed upon.

'Development of townships should be done along with the construction of express highway'. ಈ ರೀತಿ ಅಮೆಂಡ್ ಮಾಡಿದ್ದೇವೆ. ಎಕ್ಸ್‌ಪ್ರೆಸ್ ಹೈವೇ ಮೊದಲು ಮಾಡಿ, ನಂತರ ರೋಡ್ ಅನ್ನು ಮೈಸೂರಿನಿಂದ ಶುರು ಮಾಡಬೇಕೆಂದು ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಇದ್ದಾಗ, ಡೈರೆಕ್ಷನ್ ಕೊಟ್ಟಿತ್ತು. ಮೊದಲು ಏನು ಇತ್ತೆಂದರೆ ರಸ್ತೆ ಮತ್ತು ಮನೆಗಳನ್ನು ಒಂದೇ ಸಾರಿ ಕಟ್ಟಬೇಕೆಂದು ಇತ್ತು. ಇದನ್ನು ನಾನು ಓದಿ ಹೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಆರ್.ವಿ. ದೇಶಪಾಂಡೆಯವರು ಪ್ರಸ್ತಾಪ ಮಾಡುತ್ತಿರುವಂತಹ ವಿಚಾರದಲ್ಲಿ, ನಾನು ಲೋಕೋಪಯೋಗಿ ಸಚಿವನಾಗಿ, ಇದ್ದಂಥ ಸಂದರ್ಭದಲ್ಲಿ ಫ್ರೇಮ್‌ವರ್ಕ್ ಅಗ್ರಿಮೆಂಟ್‌ಗೆ ಸಹಿ ಮಾಡಿದ್ದೇನೆಂಬ ಮಾತು ಇದೆಯೆಂದು ಹೇಳಿದ್ದಾರೆ. ನಾವೆಲ್ಲರೂ ಇಲ್ಲಿ ಜವಾಬ್ದಾರಿಯಾಗಿ ಇದ್ದೇವೆಂಬ ಮಾತನ್ನು ಹೇಳಲಿಚ್ಛಿಸುತ್ತೇನೆ. ತಾವು ಮಾತನಾಡಬೇಕಾದಾಗ Along with road, building constraction is to be started ಎನ್ನುವಂಥ ಮಾತುಗಳನ್ನು ಹೇಳಿದ್ದೀರಿ. ಅದು ಹಾಗೆ ಇಲ್ಲ, ಟೌನ್ ಶಿಪ್ಸ್‌ನಲ್ಲಿ ಮಾಡಬೇಕೆಂದು ಇದೆ, ಎಲ್ಲಿ ಅಲಾಂಗ್ ವಿತ್ ರೋಡ್‌ನಲ್ಲಿ ಏನು ಟೌನ್ ಶಿಪ್ಸ್‌ಗಳನ್ನು ಐದು ಮಾಡಬೇಕೆಂದು ತೀರ್ಮಾನ ಆಗಿದೆ. ಮೊದಲನೆ ಟೌನ್ ಶಿಪ್ಸ್ ಬಿಡದಿಯಿಂದ ಪ್ರಾರಂಭವಾಗಬೇಕಾಗಿದ್ದದ್ದು, ಆ ಬಿಡದಿಯಿಂದ ಪ್ರಾರಂಭವಾಗಿ ಮುಂದೆ ನಾಲ್ಕು ಟೌನ್ ಶಿಪ್ಸ್ ಆಗಬೇಕಾಗಿದ್ದರ ಬದಲಾಗಿ ಬೆಂಗಳೂರಿನಿಂದ ಬಿಡದಿಯವರೆಗೆ ರೋಡ್‌ಗಾಗಿ ಮಾತ್ರ ಜಮೀನನ್ನು ತೆಗೆದುಕೊಳ್ಳಬೇಕೇ ಹೊರತು ಉಳಿದ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಎಲ್ಲಾ ಇರಲಿಲ್ಲ. ಇದು ನಂತರದ ಬದಲಾವಣೆಯೆಂಬುದು ತಮ್ಮ ಗಮನದಲ್ಲಿ ಇದೆಯೆಂದು ನಾನು ಹೇಳಲಿಚ್ಛಿಸುತ್ತೇನೆ. ಅದು ನಂತರದ ಬದಲಾವಣೆ ಎನ್ನುವುದು ತಮ್ಮ ಗಮನದಲ್ಲಿದೆ ಎನ್ನುವುದನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. 2001ರ ನಂತರ ಬದಲಾವಣೆಯಾಗಿದೆ. 1999ರವರೆಗೆ, ನಮ್ಮ ಸರ್ಕಾರ ಹೋಗುವವರೆಗೂ ಅದು ಯಾವುದೇ ಟೇಕಾಫ್ ಆಗಿಲ್ಲ. ಅದು ಪ್ರಾರಂಭವಾಗಿದ್ದು ಯಾವಾಗ ಅಂದರೆ, ನೀವು ಅವನಿಗೆ ತನ್ನ ಕದಂಬ ಬಾಹುಗಳನ್ನು ವಿಸ್ತರಣೆ ಮಾಡಲಿಕ್ಕೆ ಅವಕಾಶ ಕೊಟ್ಟಮೇಲೆ, ಮಾಡಲಿಕ್ಕೆ ಸಾಧ್ಯವಾಗಿದೆ. ಅಲ್ಲಿಯವರೆಗೆ ಅವನು 10 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡುತ್ತೇನೆ ಎಂದು ಹೇಳಿಕೊಂಡು ಬಂದಿದ್ದನೇ ಹೊರತು 10 ಕೋಟಿ ರೂಪಾಯಿಗಳನ್ನೂ ಖರ್ಚು ಮಾಡಿರಲಿಲ್ಲ ಎನ್ನುವುದು ನಮ್ಮ ಗಮನದಲ್ಲಿರಲಿ ಎನ್ನುವುದಕ್ಕಾಗಿ ಹೇಳಿದ್ದು. ಐಸಿಐಸಿಐ ಬ್ಯಾಂಕಿನವರು ಅವನಿಗೆ 150 ಕೋಟಿ ರೂಪಾಯಿಗೆ ಲೆಟರ್ ಆಫ್ ಇಂಟೆಂಟ್ ಕೊಟ್ಟಮೇಲೆ, ಹಣವನ್ನು ಡೆಪಾಸಿಟ್ ಮಾಡುತ್ತೇನೆ ಎಂದು ನಿಮ್ಮ ಹತ್ತಿರ ಹೇಳಿದ್ದಾನೆಯೇ ಹೊರತು ಆ ಡೆಪಾಸಿಟ್ಟನ್ನೂ ಸಹ ಅವನು ಭೂಮಿಗಾಗಿ ಮಾಡಿಲ್ಲ. ಭೂಮಿಗೆ ಡೆಪಾಸಿಟ್ ಮಾಡುವುದಕ್ಕೆ ಮೊದಲು ನೀವು ಲ್ಯಾಂಡ್ ಅಕ್ವಿಸಿಷನ್‌ಅನ್ನು ಪ್ರಾರಂಭ ಮಾಡಿದ್ದೂ ಸಹ 2001ರ ನಂತರ ಎನ್ನುವುದು ತಮ್ಮ ಗಮನದಲ್ಲಿರಲಿ ಎನ್ನುವುದನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗ ನನ್ನ ಹತ್ತಿರ ಯಾವುದೇ ದಾಖಲೆಗಳಿಲ್ಲದೇ ಮಾತನಾಡುತ್ತಿದ್ದೇನೆ. ನೆನಪಿನ ಶಕ್ತಿಯಿಂದ ಮಾತನಾಡುತ್ತಿದ್ದೇನೆಯೇ ಹೊರತು ಸಂಪೂರ್ಣ ದಾಖಲೆಗಳನ್ನು ತೆಗೆದುಕೊಂಡು ನಾನು ಮಾತನಾಡುತ್ತಿಲ್ಲ. ಅದು ತಮ್ಮ ಗಮನದಲ್ಲಿರಲಿ ಎನ್ನುವ ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಓದುತ್ತಿದ್ದೇನೆ ಕೇಳಿ. Dated 20.11.95 signed by S.P. Nithyanand, Secretary to Government, PWD-Proceedings of Government of Karnataka, Page 7- "The development of these townships should be done alongwith the construction of express highway". ಇದನ್ನಷ್ಟೇ ನಾನು ಹೇಳಿದ್ದೇನೆ. ಉದಾಸಿ ಹೇಳಿದರು ಎಂದು ನಾನೆಲ್ಲಿ ಹೇಳಿದ್ದೇನೆ?

SRI C.M. UDASI : Construction alongwith the road ಆಗಬೇಕಾಗಿತ್ತು ಎಂದರೆ ಟೌನ್‌ಶಿಪ್ಸ್‌ನಲ್ಲಿ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಆಗಬೇಕು ಎಂದು ಹೇಳಿದ್ದಾರೆ. ಇಲ್ಲಿ ಆಗಿರುವುದು ಏನೆಂದರೆ, along the road construction ಮಾಡಲಿಕ್ಕೆ ಭೂಮಿಯನ್ನು ತೆಗೆದುಕೊಂಡಿದ್ದಾರೆ ಎನ್ನುವುದು ಆಗಬೇಕಾಗಿತ್ತು. ಇಲ್ಲಿ ಬಂದಿರುವ ಸಮಸ್ಯೆಯೆಂದರೆ, ಬೆಂಗಳೂರಿನಿಂದ ಹಿಡಿದು ಬಿಡದಿಯವರೆಗೆ ಕೇವಲ ರಸ್ತೆಗಳಿಗಾಗಿ ಮಾತ್ರ ಭೂಮಿಯನ್ನು ಪಡೆಯಬೇಕಾಗಿತ್ತೇ ಹೊರತು, ಟೌನ್‌ಶಿಪ್ಸ್‌ಗಳನ್ನು ಕಟ್ಟಬೇಕಾದಂಥ ಸಂದರ್ಭಗಳಲ್ಲಿ ಟೌನ್‌ಶಿಪ್ಸ್‌ನ ಕೆಲಸ ಮತ್ತು ರಸ್ತೆಗಳ ಕೆಲಸ ಎರಡೂ ಏಕಕಾಲಕ್ಕೆ ಆಗಬೇಕು ಎನ್ನುವುದು ಇದೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಓದುತ್ತಿದ್ದೇನೆ ಕೇಳಿ. ನಾನು ಇದನ್ನು ಖುಷಿಯಿಂದ ಹೇಳುತ್ತಿರುವೆನೇನು? ಇದನ್ನು ನಾನು ರೆಡಿ ಮಾಡಿದ್ದೇನೆಯೇ? I am reading it:

"Proposal envisages construction of four lane express highway between Bangalore and Mysore - 110 KMs with a provision of extending the same to Six lane in future to disperse traffic in Bangalore there will be peripheral road connecting Bangalore-Hosure NH-4, Bangalore-Pune NH-4 and Bangalore-Mangalore NH 69 to provide easy and faster access to the centre of the city, a separate link road and elevated road will be provided".

All these are the decisions of Karnataka Government those days.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉದಾಸಿಯವರೇ ಏಕೆ ತರಾತುರಿಯಲ್ಲಿದ್ದೀರಿ? ಇದು ಹೇಗಾಗಿದೆ ಎಂದರೆ, "your children and my children are playing with our children".

ಶ್ರೀ ಸಿ.ಎಂ. ಉದಾಸಿ : ಮೊದಲನೆಯ ಟೌನ್‌ಶಿಪ್ ಆಗಬೇಕಾದಂಥಾದ್ದು ಬಿಡದಿಯ ಬಳಿ. ಹಾಗಾಗಿ ಬೆಂಗಳೂರಿನಿಂದ ಬಿಡದಿಯವರೆಗೆ ಭೂಮಿಯನ್ನು ತೆಗೆದುಕೊಳ್ಳುವುದು ಕೇವಲ ರಸ್ತೆಗಳಿಗಾಗಿ ಮಾತ್ರ. ಅಲ್ಲಿ ನಿವೇಶನಗಳನ್ನು ಮಾಡುವುದಾಗಲೀ, ಅಥವಾ ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುವುದಕ್ಕಾಗಲೀ ಅವಕಾಶವಿಲ್ಲ ಎನ್ನುವುದು ತಮ್ಮ ಗಮನದಲ್ಲಿರಲಿ ಎನ್ನುವ ಮಾತನ್ನು ನಾನು ಹೇಳಿದೆನೆಯೇ ಹೊರತು ತಾವು ದಯವಿಟ್ಟು ತಪ್ಪು ಅರ್ಥ ಮಾಡಿಕೊಳ್ಳಬಾರದು.

Sri R.V. Deshpande : According to the proposal, the Consortium had made provision of providing Corporate centre, Township No.1; commercial centre township No.2 near Bidadi; Heritage centre township No.3; Farming and marketing centre township No.4; Industrial centre township near Ramnagar; an Agriculture township No.6 between Mandya and Srirangapatna and an Eco-Tourism Centre Township No.7 near Sriranapatna. Considering the opinion of the Finance Department and also to make the project economically viable, the Government considered it profitable to have five townships leaving township No.(3) heritage centre Ramnagar and township No.(6) agriculture centre near Mandya. After that, the Finance Department agreed for five townships. What I said, the development of this townships should be done alongwith the construction of the express higyway. Alongwith the townships expressway should be developed. That is written. That might have been changed, but it has been written.

The Corporate Township, my friend, was not to come up in Bidadi. It was to come closer to the city. As per the original, before the framework agreement, the corporate township was to come closer to the city. I will read Empowered Committee's decision dated 6-4-1998:

> "The Chairman wanted to know as to what work is permitted in the green-belt. The representative of the Town Planning authority intimated that there will be no objection for the express highway to pass through the green-belt and also creation of park, but mentioned that no township could come in the green-belt area. Since the township No.1 proposed by the Consortium was coming in the green-belt area, it was suggested to shift the township location beyond the already identified green-belt zones".

NICE has explained that they have already made the study. So the first township was to come closer to the city. I have got the map to show. So, it was then shifted to Bidadi. First this was to come in city only.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (Interruptions) ನಮ್ಮನ್ನು ಏಕೆ ಇಟ್ಟುಕೊಂಡಿಲ್ಲ ಎಂದು ರಮೇಶ್ ಕುಮಾರ್‌ರವರು ಕೇಳುತ್ತಿದ್ದಾರೆ. ಅವರು ಆ Think Tank ನಲ್ಲಿ ಇರಲೇ ಇಲ್ಲವಲ್ಲಾ.

SRI R.V. DESHPANDE : On 13-9-95 then they thought why not we give land for peripheral road, about 5119.37 acres and 7 townships - 20,092 acres. Total about 26,000 acres of land was though to be given. This is the minutes of the HIgh Leel Committee meeting held on 13-9-95. Now let me come to the framework agreement. ನಮ್ಮ ಸ್ನೇಹಿತರಾದ ರಮೇಶ್ ಕುಮಾರ್‌ರವರು ಫ್ರೇಂವರ್ಕ್ ಅಗ್ರಿಮೆಂಟ್ ಬಗ್ಗೆ ತಮ್ಮದೇ ಆದ ಧಾಟಿಯಲ್ಲಿ ಮಾತನಾಡಿದರು. ಅವರು ಮಾತನಾಡುವ ಶೈಲಿಯಲ್ಲಿ ಆರ್ಟ್ ಇದೆ, ಲ್ಯಾಂಗ್ವೇಜ್ ಇದೆ, ಡೆಕೋರಂ ಇದೆ. ಆ ಶೈಲಿ ನಮ್ಮಲ್ಲಿ ಇಲ್ಲ. ನಾವು ಹಳ್ಳಿಯಿಂದ ಬಂದಂಥವರು. ಅವರೂ ಹಳ್ಳಿಯಿಂದ ಬಂದವರೇ. ಆದರೆ ನಾವು ಇನ್ನೂ ಹಳ್ಳಿಯಲ್ಲೇ ಉಳಿದಿದ್ದೇವೆ. ಭಾಷೆಯ ವಿಚಾರ ಬಂದಾಗ we cannot compete with Mr. Prakash or Ramesh Kumar. We have to condede. ಅವರು ಏನು ಹೇಳಿದರೆಂದರೆ, "framework agreement is fraud" in the history of Karnataka" ಎಂದು ಹೇಳಿದ್ದರು. Atrocious ಎಂದು ಹೇಳಿದರು. But the High Court and Supremement Court have put a seal on that saying that is not a 'fraud'. It is not a misrepresentation. It is legally valid. ಹಾಗಾಗಿ, ಫ್ರೇಂವರ್ಕ್ ಅಗ್ರಿಮೆಂಟ್ ವಿಚಾರದಲ್ಲಿ ನಾನು ಇನ್ನೂ ಮುಂದೆ ಹೋಗಲಿಕ್ಕೆ ಇಷ್ಟಪಡುವುದಿಲ್ಲ. Unfortunately I am a Lawyer so I have to respect.

SRI K.R. RAMESH KUMAR : There is word of diference between "fraud" and "atrocious".

ಫ್ರಾಡ್ ಎಂದರೆ ಗೊತ್ತಿದ್ದೂ ತಪ್ಪು ಮಾಡುವುದು. ನನ್ನ ಪ್ರಕಾರ, ಒಂದು ಅಗ್ರಿಮೆಂಟ್ ಎಂದರೆ ಎರಡು ಪಾರ್ಟೀಸ್‌ಗಳು ಇರುವಾಗ, ಎರಡೂ ಪಾರ್ಟಿಯ ಹಿತ ಕಾಪಾಡತಕ್ಕಂಥಾದ್ದು ಬೈಲ್ಯಾಟರೆಲ್ ಅಗ್ರಿಮೆಂಟ್. Bilateral agreement is a mutual agreement favourable to both the parties. ಏಕೆ ನಾನು ಅಟ್ರಾಷಿಯಸ್ ಎನ್ನುವ ಪದವನ್ನು ಉಪಯೋಗ ಮಾಡಿದೆ ಎಂದರೆ ರಾಜ್ಯಸರ್ಕಾರ ಎನ್ನತಕ್ಕಂಥಾದ್ದು ಸಂಪೂರ್ಣ ಶರಣಾಗತರಾಗಿ ಒಂದು ಕಂಪನಿಯ ಪರವಾಗಿ ರಾಜ್ಯದ ಹಿತವನ್ನು ಕಡೆಗಣಿಸಿ ಏಕಪಕ್ಷೀಯವಾಗಿ ಮಾಡಿರತಕ್ಕಂಥ ಅಗ್ರಿಮೆಂಟ್ ಎನ್ನುವ ಅಭಿಪ್ರಾಯದವನಾಗಿ ಅಟ್ರಾಷಿಯಸ್ ಎನ್ನುವ ಪದವನ್ನು ಉಪಯೋಗಿಸಿದೆ. ಫ್ರಾಡ್ ಎನ್ನುವ ಪದವನ್ನು ನಾನು ಉಪಯೋಗ ಮಾಡಲಿಲ್ಲ. ಫ್ರಾಡ್ ಎಂದು ಹೇಳಬೇಕಾದರೆ, I have got to prove. ಆದ್ದರಿಂದ, ಫ್ರಾಡ್ ಅಲ್ಲ, ಅದು ಫ್ರಾಡುಲೆಂಟ್ ಇಂಟೆನ್‌ಷನ್ ಆಗುತ್ತದೆ.

ಶ್ರೀ ಸಿ.ಎಂ. ಉದಾಸಿ : ಫ್ರೇಂ ವರ್ಕ್ ಅಗ್ರಿಮೆಂಟ್‌ನಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿದೆ ಎನ್ನುವ ಮಾತುಗಳನ್ನು ಹೇಳಬೇಕಾದಾಗ, ತಮಗೆ ಗೊತ್ತಿರುವ ಹಾಗೆ ತಾವು ವೋಲ್ವೋದವರಿಗೆ ಕೊಟ್ಟಿರುವ ಭೂಮಿಯ ವಿಚಾರದಲ್ಲಾಗಲೀ, ಟೊಯೋಟೋದವರಿಗೆ ಕೊಟ್ಟಿರತಕ್ಕಂಥಾದರಲ್ಲಾಗಲೀ, ಗ್ಲೋಬಲ್ ಇನ್‌ವೆಸ್ಟರ್‌ಗಳನ್ನು ಕರೆದು ಕೊಟ್ಟಿರುವಂಥ ಅಗ್ರಿಮೆಂಟ್‌ಗಳಲ್ಲಿರುವಂಥ ಕಂಡೀಷನ್‌ಗಳಿಗೂ, ಇದರಲ್ಲಿರುವ ಕಂಡೀಷನ್‌ಗಳಿಗೂ ಏನು ವ್ಯತ್ಯಾಸವಿತ್ತು ಎನ್ನುವುದನ್ನು ಬೈಫರ್ಕೇಟ್ ಮಾಡಿ ಹೇಳಬೇಕಾಗುತ್ತದೆ.

SRI R.V. DESHPANDE : I had the honour and privilege to be the Minister of Industries for about a decade except for the period January 1998 to 1715 October 1999. Volvo ಬಂತು, Telco ಬಂತು, Telcon ಬಂತು. I said lands were given. ನೀವು ಕೇಳುವುದಕ್ಕೆ ಮುಂಚೆ ನಾನೇ ಹೇಳಿದೆ. ನಾನು ಸರ್ಕಾರಕ್ಕೆ ಸಹಾಯ ಮಾಡುವುದಕ್ಕೋಸ್ಕರ ಹೇಳುತ್ತಿದ್ದೇನೆಯೇ ವಿನಃ ಸರ್ಕಾರಕ್ಕೇನೂ ಮುಜುಗರ ತರಲಿಕ್ಕೆ ಹೇಳುತ್ತಿಲ್ಲ. ನಾನು ಏತಕ್ಕೆ ಹೇಳುತ್ತೇನೆಂದರೆ, ಮಾನ್ಯ ರಮೇಶ್‌ಕುಮಾರ್‌ರವರು fraud and atrocious ಎಂದು ಹೇಳಿದರು. I am talking of Supreme Court now. In the Supreme Court, the fraud plea had been withdrawn.

I will read :

> "It appears that the main contention of the Writ Petitioners of Mr. J.C. Madhuswamy and others before the High Court, was that F.W.A. was vacated as a result of fraud and misrepresentation. Presumably, these contention was urged in order to get over the bar of res judicata. Answering from the judgement "When the matter was argued before us although Mr. Diwan addressed some arguments fraud, he quickly abandoned them and explicitly gave it up considering that this was the main thrust of the state's argument before the High court and been expressly given up before us we could have dismissed his appeals on the narrow point alone".

The plea which was taken before High court and Supreme Court on fraud and misrepresentation, that plea was withdrawn by the petitioners in the Supreme court. The Supreme Court said this case is likely to be dismissed on fraud. Further discuss ಮಾಡುವ ಅವಶ್ಯಕತೆ ಇಲ್ಲ ಅಂತ

ಪುನಃ ನಾನು ಇಲ್ಲಿಗೆ ಬಂದು fraud ಆಗಿದೆ, misrepresentation ಆಗಿದೆ ಎಂದು ಹೇಳಬಹುದು. You have got a right. ದೇಶದಲ್ಲಿ everybody has a right and everybody can speak.

What is framework agreement? Framework agreement 1997 ನಲ್ಲಿ ಆಯಿತು. ಇದನ್ನು 1997ನೇ ಇಸವಿಯಲ್ಲಿ ಜೆ.ಹೆಚ್. ಪಟೇಲ್‌ರ ಸರ್ಕಾರ ಮಾಡಿದೆಯೇ? ಎಲ್ಲಾ ಬನ್ನಿ ಎಂದು ಹೇಳಿ framework agreement ಮಾಡೋಣ ಎಂದು ಜೆ.ಹೆಚ್. ಪಟೇಲರು seal ಹಾಕಿದರೋ? ಅವರು ಹಾಗೆ seal ಹಾಕಿಲ್ಲವಲ್ಲಾ. ಹಾಕಿದ್ದರೆ ಹೇಳಿ, ಶ್ರೀಮಾನ್ ಉದಾಸಿಯವರೇ. Framework agreement was like child in womb. 1995 ನಿಂದ MOU ಆಯಿತಲ್ಲಾ, cabinet decision ಆಗಿ, cabinet sub-committee decision ಆಗಿ, High power committee decision ಆಗಿ, Empowered committee decision ಆಗಿ, Core committee decisions ಏನಾದವು ಅದರ baby ಯೇ ಈ framework agreement. If you want to say if the framework agreement is bad in law, the entire proceedings from that date are vitiated. ಮಾನ್ಯ ಜೆ.ಹೆಚ್. ಪಟೇಲರ ಮೇಲೆ ಹೀಗೆ ಅಪವಾದ ಮಾಡಿಕೊಂಡು ಹೋಗುವುದಕ್ಕಾಗುವುದಿಲ್ಲ. ಆ ಪರಮಾತ್ಮನ ಬಗ್ಗೆ ನಾವೇನಾದರೂ ಮಾತನಾಡಿದರೆ ದೇವರು ಕ್ಷಮೆ ಮಾಡುವುದಿಲ್ಲ. We have to understand. ಇದೇನಾಗಿದೆ, it is a continuing offence. ನಮ್ಮ ರೆಡ್ಡಿ ಸಾಹೇಬರು, stamp duty concession ಕೊಟ್ಟಿರಿ; conversion ಕೊಟ್ಟಿರಿ, ICICI Bank ಗೆ comfort letter ಕೊಟ್ಟಿರಿ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ಉದಾಸಿಯವರೆ, How this was given? ಇದನ್ನು ಎಸ್.ಎಂ. ಕೃಷ್ಣರವರು ಕೊಟ್ಟರೇ? ಮಾನ್ಯ ದೇವೇಗೌಡರು ಕೊಟ್ಟರೇ? This was given because of the framework agreement because of the decision taken in 1997. I will just read framework agreement:

Art.12. Taxes : "Tax concessions Reduction and elimination of State and local taxes". Detail ಓದಬೇಕೆಂದರೆ ಓದುತ್ತೇನೆ. Government of Karnataka ದ ಎಷ್ಟೆಷ್ಟು tax concession ಇವೆ, ಅವೆಲ್ಲಾ concessions ಕೊಡಬೇಕೆಂದು framework agreement ನಲ್ಲಿದೆ. And there is a judgment of Supreme Court again. Supreme Court says that: "Governments are continuing ones, in the matter of Governance of the State or in the matter of execution of decision taken by the previous Govt. on the basis of consensus arrived which does not involve any political philosophy, the succeeding Govt. must be held duty bound to continue and carry out on the unfinished job

rather than putting a stop to the same". The Supreme Court has said Governments are continuing Government. ನಿಮ್ಮ ನಮ್ಮ political Philosophy change ಆದರೆ ನಿಮ್ಮ ಕಡೆ ನಿರ್ಣಯಗಳನ್ನು change ಮಾಡಿ ಈಗ. ಮುರುಳಿ ಮನೋಹರ ಜೋಷಿಯವರು ಏನೋ syllabus ತಂದರು. ನಾವು ಬೇಡ ಅಂದೆವು. It is o.k. It is a critical Philosophy. ಆದರೆ Develoment ವಿಚಾರದಲ್ಲಿ ಮಾನ್ಯ ದೇವೇಗೌಡರು ಏನು ಮಾಡಿದ್ದಾರೆ, J.H. Patel has to respect. ಮಾನ್ಯ ಜೆ.ಹೆಚ್. ಪಟೇಲರು ಏನು ಮಾಡಿದ್ದಾರೆ, Krishna has to respect. ಮಾನ್ಯ ಕೃಷ್ಣರವರು ಏನು ಮಾಡಿದ್ದಾರೆ Dharm Singh has to respect. You have to respect. ನೀವು ಇವತ್ತು ಒಂದು Project clear ಮಾಡುತ್ತೀರಿ. ಸಿಂಗಾಪುರ್‌ಗೆ ಹೋಗಿದ್ದಿರಿ. ದುಬಾಯಿಗೆ ಹೋಗಿದ್ದಿರಿ ಒಂದು ಒಳ್ಳೆಯ intention ನಿಂದ ನಾವು ಮಾಡುತ್ತೀರಿ. ನಾಳೆ ಇನ್ನೊಬ್ಬರು ಮುಖ್ಯಮಂತ್ರಿ ಬಂದು cancel ಮಾಡಿದರೆ what happens? Supreme Court said 'no'. So, framework agreement ನಲ್ಲಿ ಏನು tax concession ಕೊಟ್ಟಿದ್ದಾರೆ, that is because you have agreed in 1997. Krishna did not agree in 2001,2002, 2003. this is with regard to tax. Let me go to other things. Infrastruture stamp duty. We have infrstructure policy. For the infrstructure corridor project to be qualified Central Income tax has to be exempted, all exemptions and holidays to be given from ability for payment of taxes duties and sens to the extent permissible under the Act. ಇದಕ್ಕೆ ಒಂದಕ್ಕಲ್ಲ. Airport ಗೂ ಕೊಟ್ಟಿದ್ದೇವೆ. ನಾವು ಹೇಳುತ್ತೇವೆ ಮಾನ್ಯ ಮುಖ್ಯಮಂತ್ರಿಗಳೇ, ಈ ಸದನದಲ್ಲಿ Airport project ಗೂ ಸಹ ವಿಶ್ವಾಸ ತೆಗೆದುಕೊಳ್ಳಿ. Airport ಒಳ್ಳೆಯ project. ಅಲ್ಲಿಗೂ ಸಹ ಬಹಳ concession ಕೊಟ್ಟಿದ್ದೇವೆ, land lease ಮೇಲೆ ಕೊಟ್ಟಿದ್ದೇವೆ, 4ವರ್ಷ ನಿಮಗೆ ಹಣ ಕೊಡುವುದಿಲ್ಲ. 4 ವರ್ಷಕ್ಕೆ 3% ಬರುತ್ತದೆ. Rs. 350 crores subordinate debt without interest ಹಣ ಕೊಟ್ಟಿದ್ದೇವೆ. ಅದು ಎಲ್ಲಾ ಬ್ಯಾಂಕ್ ಸಾಲ ತುಂಬಿದ ಮೇಲೆ ನಿಮಗೆ ವಾಪಸ್ಸು ಬರುತ್ತದೆ. ಇವೆಲ್ಲಾ ಒಳ್ಳೆಯ ಕೆಲಸ ಮಾಡಿದಾಗ ಮುಂದೆ ಇನ್ನೆರಡು ವರ್ಷಗಳಲ್ಲಿ Airport project ನಲ್ಲಿ ಕುಮಾರಸ್ವಾಮಿಯವರು ಹೀಗೆ ಮಾಡಿದರೆಂದು ಮತ್ತೊಬ್ಬರು raise ಮಾಡಬಹುದು. You have to explain. ಹಾಗಾಗಿ concessions ಎಲ್ಲವನ್ನೂ infrastructure policy ಪ್ರಕಾರ ಕೊಟ್ಟರು. Infrastruture ಎಂದರೇನು ಎನ್ನುವುದು ಜನಗಳಿಗೆ ಗೊತ್ತಾಗಲಿ. Infrastructure policy ಅನ್ನು ಮಾನ್ಯ ಎಸ್.ಎಂ. ಕೃಷ್ಣರವರು ತಂದರೋ, ಅಥವಾ ಮಾನ್ಯ ದೇವೇಗೌಡರು ತಂದರೋ ಅಥವಾ ಜೆ.ಹೆಚ್. ಪಟೇಲರು ತಂದರೋ? It was brought by Government. ಅಷ್ಟೇ ಅಲ್ಲ, Government of India ಕ್ಕೆ recommend ಮಾಡಿ ಎಂದು ಹೇಳಿದರು. ICICI Bank ಗೆ comfort letter ಏಕೆ ಕೊಟ್ಟರು? Creation

of security: For the purpose of financing any component of the infrastructure project or any plan hereunder, the company may assign or create security over its rights and interest in respect of any component of infrstructure project or asset thereof. This has been upheld by the High Court and also Supreme Court. ICICI comfortable letter ಕೊಟ್ಟಿದ್ದು ತಪ್ಪು ಎಂದು ಹೇಳಿದ್ದಾರೆಯೇ? ಆದರೆ High Court, Supreme Court, no ಎಂದು ಹೇಳಿದರು. ಇದು framework agreement ಪ್ರಕಾರ comfort letter ಕೊಟ್ಟಿದ್ದಾರೆಂದು ಹೇಳಿದರು. ಫ್ರೇಮ್ ವರ್ಕ್ ಪ್ರಕಾರ ಕನ್ಸೆಷನ್ಸ್ ಕೊಟ್ಟಿದ್ದೇವೆ. ಹಾಗೆಯೇ ಫ್ರೇಮ್ ವರ್ಕ್ ಅಗ್ರಿಮೆಂಟ್ ಪ್ರಕಾರ ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ ಎಂದು ಟ್ರೀಟ್ ಮಾಡಿದ್ದೇವೆ. So, how the question of blaming one government or the other government comes? And Government being continuing always, if the Government don't respect, ಅದನ್ನು ಗೌರ್ನಮೆಂಟ್ ಎಂದು ಹೇಳುವುದಿಲ್ಲ. Politically, the present Chief Minister belongs to JD(S). But you are recognized as JD(S) here. You are recognized as the Leader of the House. The Chief Minster of Karnataka state. Constitution does not say whethr it is JD(S) Chief Minister or congress Chief Minister. ಇನ್ನು ಲ್ಯಾಂಡ್ ಕೊಡತಕ್ಕಂಥ ವಿಚಾರದ ಬಗ್ಗೆ ಹೇಳುವುದಾದರೆ, ಇದರಲ್ಲಿ ಸರ್ಕಾರಿ ಲ್ಯಾಂಡ್ 1956 ಎಕರೆ ಮತ್ತು ಖಾಸಗಿ ಜಮೀನು 13,237 ಎಕರೆ ಕೊಡುವುದಕ್ಕೆ ಹೇಳಿದ್ದಾರೆ. ಅಂದರೆ ಒಟ್ಟು 20,193 ಎಕರೆ ಜಮೀನು ಇತ್ತು. ಇದರ ಬಗ್ಗೆ ಯಾರದ್ದೂ ಕೂಡ ಡಿಸ್‌ಪ್ಯೂಟ್ ಇಲ್ಲ. Everybody agrees. ಆದರೆ, ಇದಕ್ಕಿಂತ ಮುಂಚೆ ಪ್ರಾಜೆಕ್ಟ್ ರಿಪೋರ್ಟ್ ಬಗ್ಗೆ ನಾನು ಹೇಳಿದ. ಹಾಗೆ 1756 acres of land was reduced, when the framework agreement was signed 1756 ಎಕರೆ ಜಮೀನನ್ನು ಕಡಿಮೆ ಮಾಡಿ ಫ್ರೇಮ್ ವರ್ಕ್ ಅಗ್ರಿಮೆಂಟ್‌ಗೆ ಸಹಿ ಮಾಡಲಾಗಿದೆ. ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಮತ್ತೆ ಲ್ಯಾಂಡ್ ಅಕ್ವಿಜಿಷನ್ ವಿಚಾರದ ಬಗ್ಗೆ ಬಹಳಷ್ಟು ಚರ್ಚೆ ಕೂಡ ಆಗಿದೆ. ಮತ್ತೆ ಅಲಿಗೇಶನ್ ಕೂಡ ಆಗಿವೆ. ಹಾಗೆಯೇ ಕೌಂಟರ್ ಅಲಿಗೇಶನ್ ಆಗಿವೆ. ಮತ್ತೆ ಮನೆಯೊಳಗೆ ಮತ್ತು ಹೊರಗೆ ಕೂಡ ಅಲಿಗೇಶನ್ ಆಗಿವೆ. ದೇಶಪಾಂಡೆ ಈ ಪ್ರಾಜೆಕ್ಟ್‌ನಲ್ಲಿ ಲೂಟಿ ಮಾಡಿದ್ದಾನೆಂಬ ಭಾವನೆ ಬಹಳಷ್ಟು ಮನುಷ್ಯರಲ್ಲಿ ಬಂದಿದೆ. ಮತ್ತೆ ಏಕೆ ಪಾಪ ದೇಶಪಾಂಡೆಯವರ ಬೆನ್ನನ್ನೇ ಹತ್ತುತ್ತಿದ್ದಾರೆ ಎನ್ನತಕ್ಕಂಥ ಅಭಿಪ್ರಾಯ ಕೆಲವರಲ್ಲಿ ಬಂದಿದೆ. ಆದ್ದರಿಂದ ಇದರ ಗುಟ್ಟೇನು ಎನ್ನತಕ್ಕಂಥದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ನಾನು ಹೇಳುತ್ತಿದ್ದೆ But, you should tell, how much land was acquired, when it was acquired, who acquired that land and why it was acquired? When the project was planned? ಈ ವಿಷಯ ಸರ್ಕಾರವೇ ಹೇಳಬೇಕಾಗುತ್ತದೆ. ಮತ್ತೆ ಲ್ಯಾಂಡ್

ಅಕ್ವಿಜೆಷನ್ ಬಗ್ಗೆ ಮುಖ್ಯವಾಗಿ ಹೇಳಬೇಕಾದರೆ how KIADB came into picture? ಕೆಐಡಿಬಿ ಸಂಸ್ಥೆಯವರು ನೈಸ್ ಕಂಪನಿಯವರ ಮನೆಗೆ ಹೋಗಿ ನಾವು ಲ್ಯಾಂಡ್ ಅಕ್ವಿಜೆಷನ್ ಮಾಡುತ್ತೇವೆ ನಿಮಗೆ ಕೊಡುತ್ತೇವೆಂದು ಹೇಳಿಲ್ಲ. Again it is the decision of the High Power Committee and the decision of the Cabinet. KIADB is going to be the agency to acquire land. What was the procedure? Government land ಇದೆ. You check up it. I request the Revenue Minister to please verify it. Promoters and Revenue department have to identify these lands. You used to transfer those lands to PWD. PWD used to transfer those lands to KIADB. KIADB was to hand over those lands to promoters. If it was a private land, PWD was the department which is to recommend, sometimes, I agree, these promoters have to have permission. But KIADB ಗೆ ಬಂದಾಗ it has go to the Board. In the KIADB Board how many IAS officers are sitting and they used to recommend to the State Government. And from the Section Officer to the Principal Secretary, Industries, there are another 2-3 IAS officers were sitting there. And they were recommending. 28(1), 3(1) or 28(4), whetever it was, issued. It is not that. ನನಗೆ ಬೇಕೆಂದು ನಾನು ಮಾಡುವುದು ಮತ್ತೆ ನಿಮಗೆ ಬೇಕೆಂದು ನೀವು ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಶ್ರೀರಾಮರೆಡ್ಡಿಯವರಿಗೆ ನಾನು ಥ್ಯಾಂಕ್ಸ್ ಹೇಳಬೇಕಾಗಿದೆ. ಏಕೆಂದರೆ ಇದರ ಬಗ್ಗೆ ನಿಲುವಳಿ ಸೂಚನೆ ಮೂವ್ ಮಾಡಿ ಇದರ ಬಗ್ಗೆ ಮಾತನಾಡುವುದಕ್ಕೆ ಒಂದು ಅವಕಾಶ ಕೊಟ್ಟಿದ್ದಾರೆ. ಅಂದರೆ, ಇದರ ಬಗ್ಗೆ ಏನು ಸತ್ಯ ಇದೆ ಅದನ್ನು ತಿಳಿದಷ್ಟು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ, ನಾನು ಈಗಾಗಲೇ ಸ್ಪಷ್ಟವಾಗಿ ಒಂದು ವಿಷಯ ಹೇಳಿದ್ದೇನೆ. ನಮ್ಮ ಪಾರ್ಟಿ ಸ್ಟ್ಯಾಂಡ್ ಮತ್ತು ನಮ್ಮ ನಾಯಕರ ನಿಲುವು ಏನೆಂಬುದನ್ನು ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡುವಂಥ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. We are not here for Nandi and we are not here for any promoter. ಆದರೆ, ನಮಗೆ ಸರ್ಕಾರದ ಸ್ಟ್ಯಾಂಡ್ ಏನೆಂಬುದು ಗೊತ್ತಾಗಬೇಕು. ಆದರೆ, ಒಂದಿಷ್ಟು ನಮಗೆ ಗೊತ್ತಿರುವ ಪ್ರಕಾರ ಅಂದರೆ, from the newspapers, you are a divided house. JD(S) feels. They are just paper reporters. I am not saying that. Whatever it may be. I read from the paper ಆದರೆ, ಆ ಪ್ರಾಜೆಕ್ಟ್‌ನ್ನು ಟೇಕ್ ಓವರ್ ಮಾಡಬೇಕಾಗಿರತಕ್ಕಂಥದ್ದು ನಿಮಗೆ ಆಗಬೇಕಾಗಿದೆ. ಆದರೆ, ಪ್ರಾಜೆಕ್ಟ್‌ನ್ನು ಟೇಕ್ ಓವರ್ ಮಾಡುವುದು ಬೇಡ, ಇನ್‌ವೆಸ್ಟ್‌ರ್ಸ್‌ಗೆ ಲಾಸ್ ಆಗುತ್ತದೆ. ಆದರೆ, ಪ್ರಾಜೆಕ್ಟ್‌ನಲ್ಲಿ ಹೆಚ್ಚಿಗೆ ಲ್ಯಾಂಡ್‌ನ್ನು ವಾಪಸ್ಸು

ತೆಗೆದುಕೊಂಡು ರೈತರಿಗೆ ಕೊಡೋಣ ಎನ್ನತಕ್ಕಂಥದ್ದು ಬಿಜೆಪಿ ಪಕ್ಷದವರ ಸ್ಟ್ಯಾಂಡ್ ಆಗಿದೆ. ನಾವು ಇದರ ಬಗ್ಗೆ ಎಷ್ಟೇ ಬೆಳಕು ಚೆಲ್ಲಿದರೂ ಕೂಡ ಇದರ ಬಗ್ಗೆ ತಮ್ಮ ಕಡೆಯಿಂದ ಕ್ಲಾರಿಟಿ ಬರಬೇಕು. What is Government's stand? Government has to tell what is your stand? You want to take over the project. O.K. You bring the Bill. Let us see. We will examine on merit. Suppose I know excess land, we have to know which are those excess lands. ಕೊಡಿ ಅಥವಾ ತೆಗೆದುಕೊಳ್ಳಿ. Who has come in the way? ನಾವ್ಯಾರೂ ಇದಕ್ಕೆ ಅಡ್ಡ ಬಂದಿಲ್ಲ. ಹಾಗಾಗಿ, These things are to be done in the interest of the state. ರಾಜ್ಯ ಮತ್ತು ರಾಜ್ಯದ ಜನರ ಹಾಗೂ ರೈತರ ಹಿತದೃಷ್ಟಿಯಿಂದ ತಾವು ಯಾವುದೇ ಒಂದು ಕ್ರಮ ಅಥವಾ ಯಾವುದೇ ನಿರ್ಣಯ ತೆಗೆದುಕೊಂಡರೆ I think, our party will support. ಆದರೆ, ಇದರಿಂದ ನಮ್ಮ ರಾಜ್ಯದ ಗೌರವಕ್ಕೆ ಮತ್ತು ರಾಜ್ಯದ ಜನ ಹಿತಕ್ಕೆ ಚ್ಯುತಿ ಆಗಬಾರದು. ಈ ವಿಷಯದ ಬಗ್ಗೆ ಸದನದಲ್ಲಿ ಇಷ್ಟು ಮಾತ್ರ ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಮಾನ್ಯ ಯಡಿಯೂರಪ್ಪನವರಿಗೆ ನಾನು ಮುಖ್ಯವಾಗಿ ಹೇಳುವುದೇನೆಂದರೆ, ಲ್ಯಾಂಡ್ ಆ್ಯಕ್ಟ್ ಕೆಳಗೆ ಇವತ್ತಿನ ದಿವಸ ಲ್ಯಾಂಡ್ ಅಕ್ವಿಜೇಷನ್ ಮಾಡುತ್ತೇವೆ. ಲ್ಯಾಂಡ್ ಆ್ಯಕ್ಟ್ 1894ನಲ್ಲಿ ಆಯಿತು. and KIADB Act. Both are Central Acts. ಸ್ಟೇಟ್ ಇದ್ದರೂ ಸಹ ಕೆಐಎಡಿಬಿ ಗೆ ಸ್ಪೆಷಲ್ ಅಸೆಂಟ್ ಆಗಿದೆ. ಈ ಆ್ಯಕ್ಟ್‌ನಲ್ಲಿ ಏನು ಪ್ರಾವಿಜನ್ ಇದೆ ಎಂದರೆ, ಇದನ್ನು ಮಾನ್ಯ ಮಾಧುಸ್ವಾಮಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದರು. He did not elaborate it. ಸೆಕ್ಷನ್ 11(ಎ) ಏನು ಹೇಳುತ್ತದೆಂದರೆ "Period within which awards shall be made. The collector shall make an award under Section 11 within a period of two years, from the date of publication of the declaration and if no award is made, within that period, the entire proceedings of the acquisition of the land lapse.Under Section 11(a), the proceedings vitiate. ಆದರೆ ಕೆಐಎಡಿಬಿ Act ನಲ್ಲಿ ಆ ಪ್ರಾವಿಜನ್ ಇಲ್ಲ. I think Industries Minister should move an amendment for that. ನಾವು ಮಾಡಿದ್ದೆವು. As a Industries Minister I had sent instructions. ಏಕೆಂದರೆ ಅದು ಬಹಳ ಕಷ್ಟವಾಗುತ್ತದೆ. ಲ್ಯಾಂಡ್ ಅಕ್ವಿಜೇಷನ್ ಮಾಡಿ 10 ವರ್ಷಗಳಾದರೂ ನಾವು ಏನೂ ಮಾಡುವುದಿಲ್ಲ. ಇವತ್ತಿನ ದಿವಸ ಲ್ಯಾಂಡ್ ಅಕ್ವೈರ್ ಮಾಡತಕ್ಕಂಥದ್ದು ಡಿಫರೆಂಟ್ ಮತ್ತೆ ಲ್ಯಾಂಡ್ ನೋಟಿಫೈ ಮಾಡತಕ್ಕಂಥದ್ದು ಡಿಫರೆಂಟ್. ಆದರೆ, ಲ್ಯಾಂಡ್ ನೋಟಿಫೈ ಮಾಡಿ 10 ವರ್ಷಗಳವರೆಗೆ ಹಾಗೆ ಇಡುವುದಕ್ಕೆ ಆಗುವುದಿಲ್ಲ. 1997ರಲ್ಲಿ ನಾವು ಲ್ಯಾಂಡ್ ಅನ್ನು ನೋಟಿಫೈ ಮಾಡಿ 10 ವರ್ಷಗಳವರೆಗೆ ಅದನ್ನು ಹಾಗೆ ಇಟ್ಟರೆ ಲ್ಯಾಂಡ್ ನೋಟಿಫೈ ಆಗಿರತಕ್ಕಂಥವನ್ನು ಅದನ್ನು ಮಾರಾಟ ಮಾಡುವುದಕ್ಕೆ ಬರುವುದಿಲ್ಲ. ಆತ ಅದನ್ನು ಏನು ಮಾಡುವುದಕ್ಕೂ ಸಹ ಬರುವುದಿಲ್ಲ. So, we have to follow the Act that a provision will have to be made that, ಒಂದು ವರ್ಷವೋ

ಅಥವಾ ಎರಡು ವರ್ಷವೋ whatever it is, what the Government thinks right. ಆ ಪ್ರಕಾರ you have to do. ಮನಸ್ಸು ಬಂದ ಪ್ರಕಾರ ನಾವು ಮಾಡಿ 10 ವರ್ಷಗಳವರೆಗೆ ನಾವು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. I had sent a note. ಇವತ್ತು ಆ ಫೈಲ್ ನಿಮಗೆ ಸಿಗುತ್ತದೆ. I had sent a note to Chief Secretary and Industries Secretary to immediately move this amendment.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ದೇಶಪಾಂಡೆಯವರು ಮಾತನಾಡುತ್ತಿದ್ದಾರೆ. We are discusssing important subjects in the House. ಆದರೆ, ಇಲ್ಲಿ ಚೀಫ್ ಸೆಕ್ರೆಟರಿ ಇಲ್ಲ ಮತ್ತೆ ಸಂಬಂಧಪಟ್ಟಂಥ ಪ್ರಧಾನ ಕಾರ್ಯದರ್ಶಿ ಇಲ್ಲ. ಏಕೆ ಈ ರೀತಿಯಾಗಿದೆ? I can't understand what happened to this Government. ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಹೌಸ್‌ನಲ್ಲಿದ್ದಾಗ ಮತ್ತು ಒಂದು ಮಹತ್ವವಾದಂಥ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಸಂಬಂಧಪಟ್ಟಂಥ ಪ್ರಧಾನ ಕಾರ್ಯದರ್ಶಿ ಮತ್ತು ಮುಖ್ಯ ಕಾರ್ಯದರ್ಶಿಯವರು ಇಲ್ಲಿ ಇಲ್ಲ. ಮೊನ್ನೆ ದಿವಸ ಇಲ್ಲಿ ಚರ್ಚೆ ನಡೆಯುತ್ತಿದೆ. ಆದರೆ ಮುಖ್ಯ ಕಾರ್ಯದರ್ಶಿಯವರು ಆ ಸಂದರ್ಭದಲ್ಲಿ ಮೂರನೇ ಮಹಡಿಯಲ್ಲಿ ಖೇಣಿರವರ ಜೊತೆ ಸಮಾಲೋಚನೆ ಮಾಡುತ್ತಿದ್ದರು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ರಿಕ್ವೆಸ್ಟ್ ಮಾಡುವುದೇನೆಂದರೆ, ನಿಮ್ಮ ಆಫೀಸರ್‌ಗಳಿಗೆ ತಾವು ಡೈರೆಕ್ಟ್ ಮಾಡಬೇಕು. ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಎಲ್ಲಾ ಅಧಿಕಾರಿಗಳು ಕೂಡ ಇಲ್ಲಿ ಇರಬೇಕಾಗುತ್ತದೆ. ಮತ್ತೆ ಇಲ್ಲಿ ಏನು ಹೇಳುತ್ತಾರೆ ಎಂಬುದನ್ನು ಕೇಳಬೇಕಾಗುತ್ತದೆ. This is very unfortunate.- ಈ ರೀತಿಯಾಗುತ್ತದೆಂದು ನಾವು ಹೇಳುತ್ತಿದ್ದೇವೆ. ನೀವೂ ಕೂಡ ಪದೇ ಪದೇ ಹೇಳುತ್ತಿದ್ದೇನೆಂದು ಹೇಳುತ್ತಿದ್ದೀರಿ. ಆದರೆ ನಿಮ್ಮ ಆದೇಶ ಪಾಲನೆ ಆಗುತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಮೈನ್ ಗ್ರಿವೆನ್ಸ್ ಇರತಕ್ಕಂಥದ್ದು ಲ್ಯಾಂಡ್ ಅಕ್ವಿಜೆಷನ್ ವಿಚಾರದಲ್ಲೆಂದು ಕಾಣುತ್ತದೆ. Large extents of land acquire ಮಾಡಿದ್ದೀರಿ ಎಂಬುದು ಮತ್ತೆ ಮನಸ್ಸಿಗೆ ಬಂದ ಹಾಗೆ ಡಿ–ನೋಟಿಫೈ ಮಾಡಿದ್ದೀರೆಂದು ಹೇಳಿದ್ದೀರಿ. Only one allegation could be true. ಮಾನ್ಯ ವಾಟಾಳ್‌ನಾಗರಾಜ್‌ರವರೆ, ಒಂದೇ ಒಂದು ಸತ್ಯ ಇರಬಹುದು. ಲ್ಯಾಂಡ್ ಅಕ್ವೈರ್ ಮಾಡಿದರೆ ರೈತರು ಬೇಜಾರು ಮಾಡಿಕೊಳ್ಳುತ್ತಾರೆ. ಲ್ಯಾಂಡ್ ಡಿ–ನೋಟಿಫೈ ಮಾಡಿದರೆ ಪ್ರಮೋಟರ್ ಬೇಜಾರು ಮಾಡಿಕೊಳ್ಳುತ್ತಾನೆ. ಆದರೆ ಎರಡೂ ಮಾಡುವುದಕ್ಕೆ ಹೇಗೆ ಸಾಧ್ಯ? can you please a person? ಒಂದು ಕಡೆ ಲ್ಯಾಂಡ್ ಡಿ–ನೋಟಿಫೈ ಮಾಡುವುದು, ಒಂದು ಕಡೆ ಅಕ್ವೈರ್ ಮಾಡುವುದು It cannot happen. ಡೀನೋಟಿಫೈ ಮಾಡಿದರೆ ಸಂಬಂಧಪಟ್ಟಂಥ ಪ್ರಮೋಟರ್ ನಿಮಗೆ ಬಯ್ಯುತ್ತಾನೆ. ಅಂದರೆ, ಮಿನಿಸ್ಟರ್ ಲೂಟಿ ಹೊಡೆದುಕೊಂಡ ಎಂದು ಹೇಳುತ್ತಾನೆ. ಮತ್ತೆ ನೋಟಿಫೈ ಮಾಡಿದರೆ

ಲ್ಯಾಂಡ್ ಮಾಲೀಕ ಏನು ಆತ ಮನಸ್ಸಿಗೆ ಬಂದಂತೆ ಮಾಡುತ್ತಾನೆಂದು ಹೇಳುತ್ತಾನೆ. ಎರಡೂ ಮಾಡಿದರೆ what are you doing? So, one has to know what are you doing. Both things cannot go hand in hand. ಅಲಿಗೇಶನ್ ಮಾಡುವಾಗ we should be careful. ಇಲ್ಲಿ ಮುಖ್ಯವಾಗಿ ಲ್ಯಾಂಡ್ ವಿಚಾರದ ಬಗ್ಗೆ ಚರ್ಚೆಯಾಗಿದೆ. ದಿನಾಂಕ 14-10-1998 ರಲ್ಲಿ ಕೆಐಎಡಿಬಿ ಜೊತೆ ಒಂದು ಅಗ್ರಿಮೆಂಟ್ ಆಗಿದೆ. ಅಗ್ರಿಮೆಂಟ್ ಆದಂಥ ಸಂದರ್ಭದಲ್ಲಿ ನಾನು ಮಿನಿಸ್ಟರ್ ಅಲ್ಲವೆಂದು I am not going to run away. Just I was not a Minister. ಆದರೆ, ಆ ಸಂದರ್ಭದಲ್ಲಿ ಯಾರು ಮಿನಿಸ್ಟರ್ ಆಗಿರುತ್ತಾರೆ ಅವರದೇನೂ ತಪ್ಪಿಲ್ಲ. ಯಾವ ದಿನ ಅಗ್ರಿಮೆಂಟ್ ಆಯಿತಲ್ಲಾ 21, 23 ಸಾವಿರ ಜಮೀನು ಕೊಂಡುಕೊಳ್ಳಬೇಕೆಂದು Though I was not a Minister, some felt that I was Minister and they made attempt to tarnish me, But I am not going to allege, the Minister was there. This was done by KIADB. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ತಾವು ತಮ್ಮ ಕಛೇರಿಯಲ್ಲಿ ಒಂದು function ಮಾಡುತ್ತೀರಿ. ಒಬ್ಬ ಆಫೀಸರ್ ತಾವು ಒಂದು ಅಗ್ರಿಮೆಂಟ್ ಮಾಡುತ್ತೀರಿ. You can take action against him. Can we hold responsible for that? ನಿಮ್ಮನ್ನು ನಾವು ಮೇಲಿಂದ ಮೇಲೆ ಕೇಳುವುದಕ್ಕೆ ಬರುತ್ತದೆಯೇ? ಅಗ್ರಿಮೆಂಟ್ ಆಗಿದ್ದು as per cabinet decision. ಆ ಮಿನಿಸ್ಟರ್ ಏನು ಮಾಡುತ್ತಾನೆ, ಅವನು ವಿಧಾನಸೌಧದಲ್ಲಿ ಕುಳಿತಿರುತ್ತಾನೆ. ಆತನದ್ದು ಇದರ ಮೇಲೆ ಸಹಿ ಇದೆಯೇ? ಈ KIADB Act ಇದೆಯಲ್ಲಾ, ಈ ಪ್ರಕಾರ ಆಕ್ವಿಸಿಶನ್ ಆಗಿದೆ. ನೀವು Revenue Minister. ದಯಮಾಡಿ ತಿಳಿದುಕೊಳ್ಳಬೇಕು. ಟೋಟಲ್ ಕನ್‌ಫ್ಯೂಷನ್ ಎಲ್ಲಿಯಾಗಿದೆ ಎಂದರೆ, land notification is different and land acquisition is different. ಒಂದು ಪ್ರಾಜೆಕ್ಟ್‌ಗೆ ಲ್ಯಾಂಡ್ notify ಮಾಡುತ್ತಾರೆ, ಅದು preliminary work. ಆನಂತರ ಅದು final notification ಆಗುತ್ತದೆ, work award ಆಗುತ್ತದೆ, ಅವಾಗ it is acquisition. It is totally diferent. I think any member has to agree to this. ಮತ್ತು ದೇಶದಲ್ಲಿ ಎಲ್ಲಿಬೇಕಾದರೂ ಹೋಗಿ ಅಥವಾ ಜಗತ್ತಿನಲ್ಲಿ ಎಲ್ಲಿ ಬೇಕಾದರೂ ಹೋಗಿ ಅದೂ ತೋರಿಸುತ್ತೇನೆ. ಜಗತ್ತಿನ ಯಾವುದೇ ಭಾಗದಲ್ಲಿ ಹೋದರೂ ಒಂದು Mega projects come. Express highways, Airports, Townships. ಕೆಲವು ಸಾರಿ lands more are notified. ಅದು acquire ಮಾಡುವ ಉದ್ದೇಶವೇನೂ ಇರುವುದಿಲ್ಲ. ಭಯ ಏನೆಂದರೆ, Suppose we don't notify and somebody comes and puts a house there, the project may go haywire. To stop illegal activity, or to stop activity which can damage the project, a large extent of lands trust are just notified. ನಮ್ಮ KIADB Act ನಲ್ಲೇನಿದೆ? KIADB Act 3(1) ಎಂದಿದೆ

ಶ್ರೀ ಎ.ಟಿ. ರಾಮಸ್ವಾಮಿ : ಇದು ಉದಾಹರಣೆಗಳು, ನಿದರ್ಶನಗಳಷ್ಟೆ. ರಾಯರೆಡ್ಡಿಯವರೇ, ಅಷ್ಟೊಂದು ಲೈಟ್ ಆಗಿ ಮಾತನಾಡಬೇಡಿ, ಇಲ್ಲಿ ಇದ್ದೇವಲ್ಲಾ ಎಂದು. ಹೌದು, ನಾನು ಎದೆ ತಟ್ಟಿಕೊಂಡು ಹೇಳುತ್ತೇನೆಃ ನೀತಿ–ನಿಯಮಗಳಲ್ಲಿ, ಸಿದ್ಧಾಂತದಲ್ಲಿ ನಿಮಗಿಂತಲೂ ನಾನು ಒಂದು ಹೆಜ್ಜೆ ಮುಂದಿದ್ದೇನೆ. ನೀವು ನನಗಿಂತಲೂ ಹಿರಿಯ ಸದಸ್ಯರಿರಬಹುದು, ಇರುವುದು ಸತ್ಯವೋ ಅಸತ್ಯವೋ, ಒಳ್ಳೆಯದ್ದೋ ಕೆಟ್ಟದ್ದೋ, ಅದನ್ನು ಹೇಳುವಷ್ಟು ನೈತಿಕತೆ ಇದೆ, ಆ ಗುಂಡಿಗೆ ಇದೆ. ಅದನ್ನು ಮಾತ್ರ ನೀವು ಅರ್ಥ ಮಾಡಿಕೊಳ್ಳಿ. ರಾಯರೆಡ್ಡಿಯವರೆ, ಅಷ್ಟು ಲಘುವಾಗಿ ಮಾತನಾಡಲು ಹೋಗಬೇಡಿ. ನಾವು ರಾಜಕೀಯ ಜೀವನದಲ್ಲಿ ಕೆಲವು ನಿಯಮಗಳನ್ನು ಅನುಸರಿಸಿಕೊಂಡು ಬಂದಿದ್ದೇವೆ. ಏಕೆ ನೀವು ಇಲ್ಲಿ ಇದ್ದೀರಲ್ಲವೆಂದು ಹೇಳುತ್ತೀರಿ? ಹೌದು, ನನ್ನ ಹಂತಕ್ಕೆ ನಾನು ಇರುವುದೇ ಅಲ್ಲಿ. ನಾನು ನ್ಯಾಯವಾಗಿ ಇದ್ದೇನೆಂಬ ಆತ್ಮವಿಶ್ವಾಸ ನನಗಿದೆ. ಎಲ್ಲರ ಬಗ್ಗೆಯೂ ಲಘುವಾಗಿ ಮಾತನಾಡುವ ಹಾಗೆ ಮಾತನಾಡಲು ಹೋಗಬೇಡಿ. ಏನಾದರೂ ಇದ್ದರೆ, ನೀವು ಮಾತನಾಡುವಾಗ ಹೇಳಿ. ದೋಷವಿದ್ದರೆ ಎತ್ತಿ ಹೇಳಿ. Sorry,I am very sorry. ಈಗ ಇದೇ ಸದನದಲ್ಲಿ ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದವರು ಇಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಆ ಕಡೆ ಕುಳಿತವರು, ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತವರು ಕೂಡ, ಆ ವಿಷಯದ ಬಗ್ಗೆ ಚರ್ಚೆ ಮಾಡಿದ್ದಾರೆ. ಆ ವಿಷಯದ ಬಗ್ಗೆ ಏನೇನು ಹೇಳಿದ್ದಾರೆಂದು ನಾನು ನೋಡುತ್ತಿದ್ದೆ. ಇದೊಂದು ಬಹಳ ದೊಡ್ಡ ಹಗರಣ. ಈ ಪ್ರಪಂಚದಲ್ಲೇ ಇದೊಂದು ಗೋಲ್‌ಮಾಲ್ ಬಿಸಿನೆಸ್, ಇದೊಂದು ರಿಯಲ್ ಎಸ್ಟೇಟ್ ಬಿಸಿನೆಸ್, ಇತಿಹಾಸದಲ್ಲಿ ಇಂತಹ ಅಗ್ರಿಮೆಂಟ್ ಆಗಿಲ್ಲ. ಈ ಅಗ್ರಿಮೆಂಟನ್ನು ರದ್ದುಗೊಳಿಸಬೇಕೆಂಬ ಮಾತನ್ನು ಅನೇಕ ಅತಿರಥ, ಮಹಾರಥ ಪ್ರತಿಭಾನ್ವಿತ ಮುಖಂಡರು ಭಾಷಣ

ಮಾಡಿರುವುದನ್ನು ದಾಖಲೆಗಳ ಮೂಲಕ ಓದಿದ್ದೇನೆ.

ಶ್ರೀ ಕೆ. ವೆಂಕಟೇಶ್ : ನೀವು ಆಪಾದನೆಗಳನ್ನು ಮಾಡುತ್ತಿದ್ದೀರಲ್ಲಾ, ಆ ಅತಿರಥರು, ಮಹಾರಥರು ಯಾರೆಂದು ನಾವು ತಿಳಿದುಕೊಳ್ಳುವುದು?

ಶ್ರೀ ಎ.ಟಿ. ರಾಮಸ್ವಾಮಿ : ಏಕೆ ಅವರುಗಳ ಹೆಸರುಗಳನ್ನು ಹೇಳಿಸುತ್ತೀರಿ? ಆ ದಾಖಲೆಗಳನ್ನು ಓದಿದರೆ, ಅಂದರೆ ಬುದ್ಧಿವಂತರು, ಪ್ರತಿಭಾವಂತರು, ಮುಖಂಡರುಗಳು ಹಿರಿಯರು, ಗೌರವಾನ್ವಿತರು ಮಾತನಾಡಿದ್ದಾರೆಂಬ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ವೆಂಕಟೇಶ್ : ದಯವಿಟ್ಟು ಅವರು ಯಾರೆಂದು ತಿಳಿಸಬೇಕು.

ಶ್ರೀ ಎ.ಟಿ. ರಾಮಸ್ವಾಮಿ : ಆಯಿತು, ನಿಮ್ಮ ಉದ್ದೇಶ ಏನೆಂಬುದು ನನಗೆ ಅರ್ಥವಾಗುತ್ತದೆ.

ಶ್ರೀ ಕೆ. ವೆಂಕಟೇಶ್ : ನಮಗೆ ದುರುದ್ದೇಶವಿಲ್ಲ. ತಿಳಿದುಕೊಳ್ಳುವುದಕ್ಕೋಸ್ಕರವಾಗಿ ಕೇಳುತ್ತಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ : ನಮ್ಮ ಪಕ್ಷಗಳ ಸಿದ್ಧಾಂತ ಒಂದೇ ಇರಬೇಕು. ಇಶ್ಯೂ ಒಂದೇ ಇದ್ದಾಗ, ನಾವು ಆ ಕಡೆ ಕುಳಿತಿರಲಿ ಅಥವಾ ಈ ಕಡೆ ಕುಳಿತಿರಲಿ, ಒಂದೇ ಇಶ್ಯು ಇದ್ದಾಗ ಆ ವಿಷಯ ಸಂಪೂರ್ಣವಾಗಿ ಮುಗಿಯುವವರೆಗೆ ಸಿದ್ಧಾಂತ ಕೂಡ ಒಂದೇ ಇರಬೇಕು. ಸಮಯಕ್ಕೆ ಸಂದರ್ಭಕ್ಕೆ ತಕ್ಕಂತೆ ನಮ್ಮ ನಿಲುವುಗಳನ್ನು ನಾವು ಬದಲಾಯಿಸಿಕೊಂಡು ಹೋದರೆ ಜನರೇನಿದ್ದಾರೆ, ಅವರು ನಮ್ಮನ್ನು ಎಂದೂ ಕೂಡ ಒಪ್ಪುವುದಿಲ್ಲ, ಕ್ಷಮಿಸುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ರಸ್ತೆ ಮಾಡಬೇಡಿ ಎಂದು ನಾನೇನೂ ಹೇಳುತ್ತಿಲ್ಲ. ಅಥವಾ ನ್ಯಾಯಾಲಯಗಳ ತೀರ್ಮಾನಗಳೇನಿದೆ ಅದನ್ನೂ ಕೂಡ ನಾನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನ್ಯಾಯಾಲಯಗಳೂ ಕೂಡ ಅಲ್ಲೊಂದು ಇಲ್ಲೊಂದು ತೀರ್ಮಾನವನ್ನು, ರೋಮಾಂಚನವನ್ನು ಉಂಟುಮಾಡತಕ್ಕ ತೀರ್ಮಾನವನ್ನು, ಕೊಟ್ಟು ಹಗರಣಗಳನ್ನು ಬಯಲು ಮಾಡಿರುವುದನ್ನು ನಾವೆಲ್ಲಾ ನೋಡಿದ್ದೇವೆ. ದಾಖಲೆಗಳನ್ನು ಸರ್ಕಾರದವರು, ಅಧಿಕಾರಿ ವರ್ಗದವರು ಒದಗಿಸಿಕೊಡುತ್ತಾರೆ. ಅದರ ಆಧಾರದ ಮೇಲೆ, ರೆಕಾರ್ಡುಗಳ ಆಧಾರದ ಮೇಲೆ ನ್ಯಾಯಾಲಯಗಳು ತೀರ್ಮಾನವನ್ನು ಕೊಡುತ್ತವೆ. ಆ ತೀರ್ಮಾನವನ್ನು ಗೌರವಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ. ಆದರೆ ಸರ್ಕಾರ, ಹಿಂದಿನ ಯಾವುದೇ ಸರ್ಕಾರವಿರಲಿ, ಅಂದು ಹೇಳಿದ್ದೇನು? ಈಗ ಆಗಿರುವುದೇನು? ಈಗಿರತಕ್ಕ ಸರ್ಕಾರ ಹೇಳುವುದೇನು ಎಂಬುದನ್ನು ನಾವು ಕಾಯುತ್ತಿದ್ದೇವೆ. ಕಣ್ಣಿದ್ದು ಕುರುಡರಾಗಿ, ಕಿವಿಯಿದ್ದು ಕಿವುಡರಾಗಿ ತಿಳಿದರೂ ಕೂಡ ತಿಳಿಯದಂತೆ ಇರತಕ್ಕ ಸರ್ಕಾರಕ್ಕೆ ಏಕೆ ಬಾಯಿ ಕಟ್ಟಿದೆಯೆಂಬುದು ನನಗಂತೂ ಅರ್ಥವಾಗುತ್ತಿಲ್ಲ. ಯಾವುದು ನಿಮ್ಮನ್ನು ನಿರ್ಬಂಧ ಮಾಡಿದೆ ಎನ್ನತಕ್ಕ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುತ್ತೇನೆ. ಈವತ್ತು ಸುಮಾರು 5--6 ದಿವಸದ ಹಿಂದೆ ಮೈಸೂರಿನಲ್ಲಿ, ಆ ಒಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು, ಮುಖ್ಯಸ್ಥರು ಕೆಲವು ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಗಮನಿಸಿದೆ. ಅವರು ಬಂದಿರುವುದು ಬಿಸ್‌ನೆಸ್ ಮಾಡುವುದಕ್ಕೆ

ಪ್ರಾಫಿಟ್ ಮಾಡುವುದಕ್ಕೆ ಅವರು ಬಂದಿರುವುದು ಸರ್ವೀಸ್ ಮಾಡುವುದಕ್ಕಲ್ಲ, ಚಾರಿಟಿ ಕೆಲಸವನ್ನು ಮಾಡುತ್ತಿಲ್ಲ, ಧರ್ಮಕ್ಕೋಸ್ಕರ ರಸ್ತೆಯನ್ನು ಮಾಡುತ್ತಿಲ್ಲ. ರಸ್ತೆಯ ಕ್ವಾಲಿಟಿಯನ್ನು ಟೆಸ್ಟ್ ಮಾಡುವುದಕ್ಕೆ ಪಿ.ಡಬ್ಲ್ಯೂ.ಡಿ.ಯವರು ಯಾರು? ಏನು ಧರ್ಮಕ್ಕೆ ರಸ್ತೆಯನ್ನು ಮಾಡುತ್ತಿದ್ದಾರೆಯೆ? ಸರ್ವೀಸ್‌ಗೋಸ್ಕರ ಮಾಡುತ್ತಿದ್ದಾರೆಯೆ? ಅವರು ಮಾಡುತ್ತಿರುವುದು profit ಗಲ್ಲವೆ? ಅಷ್ಟಕ್ಕೇ ನಿಲ್ಲಲಿಲ್ಲ, ಸರ್ಕಾರದವರು ಐದು ಲಕ್ಷ ರೂ. ಕೊಡಲಿಕ್ಕೆ ಆಗಲಿಲ್ಲ ಇನ್ನೆಂಥ ರಸ್ತೆಯನ್ನು ಮಾಡುತ್ತಾರೆ ಎಂದು. ಯಾವುದೋ ಕಾರಣದಿಂದ ಆ ಚಕ್ ಬೌನ್ಸ್ ಆಗಿರಬಹುದು. ಇದು ಅಧಿಕಾರಿಗಳ ತಾಂತ್ರಿಕ ದೋಷವಿರಬಹುದು, ಅದಕ್ಕೆ ಸರ್ಕಾರದವರೂ ಕೂಡ ಗಮನಹರಿಸಬೇಕು. 26 ಹಿರಿಯ ಐ.ಎ.ಎಸ್ ಅಧಿಕಾರಿಗಳು ಮತ್ತು ಕೆಲವು ರಾಜಕಾರಣಿಗಳು, ಅವರು ಸಂಪಾದಿಸಿದಂಥ ಹಣವನ್ನು ಬೆಂಗಳೂರಿನ ಸುತ್ತಮುತ್ತ ಜಮೀನಿಗೆ ಕೊಟ್ಟು ಕೊಂಡುಕೊಂಡು ಇಟ್ಟುಕೊಂಡಿದ್ದಾರೆ. ಈ ಯೋಜನೆಗೆ ಸಹಿ ಆದ ನಂತರ ಅಲೈನ್‌ಮೆಂಟ್ ಅಲ್ಲಿ ಹೋಗುತ್ತದೆಂದು ಅಧಿಕಾರಿಗಳು ಮತ್ತು ರಾಜಕಾರಣಿಗಳಿಗೆ ಗೊತ್ತಾಗಿ, ನನ್ನ ಬಳಿಗೆ ಬಂದು ರಸ್ತೆಯ ದಿಕ್ಕನ್ನು ಬದಲಾಯಿಸಿ ಎಂದು ಹೇಳಿದರು, ನಾನು ಬದಲಾಯಿಸಲಿಲ್ಲ ಅದಕ್ಕೆ ನನ್ನನ್ನು ಈ ಇಕ್ಕಟ್ಟಿಗೆ ಸಿಲುಕಿಸತಕ್ಕ ಕೆಲಸವನ್ನು ಮಾಡುತ್ತಿದ್ದೀರಿ ಎನ್ನತಕ್ಕ ಮಾತನ್ನು ಅವರು ಹೇಳಿದರು. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಸರ್ಕಾರ ಯಾವ ಮಟ್ಟದಲ್ಲಿ ತನಿಖೆ ಮಾಡಿಸುತ್ತದೆ ಎಂಬುದನ್ನು ಸರ್ಕಾರಕ್ಕೆ ಬಿಡುತ್ತೇನೆ. ಯಾರು ಆ 26 ಹಿರಿಯ ಐ.ಎ.ಎಸ್. ಅಧಿಕಾರಿಗಳು ಮತ್ತು ರಾಜಕಾರಣಿಗಳು? ಹೋಗುವ ಪಾದ ಮುಟ್ಟಿ ಅಂಗಲಾಚಿ ಬೇಡಿಕೊಂಡಿದ್ದರು. ಅದನ್ನು ಬಹಿರಂಗ ಪಡಿಸಬೇಕು. ಇಲ್ಲದಿದ್ದರೆ ಅವನು ಇಡೀ ಸರ್ಕಾರವನ್ನು, ಅಧಿಕಾರಿಗಳನ್ನು ಅವನು ಬ್ಲಾಕ್‌ಮೇಲ್ ಮಾಡುತ್ತಿದ್ದಾನೆ, ಹೈಜಾಕ್ ಮಾಡುತ್ತಿದ್ದಾನೆ ಎಂದು ನಾನು ಹೇಳಲೇಬೇಕಾಗುತ್ತದೆ. "ಮುಖ್ಯಮಂತ್ರಿ ಖರೀದಿಗೆ ಇದ್ದರೂ ನಾನು ಖರೀದಿ ಮಾಡುವುದಿಲ್ಲ". ಈ ಸದನದ ನಾಯಕರು ಅವರು, ಎಂಥ ಮಾತು ಅದು! ಅವರು ಆಡಿದ ಮಾತು ಈ ಸದನಕ್ಕೆ ಆಡಿದ ಮಾತು. ಅಧಿಕಾರಿಗಳು ಮಂಥರೆಯರಿದ್ದಂತೆ. ಹಿಂದೆ ಕೈಕೆಯಿ ಮಂಥರೆ ಚಾಡಿ ಹೇಳಿ ರಾಮನಿಗೆ ಪಟ್ಟಾಭಿಷೇಕ ಮಾಡದಂತೆ ವನವಾಸಕ್ಕೆ ಕಳುಹಿಸಿದಳು ಎಂದು ನಾವು ರಾಮಾಯಣದಲ್ಲಿ ಪುರಾಣ ಕತೆಯಲ್ಲಿ ಓದಿದ್ದೇವೆ. ಈಗ ಅದೇ ಕೆಲಸವನ್ನು ಅಧಿಕಾರಿಗಳು ಮಾಡಿದರು. ಕೆಲವು ಮಂತ್ರಿಗಳಿಗೆ ಓದಲು ಬರೆಯಲು ಬರುವುದಿಲ್ಲವೆಂದು ಹೇಳುವುದು ಪ್ರಜಾಪ್ರಭುತ್ವಕ್ಕೆ ಅಪಮಾನ. ಯಾರು ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ, ಆ ಜನತೆಗೆ ಇದು ಅವಮಾನ. ಎಂಥ ಉದ್ಧಟತನದ ಮಾತು? ಸರ್ಕಾರದ ಮೇಲೆ ಹಿಡಿತ ಸಾಧಿಸುವುದಕ್ಕೆ ಆ ರೀತಿ ಮಾತನಾಡುತ್ತಿದ್ದಾರೆಯೇ? ಸರ್ಕಾರ ಇಂಥ ವಿಷಯಗಳನ್ನು ಬಹಳ ಗಂಭೀರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ತಮಗೆ ತಿಳಿಸುತ್ತಾ ನಾನು ಮೊದಲೇ ಹೇಳಿದೆ. 'he is a business man' ಎಂದು. ಅವನು ಬಂದಿರುವುದು ಇಲ್ಲಿ profit ಮಾಡುವುದಕ್ಕೆ ಸರ್ವೀಸ್ ಮಾಡುವುದಕ್ಕಲ್ಲ, ಚಾರಿಟಿಗೆ ಅಥವಾ ಧರ್ಮಕ್ಕೋಸ್ಕರ ರಸ್ತೆ ಮಾಡುತ್ತಿಲ್ಲ ಎಂದು ಹೇಳಿ. ಅವನನ್ನು ಬೈದು ಏನು ಪ್ರಯೋಜನ? ಆದರೆ ಅವನಿಗೆ ಎಲ್ಲಾ ತರಹದ ಅನುಕೂಲವಾಗುವ ರೀತಿಯಲ್ಲಿ

ದಾಖಲೆಗಳನ್ನು ಸೃಷ್ಟಿ ಮಾಡಿ ಒದಗಿಸಿ ಕೊಟ್ಟಿದ್ದಾರಲ್ಲಾ, ಅವರಿಗೆ ನೂರು ಶಾಪ ಹಾಕಬೇಕು. ಕೈಗೆ ಬಳೆ ಹಾಕಿ ಜೈಲಿಗೆ ಕಳುಹಿಸಬೇಕು. ಇದು ಈ ರಾಜ್ಯಕ್ಕೆ ರಾಜ್ಯದ ಜನರಿಗೆ, ರಾಜ್ಯದ ಬೊಕ್ಕಸದ ಮೇಲೆ, ರಾಜ್ಯದ ರೈತರ ಮೇಲೆ ಮಾಡಿರತಕ್ಕ ಮಹಾ ದ್ರೋಹವೆಂದು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ. ನಮ್ಮಲ್ಲಿ ಅಷ್ಟು ಬಂಡವಾಳ ಇರಲಿಲ್ಲ. ಬಂಡವಾಳ ಹೂಡುವ ತಾಕತ್ತು ಈ ರಾಜ್ಯಕ್ಕೆ ಇರಲಿಲ್ಲ, ಅದಕ್ಕಾಗಿ ಅವರನ್ನು ಬಹಳ ವೀಳ್ಯ ತಾಂಬೂಲ ಕೊಟ್ಟು ಬಾರಪ್ಪ ಇಲ್ಲಿಗೆ. ಹತ್ತಾರು ಸಾವಿರ ಕೋಟಿ ಬಂಡವಾಳ ಹೂಡಿ ಎಂದು ನಮ್ಮ ರಾಜ್ಯ ಸರ್ಕಾರದವರು ಕರೆದುಕೊಂಡು ಬಂದರು. ಅವರು ಎಷ್ಟು ಸಾವಿರ ಕೋಟಿ ರೂ. ಬಂಡವಾಳವನ್ನು ಈ ರಾಜ್ಯದಲ್ಲಿ ಹೂಡಿದ್ದಾರೆ? ಇದು ಮೊದಲನೆಯ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು ನಮ್ಮ ಮಂತ್ರಿಮಂಡಲದವರು ಇದಕ್ಕೆ ಉತ್ತರವನ್ನು ಕೊಡಬೇಕು. ಎಷ್ಟು ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಇಲ್ಲಿಗೆ ಬಂದಿದೆ? ನನ್ನ ಹತ್ತಿರ ಹಣ ಇಲ್ಲ ಬ್ಯಾಂಕಿಗೆ ಗ್ಯಾರಂಟಿ ಕೊಡಿ ಎಂದು ಹೇಳಿ ಅಲ್ಲಿ ಹಣವನ್ನು ತೆಗೆದುಕೊಂಡು ಅನಂತರ ಕೆಲಸ ಪ್ರಾರಂಭ ಮಾಡಿದವರು ಈವತ್ತು ಮಾತನಾಡತಕ್ಕ ರೀತಿ, ಉದ್ಧಟತನದ ಮಾತು ಇಡೀ ರಾಜ್ಯಕ್ಕೆ ಅಪಮಾನ ಮಾಡಿಬಿಟ್ಟಿರಿ, ರಾಜ್ಯದ ಜನರಿಗೆ ಅಪಮಾನ ಮಾಡಿದಿರಿ. ಕರ್ನಾಟಕ ರಾಜ್ಯ ಒಂದು ಸುಸಂಸ್ಕೃತ ನಾಡು. ಎಂತೆಂಥವರು ಈ ನಾಡಿನಲ್ಲಿ ಹುಟ್ಟಿದರು. ಅಂಥ ನಾಡಿಗೆ ಕನ್ನ ಹಾಕತಕ್ಕವರನ್ನು ಕರೆದುಕೊಂಡು ಬಂದು ಅಪಮಾನ ಮಾಡಿದಿರಲ್ಲಾ, ನೀವೆಲ್ಲಾ ಆತ್ಮಾವಲೋಕನ ಮಾಡಿಕೊಳ್ಳಬೇಕು. ಬಹುರಾಷ್ಟ್ರೀಯ ಕಂಪನಿಗಳ ಜೇಡರ ಬಲೆ ಎಂದು ಮಾನ್ಯ ರಾಜೀವ್ ದೀಕ್ಷಿತ್‌ರವರು ಒಂದು ಪುಸ್ತಕವನ್ನು ಬರೆದಿದ್ದಾರೆ. ಅದರ ಸ್ವಲ್ಪ ಭಾಗವನ್ನು ಈ ಸಂದಭದಲ್ಲಿ ಉಲ್ಲೇಖ ಮಾಡಲು ನಾನು ಇಚ್ಛಿಸುತ್ತಿದ್ದೇನೆ. ಸಾವಿರಾರು ಕೋಟಿ ರೂ. ಬಂಡವಾಳವನ್ನು ರಸ್ತೆ ಮಾಡುವುದಕ್ಕೆ ತಂದರಲ್ಲಾ, ಈಗ ಹೂಡಿ ಆಗಿಹೋಯಿತಲ್ಲಾ, ಅವರೇನು ಮಾಡುತ್ತಾರೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ನಾನು ಹೇಳುತ್ತಿದ್ದೇನೆ.

"ಈ ಬಹುರಾಷ್ಟ್ರೀಯ ಕಂಪೆನಿಗಳ ಹೆಚ್ಚುತ್ತಿರುವ ಅತಿಕ್ರಮಣ ರಾಜ್ಯಗಳ ಪರಮಾಧಿಕಾರಕ್ಕೆ ಗಂಭೀರ ಅಪಾಯ ತಂದೊಡ್ಡಿವೆ. ಈ ಕಂಪೆನಿಗಳ ವ್ಯಾಪಾರ ನಡೆಸುವ ವಿಧಾನದ ಕಾರಣ, ರಾಜ್ಯಗಳ ನಿರ್ಣಯಗಳು ನಿರುಪಯೋಗಿಯಾಗಿವೆ. ರಾಜ್ಯದ ಸಾರ್ವಭೌಮತ್ವ, ರಾಜ್ಯದ ನೀತಿ, ರಾಜ್ಯದ ಶಕ್ತಿ, ರಾಜ್ಯದ ಅಖಂಡತೆ ಮುಂತಾದ ಶಬ್ದಗಳು ಈಗ ಅರ್ಥಹೀನವಾಗಿವೆ. ರಾಜ್ಯದ ನೀತಿಗಳು ಈಗ ಬಹುರಾಷ್ಟ್ರೀಯ ಕಂಪೆನಿಗಳ ನಿರ್ದೇಶನಗಳ ಮೇಲೆ ನಿರ್ಧರಿಸಲ್ಪಡುತ್ತಿವೆ. ಅಮೆರಿಕಾದ ಸಲುವಾಗಿ ಗುಪ್ತ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಅಮೆರಿಕಾದ ಕಂಪೆನಿಗಳು ಅತ್ಯಂತ ಅಚ್ಚುಕಟ್ಟಾಗಿ ಮಾಡುತ್ತಿವೆ. CIA ಹೊರತುಪಡಿಸಿದರೆ, ಅಮೆರಿಕನ್ ಕಂಪೆನಿಗಳ ಮಾತ್ರ ಹಲವು ರೀತಿಯ ಸಂಶಯ ಹಾಗೂ ಟೀಕೆಗಳಿಗೆ ಅವಕಾಶ ಮಾಡಿಕೊಟ್ಟಿವೆ. ಈ ಬಹುರಾಷ್ಟ್ರೀಯ ಕಂಪೆನಿಗಳಿಗೆ ಇಷ್ಟೆಲ್ಲಾ ಕುಖ್ಯಾತಿ ಬರುವುದಕ್ಕೆ ಅಪರಾಧ ಹಾಗೂ ರಹಸ್ಯ ಕಾರ್ಯಾಚರಣೆಯ ಹಿಂದೆ ಇವುಗಳ ಕೈವಾಡ ಇರುವುದೇ ಕಾರಣವಾಗಿದೆ. ಈ ಬಹುರಾಷ್ಟ್ರೀಯ ಕಂಪೆನಿಗಳಿಗೆ........" ಸನ್ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ಸಾರಿ ಓದುತ್ತೇನೆ, "......ಇಷ್ಟೆಲ್ಲಾ ಕುಖ್ಯಾತಿ ಬರುವುದಕ್ಕೆ ಅಪರಾಧ ಹಾಗೂ ರಹಸ್ಯ ಕಾರ್ಯಾಚರಣೆಯ

ಹಿಂದೆ ಇವುಗಳ ಕೈವಾಡ ಇರುವುದೇ ಕಾರಣವಾಗಿದೆ. ಬಹುರಾಷ್ಟ್ರೀಯ ಕಂಪೆನಿಗಳ ಸ್ವಾರ್ಥ ಅಡಕವಾಗಿರುವ ಯಾವುದೇ ರಾಷ್ಟ್ರೀಯ ಅಥವಾ ಅಂತರ್‌ರಾಷ್ಟ್ರೀಯ ಸಮಸ್ಯೆ ಇಲ್ಲ ಎಂದರೆ ಅಚ್ಚರಿಯಾಗುತ್ತದೆ. ಎಲ್ಲಾ ದೇಶಗಳ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು ಹಾಗೂ ಅನ್ಯ ಧುರೀಣರು ಯಾವ ರೀತಿಯ ಧ್ವನಿ ಎತ್ತಬೇಕು ಎನ್ನುವುದನ್ನು ಈ ಕಂಪೆನಿಗಳು ನಿರ್ಧರಿಸುತ್ತವೆ. ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನ ಮಂತ್ರಿಗಳು ಯಾವ ರೀತಿಯ ಧ್ವನಿ ಎತ್ತಬೇಕು ಅನ್ನತಕ್ಕಂಥದ್ದನ್ನು ಈ ಕಂಪೆನಿಗಳು ನಿರ್ಧರಿಸುತ್ತವೆ. "ಈ ಕಂಪೆನಿಗಳ ಮಾತನ್ನು ಕೇಳದ ಶಾಸನಾಧ್ಯಕ್ಷ, ಧುರೀಣರ ವಿರುದ್ಧ ಇವು ನಿಷ್ಕರುಣಿಯಾಗುತ್ತವೆ. ಇಂತಹವರನ್ನು ಪದಚ್ಯುತಿಗೊಳಿಸಲಾಗುತ್ತದೆ ಅಥವಾ ಅವರ ಹತ್ಯೆ ಮಾಡಲಾಗುತ್ತದೆ. ಉದಾಹರಣೆಗೆ, 1972ರಲ್ಲಿ ಚಿಲಿಯಲ್ಲಿ ಪ್ರಜೆಗಳಿಂದ ಆರಿಸಲ್ಪಟ್ಟ ಸರ್ಕಾರವನ್ನು ಉರುಳಿಸುವ ಷಡ್ಯಂತ್ರ ಪೆಪ್ಸಿ, ಕೋಕಾಕೋಲ ಹಾಗೂ ITT ಯಿಂದ ರೂಪಿಸಲ್ಪಟ್ಟಿದ್ದವು. ಈ ಷಡ್ಯಂತ್ರದಲ್ಲಿ ಅಲ್ಲಿಯ ಹಿರಿಯ ರಾಷ್ಟ್ರಪತಿ ಡಾ: ಸಲಾದೋರಾ ಅವರ ಸರ್ಕಾರವನ್ನು ಪದಚ್ಯುತಗೊಳಿಸಲಾಯಿತು ಹಾಗೂ ಡಾ: ಸಲಾದೋರಾ ಹಾಗೂ ಅವರ 14 ಪ್ರಮುಖ ಸಚಿವರ ಹತ್ಯೆ ಮಾಡಿಸಲಾಯಿತು. ಇದೇ ಹತ್ಯಾಕಾಂಡದಲ್ಲಿ ವಿಖ್ಯಾತ ಕವಿ ಹಾಗೂ ಸಾಹಿತಿ ಬಾಬ್ಲು ಸರೋದಾ ಕೂಡ ಕೊಲ್ಲಲ್ಪಟ್ಟರು. ಡಾ: ಸಲ್ವಾದೋರಾ ಅಲಂದ್ಯ ಬಹುರಾಷ್ಟ್ರೀಯ ಕಂಪೆನಿಗಳ ವಿರೋಧಿಯಾಗಿದ್ದುದ್ದು ಹಾಗೂ ಅವರ ತಮ್ಮ ದೇಶವನ್ನು ಬಹುರಾಷ್ಟ್ರೀಯ ದಾಸ್ಯದಿಂದ ಮುಕ್ತಗೊಳಿಸಲು ಯತ್ನಿಸಿದುದ್ದು, ಅವರ ವಿರುದ್ಧದ ಈ ಷಡ್ಯಂತ್ರಕ್ಕೆ ಮೂಲ ಕಾರಣ. ತಮ್ಮ ಹತ್ಯೆಯ ಕೆಲವೇ ಗಂಟೆಗಳ ಪೂರ್ವದಲ್ಲಿ ನನ್ನ ದೇಶವನ್ನು ಬಹುರಾಷ್ಟ್ರೀಯ ಕಂಪೆನಿಗಳ ಶೋಷಣೆಯಿಂದ ರಕ್ಷಿಸಬೇಕಿದೆ ಎಂದು ಗುಡುಗಿದ್ದರು. ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಭಾಷಣ ಮುಗಿಸಿ ಸ್ವದೇಶಕ್ಕೆ ಬರುತ್ತಿದ್ದಂತೆ, ಪದಚ್ಯುತಿಗೊಳಿಸಿ ಅವರ ಹತ್ಯೆ ಮಾಡಲಾಯಿತು. ಡಾ: ಅಲಂದ್ಯೆ ಅವರ ನಂತರ ಅಧಿಕಾರಕ್ಕೆ ಬಂದ ಸರ್ಕಾರವು ದೇಶದ ಅಭಿವೃದ್ಧಿಯ ಬಗ್ಗೆ ಚಿಂತಿಸದೆ, ಬಹುರಾಷ್ಟ್ರೀಯ ಕಂಪೆನಿಗಳನ್ನು ಯಾವ ರೀತಿ ಹಿಂದಕ್ಕೆ ಕರೆಸಿಕೊಳ್ಳಬೇಕೆನ್ನುವುದರ ಬಗ್ಗೆ ಯೋಚಿಸತೊಡಗಿತ್ತು". ಸನ್ಮಾನ್ಯ ಉಪಾಧ್ಯಕ್ಷರೆ, ಅದೊಂದು ನಿದರ್ಶನ. ಇನ್ನೊಂದು, "ಅಹಮ್ಮದ್ ರಾಜ್‌ಷಹಾ ಚಾಲ್ತಿಯಾ ಅವರ ಆಡಳಿತ ಅವಧಿಯಲ್ಲಿ ಇರಾನ್‌ನಲ್ಲಿ ಅಮೆರಿಕದ ಕಂಪೆನಿಗಳ ಪ್ರವೇಶವಾಯಿತು. ಅಂದಿನಿಂದಲೇ ಇರಾನ್‌ನಲ್ಲಿ ಸಂಕಷ್ಟಗಳ ಸರಮಾಲೆ ಪ್ರಾರಂಭವಾಯಿತು. ಈ ಪರಿಸ್ಥಿತಿಯ ಕಾರಣವಾಗಿಯೇ ಇರಾನ್ ಹಾಗೂ ಇರಾಕ್ ನಡುವೆ ಯುದ್ಧವಾಯಿತು. ಇರಾನ್-ಇರಾಕ್ ಯುದ್ಧ ನಿಂತಿದ್ದರಿಂದ........

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ರಾಮಸ್ವಾಮಿಯವರೆ, ಅದನ್ನು ನಾವು ಓದಿಕೊಳ್ಳುತ್ತೇವೆ. ತಾವು BMIC ಬಗ್ಗೆ ಹೇಳಿ.

ಶ್ರೀ ಎ.ಟಿ. ರಾಮಸ್ವಾಮಿ : ಸ್ವಲ್ಪ ತಾಳಿ ಡಿ.ಆರ್. ಪಾಟೀಲ್‌ರವರೆ, ನಾನು ಎಲ್ಲಾ ಹೇಳಿಬಿಡುತ್ತೇನೆ. "........ ನಿಂತಿದ್ದರಿಂದಾಗಿ ಅತ್ಯಧಿಕ ಆಘಾತವಾಗಿದ್ದು ಲಾಕ್ಹೀಡ್ ಕಂಪೆನಿಗೆ, ಏಕೆಂದರೆ, ಯುದ್ಧ ನಡೆಯುತ್ತಿರುವಾಗ ಇರಾನ್ ಹಾಗೂ ಇರಾಕ್ ಎರಡೂ ದೇಶಗಳಿಗೆ ಲ್ಹಾಕೀಡ್ ಕಂಪನಿಯೇ ಶಸ್ತ್ರಾಸ್ತ್ರಗಳ ಪೂರೈಕೆ ಮಾಡುತ್ತಿತ್ತು". ಇರಾಕ್ ಮತ್ತು ಇರಾನ್‌ಗೆ ಲಾಕೀಡ್ ಕಂಪೆನಿಯೇ ಶಸ್ತ್ರಾಸ್ತ್ರಗಳ

ಪೂರೈಕೆ ಮಾಡುತ್ತಿತ್ತು. "ಯುದ್ಧ ಮುಗಿಯುತ್ತಿದ್ದಂತೆ ಲಾಕೀಡ್ ಕಂಪೆನಿ ಇರಾನ್‌ನಲ್ಲಿ ಆಂತರಿಕ ಯುದ್ದ ಹುಟ್ಟಿ ಹಾಕಿತು. ಇರಾನ್‌ನ ಮುಜಾಹಿದ್‌ಗಳಿಗೆ ಉಚಿತವಾಗಿ ಶಸ್ತ್ರಾಸ್ತ್ರ ಸರಬರಾಜು ಮಾಡಿತ್ತು. ಇರಾನಿನ ಸರ್ಕಾರದ ವಿರುದ್ಧ ಮುಜಾಹಿದ್‌ರನ್ನು ಎತ್ತಿ ಕಟ್ಟಲಾಯಿತು. ಮುಂದೆ ಇದೇ ಮುಜಾಹಿದ್‌ಗಳು ಅಲ್ಲಿಂದ ಓಡಿ ಹೋಗಿ ಆಫ್ಘಾನಿಸ್ತಾನನಲ್ಲಿ ಒಟ್ಟಾಗಿ ತಳವೂರಿದರು. ಶಸ್ತ್ರಾಸ್ತ್ರಗಳ ಸಂಗ್ರಹ ಹೆಚ್ಚಿದ್ದು, ಮುಂದೆ ಇದೇ ಮುಜಾಹಿದ್‌ಗಳು ಆಫ್ಘಾನಿಸ್ತಾನದ ಸರ್ಕಾರವನ್ನೂ ಕೂಡ ಉರುಳಿಸಿದರು". ಇದು ಒಂದು. "ಜಪಾನಿನ ಹಿಂದಿನ ಪ್ರಧಾನಿ ತನಾಕ ಕಿಷಿ ಹಾಗೂ ಮುಕುಡ, ಕೂಡ ಲಂಚದ ಹಗರಣದಲ್ಲಿ ಸಿಕ್ಕಿಬಿದ್ದರು. ಪ್ರಧಾನಿ ತನಾಕ ಅವರು ಲಾಕ್ಹೀಡ್ ಕಂಪೆನಿಯಿಂದ ಲಂಚ ಸ್ವೀಕರಿಸುವ ಆರೋಪ ಸಾಬೀತಾಗಿ, ಕಾರಾಗೃಹ ವಾಸದ ಶಿಕ್ಷೆಯಾಯಿತು. ಪ್ರಧಾನ ಕಿಷಿ ಹಾಗೂ ಮಕುಡ ಅಮೆರಿಕದ ಕಂಪೆನಿ ಗ್ರಹ್ಮನ್‌ನಿಂದ 70 ಲಕ್ಷ ಡಾಲರ್‌ಗಳನ್ನು ಲಂಚದ ರೂಪದಲ್ಲಿ ಸ್ವೀಕರಿಸಿದರು. ಜಪಾನಿನ್ ಲಿಬರಲ್ ಡೆಮಾಕ್ರೆಟ್ ಪಕ್ಷದ ನೇತಾರರೂ ಕೂಡ ಲಾಕೀಡ್ ಕಂಪೆನಿಯಿಂದ 92 ಲಕ್ಷ ಡಾಲರ್‌ಗಳನ್ನು ಸ್ವೀಕರಿಸಿದ್ದರು".

ಉಪಾಧ್ಯಕ್ಷರು : ಮಾನ್ಯ ರಾಮಸ್ವಾಮಿಯವರೆ,.........

ಶ್ರೀ ಎ.ಟಿ. ರಾಮಸ್ವಾಮಿ : ಬಂದೆ, ಬಂದೆ. "ಅಮೆರಿಕಾದ ವಾಟರ್‌ಗೇಟ್ ತಂಡದ ವಿಚಾರಣೆ ನಡೆಸಿದಾಗ ರಾಷ್ಟ್ರಪತಿ ನಿಕ್ಸನ್‌ರವರ ಚುನಾವಣಾ ನಿಧಿಗೆ ಅಮೆರಿಕಾದ ....

ಶ್ರೀ ಕೆ. ಶ್ರೀನಿವಾಸಗೌಡ : ಈಗ ಬಯಲು ಸೀಮೆ ಮೀಟಿಂಗ್ ಇದೆ. ಮಾನ್ಯ ರಾಮಸ್ವಾಮಿಯವರು ಆ ಪುಸ್ತಕವನ್ನು ನಮಗೆ ಕೊಡಲಿ. ಅವರು BMIC ಮೇಲೆ ಮಾತನಾಡಲಿ.

ಶ್ರೀ ಎ.ಟಿ. ರಾಮಸ್ವಾಮಿ : ಅದಕ್ಕೆ ಸಂಬಂಧಪಟ್ಟಿದ್ದೇ ಇದು, ಬಹುರಾಷ್ಟ್ರೀಯ ಕಂಪೆನಿಗಳದ್ದು.......

(ಅಡಚಣೆ)

ಶ್ರೀ ಎ.ಟಿ. ರಾಮಸ್ವಾಮಿ : .... ಸ್ವಲ್ಪ ನಿಧಾನ ಮಾಡಿ.

(ಅಡಚಣೆ)

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಶ್ರೀನಿವಾಸಗೌಡರೆ, 3 ಗಂಟೆ 20 ನಿಮಿಷ ಮಾತನಾಡಿದರು ಒಂದು fraud company ಬಗ್ಗೆ........ At least he is quoting an example.

(ಅಡಚಣೆ)

ಶ್ರೀ ಎ.ಟಿ. ರಾಮಸ್ವಾಮಿ : "ಯುನೈಟೆಡ್ ಬ್ರಾಂಡ್ ಕಂಪನಿಯು ಹಾಂಡುರಾಸ್ ದೇಶದಲ್ಲಿ ತನ್ನ ದೊಡ್ಡ ಫಾರ್ಮ್‌ಗಳಲ್ಲಿ ಬೆಳೆಯುವ ಬಾಳೆಹಣ್ಣು........." ನಿಮ್ಮದು ಮಾನ್ಯ ಶ್ರೀನಿವಾಸಗೌಡರೆ, "ಬಾಳೆಹಣ್ಣುಗಳ ನಿರ್ಯಾತದ ಮೇಲೆ ಶುಲ್ಕ ಕಡಿಮೆ ಮಾಡಲು ರಾಷ್ಟ್ರಪತಿಯವರಿಗೆ 10 ಲಕ್ಷ ಡಾಲರ್‌ಗಳನ್ನು ಲಂಚದ ರೂಪದಲ್ಲಿ ನೀಡಿತ್ತು. ಈ ಲಂಚದ ರಹಸ್ಯ ಸ್ಫೋಟಗೊಂಡಾಗ ಹಾಂಡೂರಾಸ್ ರಾಷ್ಟ್ರಪತಿಯವರು ಮಾಳಿಗೆಯ ಮೇಲಿಂದ ಕೆಳಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡರು. 1993ರಲ್ಲಿ ಭಾರತದಲ್ಲಿ ನಡೆದ ಪ್ರತಿಭೂತಿ ಹಗರಣದ ವಿಶ್ವದ ಆರ್ಥಿಕ ಇತಿಹಾಸದಲ್ಲಿಯೇ ದೊಡ್ಡದೆಂದು

ಭಾವಿಸಲಾಗುತ್ತದೆ. ಈ ಹಗರಣದಲ್ಲಿ ಭಾರತೀಯ ಪೌರರ ಸಾವಿರಾರು ಕೋಟಿ ರೂಪಾಯಿಗಳು ಮುಳುಗಿ ಹೋದರೆ, ವಿದೇಶಿ ಬ್ಯಾಂಕುಗಳು ಈ ಹಗರಣಕ್ಕೆ ಸಂಪೂರ್ಣ ಜವಾಬ್ದಾರರೆಂದು ಭಾರತದ ಸಂಸದೀಯ ಸಮಿತಿ ಸ್ಪಷ್ಟ ರೂಪದಲ್ಲಿ ತಿಳಿಸಿದೆ. ಈ ಬ್ಯಾಂಕುಗಳು ಈ ಹಗರಣದ ಮೂಲಕ ಭಾರತೀಯರು ತಮ್ಮ ನೆತ್ತರು, ಬೆವರು ಸುರಿಸಿ ಗಳಿಸಿದ ವಿದೇಶಿ ವಿನಿಮಯ ಕೋಶವನ್ನು ಖಾಲಿಯಾಗಿಸಿದವು......."

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ರಾಮಸ್ವಾಮಿಯವರೆ, ಅದನ್ನು ಬಿಟ್ಟು ಬಿಡಿ ಹೋಗಲಿ.

ಶ್ರೀ ಎ.ಟಿ. ರಾಮಸ್ವಾಮಿ : ಏಕೆ ಆ ತರಹ ಆತುರ ಮಾಡುತ್ತೀರಿ? ಆತುರ ಮಾಡಬೇಡಿ, ಸ್ವಲ್ಪ ನಿಧಾನ ಮಾಡಿ. ನಾನು ಬರುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಇಡೀ ಜಗತ್ತಿನ ಇತಿಹಾಸದಲ್ಲಿ ಇಂತಹ ಒಂದು ಕೆಟ್ಟ agreement ಆಗಿದ್ದನ್ನು ನಾವು ನೋಡಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಈಗ ರಸ್ತೆ ಮಾಡುತ್ತಿದ್ದಾರೆ. ಮಾನ್ಯ ಶ್ರೀನಿವಾಸಗೌಡರೆ, Disturb ಮಾಡಬೇಡಿ. ನಿಮಗೆ seriousness ಇಲ್ಲ, ನಮಗೆ seriousness ಇದೆ. ನೀವು ಅಲ್ಲಿ divert ಮಾಡಲಿಕ್ಕೆ ಹೋಗಬೇಡಿ. ಅಲ್ಲೊಂದು ಏನೋ ಹೇಳಿಬಿಟ್ಟು, ಇಲ್ಲೇನೋ ಮಾಡಲಿಕ್ಕೆ ನೀವು ಬರಬೇಡಿ. ಮೊದಲನೆಯದಾಗಿ, ಈ ರಸ್ತೆಯ ಕ್ವಾಲಿಟಿ ಟೆಸ್ಟ್ ಮಾಡುವವರ್ಯಾರು? ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಂತ್ರಿಮಂಡಲದವರು ತಿಳಿಸಬೇಕು. ಈಗ ಫಾರಂ ನಂ.50 ಮತ್ತು 53 dispose ಆಗದೇ ಆ ರೈತರ ಭೂಮಿಯನ್ನು ನೀವು ತೆಗೆದುಕೊಂಡು ಅವರಿಗಾಗಿ ಹಕ್ಕನ್ನು ಮಾಡಿಕೊಟ್ಟಿರಿ. ಅದಕ್ಕೆ ನಿಯಮದಲ್ಲಿ ಅವಕಾಶವಿತ್ತೇ ಎಂಬುದನ್ನು ತಿಳಿಸಬೇಕಾಗುತ್ತದೆ. ಹಿಂದೆ ಹತ್ತು ಹಲವಾರು ಸಾರಿ, ತಾವೂ ಉದಾಸಿ ಸಾಹೇಬರು, ಇದರಲ್ಲಿ real estate concept ಇಲ್ಲವೆಂದು ಹೇಳಿದ್ದಿರಿ. ಹಾಗಾದರೆ ಈಗ ಇದರಲ್ಲಿ real estate concept ಇಲ್ಲವೇ? ಅವರು ಎಷ್ಟು ಬಂಡವಾಳವನ್ನು ಹೊರ ದೇಶದಿಂದ ಈ ರಾಜ್ಯಕ್ಕೆ ತಂದು ಹೂಡಿದ್ದಾರೆ? ಏನು develop ಮಾಡಿದ್ದಾರೆ ಎಂಬ ಬಗ್ಗೆ ಹೇಳಬೇಕು. ನಿಮ್ಮ frame of agreement ನಲ್ಲಿ, ಮೂಲ ಒಪ್ಪಂದದಲ್ಲಿ ಬೆಂಗಳೂರು–ಮೈಸೂರು Express Highway ಮಾಡಬೇಕೆಂದು ಇತ್ತು. ನಾನು ಇದನ್ನು Express Highway project ಎಂದು ಕರೆಯುವುದಿಲ್ಲ. ಅದಕ್ಕೆ ಇರುವುದು only 5% of the investment. ಇನ್ನು 45% ನಿಮ್ಮ township development ಗೆ. 50% ನಿಮ್ಮ power plant ಗೆ. ಇದನ್ನು ಹೇಗೆ ನೀವು Bangalore-Mysore Express Highway Project ಎಂದು ಕರೆಯುತ್ತೀರಿ 5% ಇರುವುದಕ್ಕೆ? ಇದು real estate business ಮಾಡಲಿಕ್ಕೆ, ಅಕ್ರಮವಾಗಿ ಹಣ ಮಾಡಲಿಕ್ಕೆ ಮಾಡಿಕೊಂಡಿರತಕ್ಕಂಥ ಒಂದು ದಂಧೆ ಎಂದು ನಾನು ಸ್ಪಷ್ಟವಾಗಿ, ಎಲ್ಲಿ ನಿಂತುಕೊಂಡು ಬೇಕಾದರೂ ಹೇಳಲಿಕ್ಕೆ ನಾನು ಇಚ್ಛಿಸುತ್ತಿದ್ದೇನೆ.

ಪೆರಿಫೆರಲ್ ರೋಡ್ ಮಾಡಿದರಲ್ಲಾ ಅಲ್ಲಿ ಹತ್ತು ಇಂಟರ್ ಚೆಂಜಸ್ ಒಂದು ಕಾರ್ಪೊರೇಟ್ ಟೌನ್ ಮಾಡುವುದಕ್ಕೆ ಈಗ ಮಾಡುತ್ತಿದ್ದೀರಿ. ಇದನ್ನು ಮಾಡಿದ ಉದ್ದೇಶ, ಬೆಂಗಳೂರಿನಿಂದ–

ಮೈಸೂರಿಗೆ ವೇಗವಾಗಿ ಸುಲಲಿತವಾಗಿ ತಲುಪಬೇಕು ಎಂದು To easen the pressure on Bangalore ಎಂದು ತಾನೇ ನೀವು ಮಾಡಿದ್ದು? ಈಗ ಹತ್ತು ಇಂಟರ್‌ಚೆಂಜಸ್‌ನಲ್ಲಿ ರಿಯಲ್ ಎಸ್ಟೇಟ್ ಬಿಸ್‌ನೆಸ್ ಮಾಡುತ್ತಿದ್ದೀರಲ್ಲಾ ಒಂದು ಕಾರ್ಪೊರೇಟ್ ಟೌನ್‌ಅನ್ನು ಬಿಡದಿಯಿಂದ ಈಚೆಗೆ ಮಾಡುತ್ತಿದ್ದೀರಲ್ಲಾ, ಇದು ನಿಮ್ಮ ಉದ್ದೇಶವಾಗಿತ್ತಾ? ಆಗಿರಲಿಲ್ಲ, ಅದಕ್ಕೆ ಇದನ್ನು ರಿಯಲ್ ಎಸ್ಟೇಟ್ ದಂದೆ, ಅಕ್ರಮವಾಗಿ ಹಣ ಮಾಡುವುದಕ್ಕೆ ನೀವುಗಳೂ ಕೂಡ ಸೇರಿಕೊಂಡು, ಈಗ ನೀವು ಒಬ್ಬರ ಮೇಲೆ ಒಬ್ಬರು ಕೆಸರನ್ನು ಎರೆಚಬೇಡಿ, 2001ರ ನಂತರ ನೀವೇನು ಮಾಡುತ್ತಿದ್ದೀರಿ? ನೀವು ಇವೆಲ್ಲವನ್ನೂ ಯಾರ ಆಸ್ತಿ ಎಂದು ತಿಳಿದುಕೊಂಡಿದ್ದೀರಿ? ಈ ರಾಜ್ಯದ ಆಸ್ತಿಯನ್ನು ಕಾಯುವುದಕಲ್ಲವೇ ನಿಮ್ಮನ್ನು ನಮ್ಮನ್ನು ಕಳುಹಿಸಿರುವುದು? ಅದನ್ನು ನಮಗೆ ಕಾಯುವುದಕ್ಕೆ ಸಾಧ್ಯವಿಲ್ಲವೆಂದರೆ ಅಧಿಕಾರವನ್ನು ಬಿಟ್ಟು ತೊಲಗುವಂತಹ ಪ್ರಯತ್ನ ಮಾಡಿ. ಫೆರಿಫರಲ್ ರೋಡ್‌ನಲ್ಲಿ ಹತ್ತು ಇಂಟರ್ ಚೆಂಜಸ್‌ನಲ್ಲಿ ರಿಯಲ್ ಎಸ್ಟೇಟ್ ದಂಧೆ. ಮತ್ತೆ ಇಲ್ಲಿಯ ರೋಡಿನ ಪ್ರೆಶರ್‌ಅನ್ನು ನೀವು easening ಮಾಡುತ್ತೀರಿ? ಒಂದು ಕಾರ್ಪೊರೇಟ್ ಟೌನ್, ಇವತ್ತು ರೈತರ ಭೂಮಿಯನ್ನು ಕೊಡುತ್ತಿದ್ದೀರಿ, ಇವತ್ತು ಗೌರವಾನ್ವಿತ ಸದಸ್ಯರು ನಾವೆಲ್ಲಾ ಅರ್ಥ ಮಾಡಿಕೊಳ್ಳಬೇಕು, ಇವತ್ತ ನೋಟಿಫಿಕೇಷನ್ ಹೊರಡಿಸಿದರೆ 1999-2000 ಗೈಡ್‌ಲೈನ್ ವ್ಯಾಲ್ಯೂ ಏನಿದೆ, ಆ ವ್ಯಾಲ್ಯುವಿನಲ್ಲಿ ಭೂಸ್ವಾಧೀನ ಮಾಡಿ ಅವರಿಗೆ ಕೊಡಬೇಕು. 1999-2000 ರ ಅವತ್ತು ಡೆಪ್ಯುಟಿ ಕಮಿಷನರ್ ಏನು ಗೈಡ್‌ಲೈನ್ ವ್ಯಾಲ್ಯು ನಿಗದಿ ಮಾಡಿದರು, ಆ ಪ್ರಕಾರ ನಿಮ್ಮ ಭೂಮಿಯನ್ನು ಕೊಡುತ್ತೀರಾ? ನಿಮ್ಮದಾಗಿದ್ದರೆ ಕೊಡುತ್ತಿದ್ದೀರಾ? ಮಂತ್ರಿಗಳಾಗಿದ್ದರೆ ಕೊಡುತ್ತಿದ್ದೀರಾ? ಅಧಿಕಾರಿಗಳಾಗಿದ್ದರೆ ಕೊಡುತ್ತಿದ್ದೀರಾ? ನೀವೆಲ್ಲಾ ಯಾರ ಅಪ್ಪನ ಮನೆಯದೆಂದು ಕೊಟ್ಟಿರಿ?

ಶ್ರೀ ಕೆ. ಶ್ರೀನಿವಾಸಗೌಡ : ಒಂದು ನಿಮಿಷ ಮಾನ್ಯ ಸದಸ್ಯರು ಈಲ್ಡ್ ಆದರೆ, ಪುಷ್ಠಿ ಕೊಡುವಂತಹ ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : 1999-2000 ಗೈಡ್‌ಲೈನ್ ವ್ಯಾಲ್ಯುನಲ್ಲಿ ಅವನಿಗೆ ಆ ವ್ಯಾಲ್ಯುನಲ್ಲಿ ನೋಟಿಫಿಕೇಷನ್ ಮಾಡಿ, ಅಕ್ವಿಸಿಷನ್ ಮಾಡಿ ಕೊಡಬೇಕು, ಇದಕ್ಕೆ ನಾವೆಲ್ಲಾ ಭಾಗಿಗಳಾಗಬೇಕಾ? ಇದಕ್ಕೆ ನಾವೆಲ್ಲಾ ಭಾಗಿಗಳಾಗಬೇಕಾ?

(ಅಡಚಣೆ)

ಅಷ್ಟೊಂದು ಆಸ್ತಿಯನ್ನು ಹತ್ತು ರೂಪಾಯಿಗೆ ಲೀಸ್‌ಗೆ ಕೊಟ್ಟಿದ್ದೀರಲ್ಲಾ ಈ ದೇಶವನ್ನು ಮಾರಾಟ ಮಾಡುತ್ತಿದ್ದೀರಿ.

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಿದ್ದಾರೆ, ನಾನು ಮಾತನಾಡುತ್ತಿದ್ದೇನೆ, ಮಾನ್ಯ ರಾಮಸ್ವಾಮಿಯವರು ಹೇಳಿದ್ದಕ್ಕೆ ಅಧಿಕಾರಿಗಳು ಯಾವ ರೀತಿಯಾಗಿ ಇದ್ದಾರೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ.

(ಅಡಚಣೆ)

ಮಾನ್ಯ ಸದಸ್ಯರೊಬ್ಬರು : ಅಧಿಕಾರಿಗಳು ಅಷ್ಟೇ ಅಲ್ಲ ಸ್ವಾಮಿ, ಅದರಲ್ಲಿ ಬೇರೆ ಜನರೂ ಶಾಮೀಲಾಗಿದ್ದಾರೆ, ಅವರು ಮಾನ್ಯ ಎ.ಟಿ. ರಾಮಸ್ವಾಮಿ ಸರಿಯಾಗಿ ಹೇಳುತ್ತಿದ್ದಾರೆ, ಇಡೀ ಕರ್ನಾಟಕ ರಾಜ್ಯದ ರೈತರ ಆಸ್ತಿಯನ್ನು ನುಂಗಿ ಹಾಳು ಮಾಡಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ : ಕೋಲಾರ ಜಿಲ್ಲೆಯಲ್ಲಿ 500 ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆ, 2006ನೇ ಇಸವಿಯಲ್ಲಿ ಇದೇ ಸರ್ಕಾರ ಒಂದು ಎಕರೆಗೆ ರೂ. 24,000 ಮಾಡಿದೆ, ಸರ್ಕಾರ ಎಂದರೆ ನೀವುಗಳಲ್ಲ, ಅಧಿಕಾರಿಗಳು, ಇವತ್ತು ಒಂದು ಎಕರೆಗೆ 15–20 ಲಕ್ಷಕ್ಕೆ ಆ ತಾಲ್ಲೂಕಿನಲ್ಲಿ ಹೋಗುತ್ತಿದೆ, ಕೋಲಾರ ತಾಲ್ಲೂಕಿನಲ್ಲಿ ಯಾವುದೋ ಒಂದು ಮೆಟ್ರೋ ಸಿಟಿಯನ್ನು ಬೆಂಗಳೂರಿನವರು ಯಾರೋ ಮಾಡಿದ್ದಾರೆ, ಜಮೀನಿನ ಬೆಲೆ ಇದ್ದಕ್ಕಿದ್ದಂತೆ ಹೆಚ್ಚಾಗಿದೆ, 2000ನೇ ಇಸವಿಯಲ್ಲಿದ್ದ ಗೈಡೆನ್ಸ್ ವ್ಯಾಲ್ಯುವನ್ನು ರಾಮಸ್ವಾಮಿಯವರು ಹೇಳುತ್ತಿದ್ದಾರೆ; ಕೋಲಾರ ತಾಲ್ಲೂಕಿನಲ್ಲಿ 2006ರಲ್ಲಿ ಆಗಿದೆ, ಮಾರ್ಚ್‌ನಲ್ಲಿ ತಮ್ಮ ಗಮನಕ್ಕೆ ತಂದಿದ್ದೆ, ಈ ರೀತಿಯ ಪರಿಸ್ಥಿತಿಗೆ ಕಾರಣರಾದ ಇಂತಹ ಅಧಿಕಾರಿಗಳ ಮೇಲೆ ನಾವೂ ನಿಗಾ ವಹಿಸದೇ ಇದ್ದರೆ, ರೈತರ ರಕ್ತವನ್ನು ಹಿಂಡುತ್ತಾರೆಂದು ಹೇಳುತ್ತೇನೆ. ಮಾನ್ಯ ಸದಸ್ಯರು ಹಿಂದೆ ಕುಳಿತುಕೊಂಡು ಬರೀ ವಿರೋಧ ಮಾಡುವುದಲ್ಲ, ನಾವೂ ರೈತರೇ, ರೈತರ ಕಷ್ಟವನ್ನು ರಾಮಸ್ವಾಮಿಯವರು ಹೇಳುತ್ತಿದ್ದಾರೆ; 2006ರಲ್ಲಿ ಎಕರೆಗೆ ರೂ. 24,000 ನಿಗದಿ ಮಾಡಿದ್ದಾರೆ, ಅಂತಹ ಅಧಿಕಾರಿಗಳನ್ನು sadist ಎಂದು ಹೇಳಬೇಕಾ; ಅಂಥ ಅಧಿಕಾರಿಗಳನ್ನು ನೀರಿಲ್ಲದೆ ಜಾಗಕ್ಕೆ ಹಾಕಬೇಕಾ ಹೇಳಿ.

ಮಾನ್ಯ ಸದಸ್ಯರೊಬ್ಬರು : ಸನ್ಮಾನ್ಯ ಶ್ರೀನಿವಾಸಗೌಡರು ಹೇಳುವುದು ಸರಿ ಇದೆ, ಆ ಇಪ್ಪತ್ತೇಳು ಅಧಿಕಾರಿಗಳಿದ್ದಾರಲ್ಲಾ ಸ್ವಾಮಿ, ಶ್ರೀನಿವಾಸಗೌಡರೇ ಅವರನ್ನು ವಿಧಾನಸೌಧದ ಮುಂದೆ ಕರೆತಂದು ನೇಣು ಹಾಕಬೇಕು, ಆಗ ಸರಿಹೋಗುತ್ತದೆ ನೋಡಿ.

ಶ್ರೀ ಆರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರು ಹೇಳಿರುವುದು ಸಹಜ. ಆದರೆ ಆ ಅಧಿಕಾರಿಗಳನ್ನು ಆಳುವಂತಹ ರಾಜಕಾರಣಿಗಳಿದ್ದಾರಲ್ಲಾ, ಅವರಿಗೆ ಸರಿಯಾಗಿ ಮೂಗುದಾರ ಹಿಡಿಯುವುದಕ್ಕೆ ಬಾರದೆ ಇದ್ದರೆ ಏನು ಮಾಡುವುದು? ಅವರ್‍ಯಾರು ಎಂಬುದನ್ನು ಹೇಳಿ ಅಥವಾ ಅಧಿಕಾರಿ ಯಾರು ಎಂದಾದರೂ ಹೇಳಿ, ಏಕೆಂದರೆ ಬಿಎಂಐಸಿನಲ್ಲಿ ಯಾವ್ಯಾವ ಅಧಿಕಾರಿಗಳು ಯಾವ್ಯಾವ ರಾಜಕಾರಣಿಗಳಿದ್ದಾರೆಂಬುದು ಹೊರಗೆ ಬರಲಿ. ಸರಿಯಾಗಿ ಚರ್ಚೆಯಾಗಲಿ, ಈ ರಾಜ್ಯದ ಜನತೆಗೆ ಗೊತ್ತಾಗಲಿ.

ಶ್ರೀ ಎ.ಟಿ. ರಾಮಸ್ವಾಮಿ : ಈಗೇನು Guidane Value ಮಾಡಿದ್ದೀರಿ, ಅದನ್ನು ವೈಜ್ಞಾನಿಕವಾಗಿ ಮಾಡಲೇ ಇಲ್ಲ, ರೈತರ ಹಿತದೃಷ್ಟಿಯಿಂದ ರಾಜ್ಯದ ಹಿತದೃಷ್ಟಿಯಿಂದ ಮಾಡಲಿಲ್ಲ, ಆ ಕಂಪನಿಯ ಹಿತದೃಷ್ಟಿಯಿಂದ ಇದನ್ನು ಮಾಡಿಕೊಟ್ಟಿದ್ದೀರಿ. ಅದಕ್ಕೇ ನಾನು ಹೇಳಿದ್ದು, ಸರ್ಕಾರ ಹಾಗೂ ಕಂಟ್ರಾಕ್ಟರ್ ಮಧ್ಯೆ they are hand in glove with each other ಎಂದು ಪರಸ್ಪರ ಶಾಮೀಲಾಗಿದ್ದೀರಿ ಎನ್ನುವ ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳಿದೆ, ನಾನು ಮತ್ತೆ ಪುನರುಚ್ಚಾರ ಮಾಡುತ್ತಿದ್ದೇನೆ. ಅವನು ಹಣವಿಲ್ಲವೆಂದು ನಿಮಗೆ letter of comfort ಕೊಡಿ, guarantee -

ಕೊಡಿ ಎಂದು ಕೇಳಿದಾಗ, 150 ಕೋಟಿ ಸಾಲ ತೆಗೆದುಕೊಳ್ಳುವುದಕ್ಕೆ ನಮ್ಮ ಭೂಮಿ, ಸರ್ಕಾರದ ಭೂಮಿಯನ್ನು ಬ್ಯಾಂಕ್‌ನಲ್ಲಿ ಅಡವಿಟ್ಟು 150 ಕೋಟಿ ರೂಪಾಯಿಗಳನ್ನು ಕೊಟ್ಟ ಮೇಲೆ ಕೆಲಸ ಪ್ರಾರಂಭವಾಗಿದ್ದು, ನಾನು ಆ ದಿನಾಂಕವನ್ನು ಹೇಳುತ್ತೇನೆ. ಅಶೋಕ್‌ರವರೇ ವಿದೇಶದಿಂದ ಎಷ್ಟು ಕೋಟಿ ಬಂಡವಾಳವನ್ನು ತಂದಿದ್ದಾರೆಂದು ಹೇಳಿ ಎಂದು ಕೇಳಿದ್ದೇನೆ. ನಾನು ಈಗಾಗಲೇ ಅದನ್ನೂ ಕೂಡ ಹೇಳಿದ್ದೇನೆ. ಅವನು ತೀರಿಸಲಿಲ್ಲ, ಕೆಲಸ ಮಾಡಲಿಲ್ಲ, ಆ 150 ಕೋಟಿ ರೂಪಾಯಿಗಳಿಗೆ

(ಈ ಸಂದರ್ಭದಲ್ಲಿ ಶ್ರೀ ಆರಗಜ್ಞಾನೇಂದ್ರರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಯಾರು ಜವಾಬ್ದಾರರು? ಸರ್ಕಾರದವರು ಜವಾಬ್ದಾರರಾ, ಕರ್ನಾಟಕ ರಾಜ್ಯದ ರೈತರಿಗೆ ಮಂತ್ರಿ ಮಂಡಲದವರು ಕೊಡುತ್ತೀರಾ? ಗ್ಯಾರಂಟಿಯನ್ನು ಯಾರ ಮನೆಯ ದುಡ್ಡೆಂದು ಕೊಟ್ಟಿರಿ? ಅವನು ಕೆಲಸವೇ ಮಾಡಲಿಲ್ಲ 150 ಕೋಟಿ ತೆಗೆದುಕೊಂಡು ಹೋದ ಎಂದರೆ ಆಗ ಯಾರು ಜವಾಬ್ದಾರರು ಹೇಳಿ? ಯಾರು ತೀರಿಸುತ್ತಿದ್ದರು ಹೇಳಿ? ಇಂತಹ ಅಗ್ರಿಮೆಂಟ್ ಅನ್ನು ನಾವು ಒಪ್ಪಿಕೊಂಡು, ಕುಳಿತುಕೊಂಡು ಹೋಗುವುದಕ್ಕೆ ಬಂದಿದ್ದೇವೆಂದು ತಿಳಿದುಕೊಂಡಿದ್ದೀರಾ? ಕೆಸರನ್ನು ಎರೆಚಾಡುವುದಕ್ಕೆ ನೀವು ಬಂದಿದ್ದೀರಾ? ಏಕೆ ನಿಮ್ಮ ಕೈ ಬಾಯಿ ಕಟ್ಟಿತು? ಏನಾಗಿತ್ತು? ಯಾವ ಧರ್ಮ ಸಂಕಟದಲ್ಲಿ ಸಿಕ್ಕಿಹಾಕಿಕೊಂಡಿದ್ದೀರಿ? ಅದಕ್ಕೇ ನಾವು ಹೇಳಿದ್ದು, ನಾವ್ಯಾರೂ ಇದಕ್ಕೆ ಭಾಗಿಗಳಾಗುವುದಕ್ಕೆ ಸಿದ್ಧರಿಲ್ಲ, ನೀವು ಹಿಂದೆ ಇದ್ದವರು ಈಗ ಇರುವವರು, ಅಶೋಕ್‌ರವರೇ ನೀವೂ ಕೂಡ ಅಷ್ಟೇ.............you are running the Government.

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಇವರು ಯಾರಿಗೆ ಮಾತನಾಡುತ್ತಿದ್ದಾರೆ? ಇವರು ಗಧಾಪ್ರಹಾರ ಯಾರ ಮೇಲೆ?

(ಅಡಚಣೆ)

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಅಗ್ರಿಮೆಂಟ್ ಮಾಡಿ ಜಮೀನನ್ನು ಯಾರ್ಯಾರು ಕೊಟ್ಟರೋ, ಯಾರ್ಯಾರೋ ಆಗ ನಾವಿರಲಿಲ್ಲ, ಎಷ್ಟು ದುಡ್ಡು ತೆಗೆದುಕೊಂಡಿದ್ದಾರೋ, ಇದೆಲ್ಲಾ ನಾವಿದ್ದಾಗೇನೂ ಆಗಿಲ್ಲ; ಯಾರಿದ್ದಾರೋ ಅವರು ಅನುಭವಿಸುತ್ತಾರೆ, ಯಾರು ಅಧಿಕಾರದಲ್ಲಿದ್ದರೊ, ಯಾರು ಅಗ್ರಿಮೆಂಟ್ ಮಾಡಿಕೊಂಡರೋ ಅವರು ಅನುಭವಿಸುತ್ತಾರೆ, ಅಧಿಕಾರದಲ್ಲಿ ನಾವಿರಲಿಲ್ಲ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ನಿಮ್ಮ ಹೆಸರು ಏಕೆ ಕೇಳಿಬರುತ್ತಿದೆ? ನಿಮ್ಮ ಹೆಸರನ್ನು ಏಕೆ ಹೇಳುತ್ತಿದ್ದಾರೆ?

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಹೇಳುತ್ತಾರೆ, ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಏನೇನು ಹೋಯಿತೆಂದು ಬಂಡವಾಳವನ್ನು ಸ್ವಲ್ಪ ಹೊರಗೆ ತೆಗೆಯೋಣ ಇರಿ, ಸ್ವಲ್ಪ ತಡೆದುಕೊಳ್ಳಿ. ಈಗಾಗಲೇ, ದೇಶಪಾಂಡೆಜಿಯವರು ಹೇಳಿದರು, ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ಮುಂಚೆ ಅಲ್ಲಿ ಹಣವನ್ನು ಸರ್ಕಾರಕ್ಕೆ ಕೊಟ್ಟ ಮೇಲೆ ಭೂಸ್ವಾಧೀನ ಪ್ರಕ್ರಿಯೆಯಾಗಬೇಕು. ಹಣವನ್ನೇ ಕೊಡದೆ ಭೂಸ್ವಾಧೀನ ಮಾಡಲು ಹೊರಟರಲ್ಲಾ, ಒಂದು ಎರಡು ಎಕರೆಯಲ್ಲ, ಸಾವಿರಾರು ಎಕರೆಯನ್ನು ಮಾಡುವುದಕ್ಕೆ

ಹೊರಟರಲ್ಲಾ, ನಿಯಮಗಳನ್ನು ಕ್ರಮಗಳನ್ನು ಗಾಳಿಗೆ ತೂರಿ ಏತಕ್ಕೆ ಫೇವರ್ ಮಾಡುವುದಕ್ಕೆ ಹೊರಟಿರಿ? ಕಾನೂನುಗಳನ್ನು ಗಾಳಿಗೆ ತೂರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಹಣವನ್ನು ಮೊದಲೇ ಸರ್ಕಾರಕ್ಕೆ ಡೆಪಾಸಿಟ್ ಮಾಡದೆ ಭೂಸ್ವಾಧೀನ ಮಾಡುವುದಕ್ಕೆ ಏಕೆ ಹೊರಟಿರಿ? ಅದಕ್ಕೇ ಹೇಳಿದ್ದು, ಇದು ಪಬ್ಲಿಕ್ ಪ್ರಾಜೆಕ್ಟಾ ಅಥವಾ ಪ್ರೈವೇಟ್ ಪ್ರಾಜೆಕ್ಟಾ? ಯಾರೋ ಒಬ್ಬ ರೈತ ಯಾವುದಕ್ಕಾದರೂ ಅಥವಾ ಆಶ್ರಯಕ್ಕೆ ಸಂಬಂಧಿಸಿದಂತೆ ದಾರಿ ಬಿಡಿಸಿಕೊಳ್ಳುವುದಕ್ಕೆ ಪಂಚಾಯಿತಿಗೆ ಮೊದಲೇ ಅವರು 15–20 ಸಾವಿರ ರೂ.ಗಳನ್ನು ಡೆಪಾಸಿಟ್ ಮಾಡಬೇಕು; ಆಮೇಲೆ ಪ್ರಕ್ರಿಯೆಗಳನ್ನು ಪ್ರಾರಂಭ ಮಾಡುತ್ತಾರೆ. ಇಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಬೆಲೆ ಬಾಳುವಂತಹ ಜಮೀನಿಗೆ, ನೀವು ಪ್ರಕ್ರಿಯೆಗಳನ್ನು ಪ್ರಾರಂಭ ಮಾಡಿದರಲ್ಲಾ, without a single rupee, - ನಿಮಗೆ ಏನು ದಾಕ್ಷಿಣ್ಯವಿತ್ತು? ಏಕೆ ನಿಮ್ಮ ಕೈ ಬಾಯಿ ಕಟ್ಟಿ ಹೋಗಿತ್ತು? ಯಾರಿಗೆ favour ಮಾಡಲಿಕ್ಕೆ ಮಾಡಿದ್ದೀರಿ ಇದನ್ನು? ನಾನು ಅದಕ್ಕೇ ನೇರವಾಗಿ ಹೇಳಿದ್ದು, ಕಂಟ್ರಾಕ್ಟರ್ ಮತ್ತು ಸರ್ಕಾರ ಪರಸ್ಪರ ಶಾಮೀಲಾಗಿ ಈ ಪ್ರಾಜೆಕ್ಟ್ ಅನುಷ್ಠಾನ ಮಾಡುವುದಕ್ಕೆ ಹೊರಟಿದ್ದೀರಿ. ಈ ರಾಜ್ಯದ ಮೇಲೆ ಒಂದು ದೊಡ್ಡ ಬಂಡೆಯನ್ನು ಎತ್ತಿ ಹಾಕಿದ್ದೀರಿ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಏನು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇ ಬರುತ್ತದೆ, ಅದರ ಆಜುಬಾಜುವಿನಲ್ಲಿ ರೈತರ ಜಮೀನು ಏನು ಉಳಿದುಕೊಂಡಿದೆ, ಇನ್ನೂ ಅಕ್ವಿಸಿಷನ್ ಆಗಿಲ್ಲ, ಅವರು ಏನಾದರೂ ಮಾಡಬೇಕಿದ್ದರೆ ಆ ದೊಣ್ಣೆ ನಾಯಕನ ಅಪ್ಪನ ಅನುಮತಿ ಬೇಕು. ಕೃಷಿ ಭೂಮಿ ಬಿಟ್ಟು ಬೇರೆಯದಕ್ಕೆ ಪರಿವರ್ತನೆ ಮಾಡಿಕೊಳ್ಳುವುದಿದ್ದರೆ ಆ ದೊಣ್ಣೆನಾಯಕನ ಅನುಮತಿ ತೆಗೆದುಕೊಂಡು ನಮ್ಮ ರಾಜ್ಯದ ರೈತರು ಅವರ ಹಂಗಿನಲ್ಲಿ ಬಾಳುವೆ ನಡೆಸಬೇಕು. ಇದು ನಿಮ್ಮ ಅಗ್ರಿಮೆಂಟ್. ಎಂತಹ ವಿಪರ್ಯಾಸ! ಅದಕ್ಕೆ ಅಗ್ರಿಮೆಂಟನ್ನು ಡಿಸ್‌ಕ್ಲೋಸ್ ಮಾಡಬಾರದು. ಕಾನ್‌ಫಿಡೆನ್‌ಷಿಯಲ್ ಕ್ಲಾಸ್. ಏಕೆ? ನಿಮ್ಮ ಆಟಗಳೆಲ್ಲವೂ ಗೊತ್ತಾಗಿ ಬಿಡುತ್ತದೆ ಅಂತನಾ? ಏನೇನು ಮಾಡಿದ್ದೀರಿ ಎಂದು ಹುಳುಕುಗಳು ಬಯಲಿಗೆ ಬರುತ್ತವೆ ಅಂತಾ? ಏತಕ್ಕೆ ಬೇಕು ಕಾನ್‌ಫಿಡೆನ್‌ಷಿಯಲ್ ಕ್ಲಾಸ್? ನಿಮಗೆ ಗೊತ್ತಿಲ್ಲ; ಈ ಕಡೆ ಎಕ್ಸ್‌ಪ್ರೆಸ್ ಹೈವೇ ಮಾಡಿ ಆದ ಮೇಲೆ, ಆ ಆರ್ಡರ್ ಓದುತ್ತೇನೆ, ಜನರು ಈ ರಸ್ತೆ ಮೇಲೆ ತಿರುಗಾಡುವ ಹಾಗಿಲ್ಲ. ಅವನ ಎಕ್ಸ್‌ಪ್ರೆಸ್ ಹೈವೇಯಲ್ಲಿಯೇ ತಿರುಗಾಡಬೇಕು. ದುಡ್ಡು ಕೊಟ್ಟು ತಲೆ ಬೋಳಿಸಿಕೊಳ್ಳಬೇಕು. ದುಡ್ಡು ಕೊಟ್ಟು ಅಲ್ಲಿಯೇ ತಿರುಗಾಡಬೇಕು. ಅದಕ್ಕೂ ಇವರ ಒಪ್ಪಂದ. ಒಪ್ಪಿಗೆ ಕೊಟ್ಟಿಬಿಟ್ಟಿದ್ದಾರೆ ಇವರು. ಮೊದಲು ಈ ರಸ್ತೆ ಆದ ಮೇಲೆ ಈ ಟೌನ್‌ಶಿಪ್ಸ್ ನಿಮ್ಮ ಪವರ್ ಇದನ್ನೆಲ್ಲಾ ಮಾಡಬೇಕೆಂದು ಹೇಳಿ. ಅದು ಮಾಡುವ ಮುಂಚಿತವಾಗಿ ಭೂಮಿಯನ್ನು ಮಾರಾಟ ಮಾಡುವುದಕ್ಕೆ ಹೊರಟರು. ನಾನು ಒಂದು ಪತ್ರ ಓದುತ್ತೇನೆ. ಕಳೆದ ತಿಂಗಳಲ್ಲಿ ಬರೆದಿರತಕ್ಕಂಥದ್ದು. ಅಲೈನ್‌ಮೆಂಟ್ ಎಲ್ಲಿ ಎಂದು ನಿಖರವಾಗಿ ಕೂಡ ಗುರುತು ಮಾಡಿಲ್ಲ. ಎಲ್ಲಿ ರಸ್ತೆ ಹೋಗುತ್ತದೆ ಎಂದು ಇನ್ನೂ ಅಲೈನ್‌ಮೆಂಟ್ ಮಾಡಿಲ್ಲ. ಇಂತಹ ಒಂದು ಮೆಗಾ ಪ್ರಾಜೆಕ್ಟನ್ನು ಮಾಡುವಾಗ, ಅಲೈನ್‌ಮೆಂಟ್ ಮೊದಲು ಮಾಡಿ ಎಷ್ಟು ಭೂಮಿ ಬೇಕಾಗುತ್ತದೆ, ಎಂದು ಇದರ ಬಗ್ಗೆ ಒಂದು ಸ್ಪಷ್ಟತೆ ಬೇಕಲ್ಲಾ. ಅಲೈನ್‌ಮೆಂಟ್ ಎಲ್ಲಿ ಹೋಗುತ್ತದೆ ಎಂಬ ಸ್ಪಷ್ಟತೆ ಇಲ್ಲ, ಭೂಮಿ ಇಷ್ಟು ಬೇಕೆಂದು ನಿಖರವಾಗಿ ಹೇಳುತ್ತಿಲ್ಲ. ಒಂದೊಂದು ಸಂದರ್ಭದಲ್ಲಿ ಒಂದೊಂದು ವಿಸ್ತೀರ್ಣ. ಇದನ್ನು

ಮಾಡಿಕೊಂಡು ಹೋದ ಮೇಲೆ ಇವತ್ತು ಮಾನ್ಯ ದೇಶಪಾಂಡೆಯವರು ಅಲೈನ್‌ಮೆಂಟ್ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದರು. Alignment was changing frequently ಎಂದು ಕೆಲವು ಒಳ್ಳೆಯ ಮಾತುಗಳನ್ನು ಹೇಳಿದರು. ಏಕೆ alignment was changing frequently? ಅವರು ಲೆಟರ್‌ಅನ್ನೂ ಕೂಡ ಬರೆದಿದ್ದಾರೆ. ಇಂತಹ ಒಂದು ಮೆಗಾ ಪ್ರಾಜೆಕ್ಟ್‌ನ್ನೂ ಅಪ್ರೂವ್ ಮಾಡುವುದಕ್ಕೂ ಮುಂಚಿತವಾಗಿ ನೀವು ಅಲೈನ್‌ಮೆಂಟ್ ಮಾಡಿಕೊಂಡಿಲ್ಲ. ನೀವು ತಯಾರಿನೇ ಆಗಿಲ್ಲ. ನಿಮ್ಮ ಗಮನ ಎಲ್ಲಿತ್ತು? ಏತಕ್ಕಾಗಿ ಕಾತುರ ಪಡುತ್ತಿತ್ತು? ಇದು 100ಕ್ಕೆ ನೂರು ಸಂಶಯ ಒಳಗಾಗುವಂತಹ ವಿಷಯ. ಇದರಲ್ಲಿ ಪಾರದರ್ಶಕತೆ ಇಲ್ಲ, ನಿಷ್ಟೆ ಇಲ್ಲ, ಒಂದು ನಿಖರತೆ ಇಲ್ಲ, ಇಂತಹ ಪ್ರಾಜೆಕ್ಟ್ ಮಾಡುವುದಕ್ಕೆ ಈ ಸದನ, ನಾವು ಸಮ್ಮತಿಸಬೇಕಾ ಎಂದು ನಮ್ಮ ಎಲ್ಲಾ ಗೌರವಾನ್ವಿತ ಸದಸ್ಯರು ಆಲೋಚನೆ ಮಾಡಬೇಕು. ಇವು ಅತ್ಯಂತ ಕೆಟ್ಟ ಅಗ್ರಿಮೆಂಟ್ ಮತ್ತು ಸಪ್ಲಿಮೆಂಟರಿ ಅಗ್ರಿಮೆಂಟ್‌ಗಳು. ಆ ಕಂಪನಿಯ ಹಿತಕ್ಕೋಸ್ಕರ ಮಾಡಿಕೊಂಡಿರತಕ್ಕಂತಹ ಅಗ್ರಿಮೆಂಟ್‌ಗಳು ಇವು. ಇದು ಪಬ್ಲಿಕ್ ಪ್ರಾಜೆಕ್ಟ್ ಆಗಿದ್ದ ಮೇಲೆ, ಇದಕ್ಕೆ ಒಂದು ಕಂಟ್ರೋಲ್ ಮೆಕ್ಯಾನಿಸಮ್ ಇರಬೇಕಲ್ಲಾ? ಸನ್ಮಾನ್ಯ ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ನಮ್ಮ ಮಂತ್ರಿಗಳು ಮತ್ತು ಲೋಕೋಪಯೋಗಿ ಮಂತ್ರಿಗಳು ಹೇಳಬೇಕು. ಇದಕ್ಕೆ ಕಂಟ್ರೋಲ್ ಮೆಕ್ಯಾನಿಸಮ್ ಏನು? ನೀವು ರಸ್ತೆ ಟೆಸ್ಟ್ ಮಾಡುವುದಕ್ಕೆ ಹೋದರೆ, ನೀವ್ಯಾರು ಟೆಸ್ಟ್ ಮಾಡುವುದಕ್ಕೆ ಎಂದು ಹೇಳುತ್ತಾರೆ. ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಒಪೀನಿಯನ್ ತೆಗೆದುಕೊಳ್ಳಲಿಲ್ಲ ಎಕ್ಸ್‌ಟರ್ನಲ್ ಟೆಕ್ನಿಕಲ್ ಆಡಿಟ್ ಸರಿಯಾಗಿ ಮಾಡಿಸಲಿಲ್ಲ, ಏನೋ ಒಂದು ಆಡಳಿತಾತ್ಮಕ ಮಂಜೂರಾತಿ ಕೊಟ್ಟು ತೀರ್ಮಾನ ಮಾಡಿ, ಯೋಜನೆಯನ್ನು ಅನುಷ್ಠಾನ ಮಾಡುವುದಕ್ಕೆ ಹೊರಟಿದ್ದು ನಿಜಕ್ಕೂ ಕೂಡ ವಿಪರ್ಯಾಸ, ಈ ರಾಜ್ಯದ ದುರ್ದೈವ. ಇದೊಂದು ಕರಾಳ ಅಧ್ಯಾಯ ಎಂದು ಹೇಳಲಿಕ್ಕೆ ನಾನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛಿಸುತ್ತೇನೆ. ಮೊದಲು 1996ರಲ್ಲಿ ಭಾರತ್ ಫೋರ್ಜ್ ಲಿಮಿಟೆಡ್‌ನವರ ಹೆಸರಿನಲ್ಲಿ 18,408 ಎಕರೆ ಬೇಕು ಈ ಪ್ರಾಜೆಕ್ಟ್ ಮಾಡಲಿಕ್ಕೆ ಎಂದು ವರದಿ ಕೊಟ್ಟರು. ಅವರೇ ಕಂಪನಿಯವರು ಕೊಟ್ಟಿದ್ದು, 18,408 ಎಕರೆ ಬೇಕೆಂದು ಭಾರತ್ ಫೋರ್ಜ್ ಲಿಮಿಟೆಡ್ ಎಂಬ ಹೆಸರಿನಲ್ಲಿ. ಆ ಮೇಲೆ ಫ್ರೇಮ್‌ವರ್ಕ್ ಅಗ್ರಿಮೆಂಟ್ ಆಯಿತು. 20,193 ಎಕರೆಗೆ ಅಗ್ರಿಮೆಂಟ್ ಆಯಿತು. 20.11.01ರಲ್ಲಿ ಫ್ರೇಮ್‌ವರ್ಕ್ ಅಗ್ರಿಮೆಂಟ್ ಉಲ್ಲಂಘನೆ ಮಾಡಿ 29,000 ಎಕರೆಗೆ ಗೆಜೆಟ್ ನೋಟಿಫಿಕೇಷನ್ ಆಯಿತು. ಸುಪ್ರೀಂಕೋರ್ಟ್‌ಗೆ affidavit ಸಲ್ಲಿಸುತ್ತಾರೆ, 49,053 ಎಕರೆ ಏಳು ಗುಂಟೆ ಎಂದು ಪ್ರಮಾಣ ಪತ್ರ ಸಲ್ಲಿಸುತ್ತಾರೆ. ಮೊದಲು 1996ರಲ್ಲಿ 18,408 ಎಕರೆ, 1997ರಲ್ಲಿ ಮೂಲ ಒಪ್ಪಂದ ಆದಾಗ 20,193 ಎಕರೆ, 20.11.01ರಲ್ಲಿ ಗೆಜೆಟ್ ನೋಟಿಫಿಕೇಷನ್ ಮಾಡಿದ್ದು 29,000 ಎಕರೆಗೆ ಸುಪ್ರೀಂಕೋರ್ಟ್‌ಗೆ ಇತ್ತೀಚೆಗೆ ಪ್ರಮಾಣ ಪತ್ರ ಸಲ್ಲಿಸಿದ್ದು 49,053 ಎಕರೆ ಏಳು ಗುಂಟೆ. ಇದೇನು ಅಗ್ರಿಮೆಂಟ್ ಪ್ರಾಜೆಕ್ಟಾ, ಹೇಳುವವರು ಕೇಳುವವರು ಯಾರೂ ಇಲ್ಲವಾ? ಇಂಥವೆಲ್ಲಾ ಆಗಲಿಕ್ಕೆ, ಹೀಗೇ ಮಾಡಿಕೊಂಡು ಹೋಗುವುದಕ್ಕೆ ಬಿಟ್ಟರೆ, ನನಗಂತೂ ಅನ್ನಿಸುತ್ತದೆ, ಈ ಸದನದ ಸದಸ್ಯನಾಗಿ ನಾನು ಮುಂದುವರೆಯಬೇಕೋ ಬೇಡವೋ ಎಂದು ಯೋಚನೆ ಮಾಡಬೇಕಾದ ಸಂದಿಗ್ಧ ಪರಿಸ್ಥಿತಿ ಬಂದಿದೆ. ಜನ ನಮಗೆ ದೂಷಣೆ ಮಾಡುತ್ತಾರೆ. ಜನರ ಜೊತೆಗೆ ನಾವೂ ಸೇರಿಕೊಂಡು ಸರ್ಕಾರದ ವಿರುದ್ಧ ಮತ್ತು ಈ ಪ್ರಾಜೆಕ್ಟ್ ವಿರುದ್ಧ ಚಳುವಳಿಗೆ

ಧುಮುಕಬೇಕಾಗುತ್ತದೇನೋ; ಅದಕ್ಕೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನಾನು ಬಹಳ ವಿನಯಪೂರ್ವಕವಾಗಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. 49,053 ಎಕರೆ ಏಳು ಗುಂಟೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕೊಟ್ಟಿದ್ದಾರೆಂದು ಡೀಟೇಲ್ಸ್ ಇದೆ. ನಮ್ಮ ಸ್ನೇಹಿತರು ಬಹಳ ಕಾತುರರಾಗಿದ್ದಾರೆ. ಇದಕ್ಕಿಂತ ಬಹಳ ಮುಖ್ಯವಾದ ವಿಷಯ ಇದೆಯಂತೆ. ಇದು ಮುಖ್ಯವಾದುದು ಅಲ್ಲವಂತೆ. ನಾನು ಹೇಳಿದ ಹಾಗೆ, ಇಡೀ ವಿಶ್ವದಲ್ಲಿ ವಾಟರ್ ಗೇಟ್ ಏನಿತ್ತು, ಭೋಫೋರ್ಸ್ ಏನಿತ್ತು, ನಮ್ಮ ಬಿಹಾರದ Fodder Scam ಏನಿತ್ತು, ಅದೆಲ್ಲವನ್ನೂ ಕೂಡ ಮೀರಿಸತಕ್ಕಂಥಹ ಹಗರಣ ಇದು. ಛಾಪ ಕಾಗದ ಹಗರಣ ಏನೂ ಅಲ್ಲವೇ ಅಲ್ಲ ಇದೆ ಮುಂದೆ. 9.50 ಕಿ.ಮೀ. ರಸ್ತೆ ಆಗಿದೆ. ಆ ಪ್ರದೇಶವನ್ನು ಎಲ್ಲಿ ರಸ್ತೆ ಆಗಿದೆ, ಆ ರಸ್ತೆ ಆಗಿರತಕ್ಕಂತಹ ಜಾಗವನ್ನು ಮಾರ್ಟ್‌ಗೇಜ್ ಮಾಡಲಿಕ್ಕೆ ಅವಕಾಶ ಕೊಟ್ಟು ಬೇಕಾದರೆ ಬ್ಯಾಂಕಿನಿಂದ ಹಣ ತೆಗೆದುಕೊಳ್ಳಬಹುದಾಗಿತ್ತು. ಮಾಡಿರುವ ರಸ್ತೆ ಉದ್ದ 9.50 ಕಿ.ಮೀ. ಬೇರೆ ಕಡೆ ಲ್ಯಾಂಡ್ ಮಾರ್ಟ್‌ಗೇಜ್ ಮಾಡಿ ಇದರ ಜೊತೆಗೆ ಹಣ ತೆಗೆದುಕೊಳ್ಳುವುದಕ್ಕೆ ಇವರು ಗ್ಯಾರಂಟಿ ಕೊಟ್ಟಿದ್ದಾರೆ. ಅಂಡರ್ ಪಾಸಸ್, ಓವರ್ ಬ್ರಿಡ್ಜಸ್ ಎಲ್ಲಾ ಮಾಡಿದ್ದಾರೆ. ಹಳ್ಳಿಯವರು ಅಲ್ಲಿಂದ ಹೋಗಬೇಕು. ಕೆಲವು ಹಳ್ಳಿಯವರು 10 ರಿಂದ 15 ಕಿ.ಮೀ. ಸುತ್ತಿಕೊಂಡು ಬರಬೇಕು. ಇಲ್ಲವೆಂದರೆ, ಅಲ್ಲಿ ಹೋಗಬೇಕೆಂದರೆ ಆ ದೊಣ್ಣೆ ನಾಯಕನ ಅಪ್ಪಣೆ ಪಡೆದುಕೊಂಡು ಹೋಗಬೇಕು. 10–12 ಕಿ.ಮೀ. ಆದರೂ ಅವರು ಸುತ್ತಿಕೊಂಡು ಬರಬೇಕು. ಎಂತಹ ವಿಪರ್ಯಾಸ ನೋಡಿ. 55 ಪರ್ಸೆಂಟ್ ಏನು ಟೌನ್‌ಶಿಫ್ ಮಾಡುತ್ತಾರೆ, 55 ಪರ್ಸೆಂಟ್ ಗವರ್ನಮೆಂಟ್‌ಗೆ 45 ಪರ್ಸೆಂಟ್ ಪ್ರಾಜೆಕ್ಟ್ ಕಂಪನಿಗೆ ಎಂದು ಮಾಡಿದ್ದಾರೆ. ಈ 45 ಪರ್ಸೆಂಟ್‌ನ್ನು ಕಂಪನಿಯವರು ಏನು ಪ್ರಾಜೆಕ್ಟ್‌ನಲ್ಲಿ ತೆಗೆದುಕೊಳ್ಳುತ್ತಾರಲ್ಲಾ ಅದರಲ್ಲಿ ರಸ್ತೆಯನ್ನೂ ಸೇರಿಸಿ ತೆಗೆದುಕೊಳ್ಳುತ್ತಾರೋ ಏನು ಎಂಬ ಬಗ್ಗೆ ಸರ್ಕಾರದವರು ಸ್ಪಷ್ಟವಾಗಿ ಹೇಳಬೇಕು. ಇಲ್ಲಾ, ಡೆವಲಪ್ ಮಾಡಿರೋದು, ಮನೆ ಕಟ್ಟಿರುವುದು, ಸೈಟ್‌ನದು ಹೀಗೆ ಎಲ್ಲವನ್ನೂ ಅವರು ತೆಗೆದುಕೊಂಡು ಬಿಟ್ಟು ಇನ್ನು ರಸ್ತೆ, ಪಬ್ಲಿಕ್ ಯುಟಿಲಿಟಿ ಪರ್ಪ್‌ಸ್‌ಗೆ ಇರುತ್ತದೆಯಲ್ಲಾ ಹಾಗೂ ಪಾರ್ಕ್‌ಗೆ ಇರುತ್ತದೆಯಲ್ಲಾ ಅವೆಲ್ಲವನ್ನೂ ಸರ್ಕಾರಕ್ಕೆ ಕೊಡಲಿ. ಏನು ಇದೆ ಈ ಬಗ್ಗೆ ನಿಮ್ಮ ಸ್ಪಷ್ಟತೆ? 55 ಪಸೆಂಟ್ ಸರ್ಕಾರಕ್ಕೆ, 45 ಪರ್ಸೆಂಟ್ ಆ ಪ್ರಾಜೆಕ್ಟ್ ಕಂಪನಿಗೆ. ಈ 45 ಪರ್ಸೆಂಟ್ ಯಾವ ಭೂಮಿ? ಅವರು ಸೈಟ್ ಮಾಡಿ, ಮನೆ ಕಟ್ಟಿ ಜನರಿಗೆ ಮಾರಾಟ ಮಾಡುವುದಕ್ಕೆ ಇರುತ್ತದೆಯಲ್ಲಾ ಜಾಗ ಅದು 45 ಪರ್ಸೆಂಟ್. ಇನ್ನು ರಸ್ತೆ, ಪಾರ್ಕ್, ಪಬ್ಲಿಕ್ ಯುಟಿಲಿಟಿಗೆ, ಏನು ಬಿಲ್ಡಿಂಗ್‌ಗಳನ್ನು ಬಿಟ್ಟಿರುತ್ತಾರೋ ಮುನಿಸಿಪಾಲಿಟಿಗೆ, ಶಾಲೆಗೆ ಆಸ್ಪತ್ರೆಗೆ ಇರುವ ಜಾಗ ಸರ್ಕಾರದ್ದು. ಇದು ಇವರ ಹಂಚಿಕೆ. 55 ಭಾಗ, 45 ಭಾಗ. ಇದಕ್ಕೆ ನಾವೆಲ್ಲರೂ ಎಂಡಾರ್ಸ್ ಮಾಡಬೇಕು, ಇದಕ್ಕೆ ನಾವೆಲ್ಲರೂ ಎಂಡಾರ್ಸ್ ಮಾಡಬೇಕು. ಡಿನೋಟಿಫೈ ಮಾಡಿದ್ದಾರೆ. ನೋಟಿಫಿಕೇಶನ್ ಮಾಡುವುದು, ಡೀನೋಟಿಫಿಕೇಶನ್ ಮಾಡುವುದು. ಅದೊಂದು ದಂಧೆಯಾಗಿದೆ. ಅದು ದೊಡ್ಡ ದಂಧೆ. ಮಂಡ್ಯದ ಹತ್ತಿರ ಬೇಡ ನನಗೆ ಡಿನೋಟಿಫೈ ಮಾಡಿ, ಅದರ ಬದಲಿಗೆ ಬೆಂಗಳೂರು ಸುತ್ತಮುತ್ತ ನೋಟಿಫೈ ಮಾಡಿಕೊಡಿ. ರೂಪಾಯಿ, ಡಾಲರ್,

ಶ್ರೀ ಮಹದೇವು : ದೊಣ್ಣೆ ನಾಯಕ ಎಂದು ಹೇಳಿದಿರಲ್ಲಾ ದೊಣ್ಣೆನಾಯಕನ ಪಾರ್ಟಿಗೆ ಯಾರು ಯಾರು ಹೋಗಿದ್ದರು ಹೇಳಬೇಕು.

ಶ್ರೀ ಎ.ಟಿ. ರಾಮಸ್ವಾಮಿ : ಮಹದೇವುರವರೆ, ಸರಿಯಾಗಿ ತಿಳಿದು ಮಾತನಾಡುವುದನ್ನು ಕಲಿತುಕೊಳ್ಳಿ. ಏನು ಮಾತನಾಡುತ್ತಿದ್ದೀರಿ ತಾವು? ಮಾನ್ಯ ಛೇರ್ಮನ್‌ರವರೆ, ದೊಣ್ಣೆನಾಯಕನ ಪಾರ್ಟಿಗೆ ಹೋಗಿದ್ದವರ ಬಗ್ಗೆ ಮಾತನಾಡಬೇಕು ಎಂದು ಅವರು ಹೇಳಿದ್ದಾರೆ. ಅದು ಕಡತನಕ್ಕೆ ಹೋಗಿದೆ. ದಯವಿಟ್ಟು ಅದನ್ನು ತೆಗೆಸಬೇಕು. ಏನು ಮಾತೇ ಅದು. ಏನು ಮಾತನಾಡುತ್ತಿದ್ದಾರೆ ಅವರು. ಅವರು ನಾಲಿಗೆ ಮೇಲೆ ಹಿಡಿತ ಇಟ್ಟುಕೊಳ್ಳಲಿ.

ಛೇರ್ಮನ್ : ರಾಮಸ್ವಾಮಿಯವರೆ, ನೀವು ಈ ಕಡೆ ತಿರುಗಿಕೊಂಡು ಮಾತನಾಡಿ.

ಶ್ರೀ ಎ.ಟಿ. ರಾಮಸ್ವಾಮಿ : ದೊಣ್ಣೆನಾಯಕನ ಪಾರ್ಟಿಗೆ ಹೋದವರ ಬಗ್ಗೆ ಕೂಡ ಮಾತನಾಡಬೇಕು ಎಂದಿದ್ದಾರೆ. ಅವರು ನಾಲಿಗೆ ಮೇಲೆ ಹಿಡಿತ ಇಟ್ಟುಕೊಳ್ಳಬೇಕು. ದಾಖಲೆಗೆ ಹೋಗಿರುವುದನ್ನು ವಾಪಸ್ ತೆಗೆಸಬೇಕು ಕಡತದಿಂದ.

ಶ್ರೀ ಮಹದೇವು : ಇವರು ದೊಣ್ಣೆನಾಯಕ ಎಂದು ಹೇಳಿದರಲ್ಲಾ.

ಶ್ರೀ ಎ.ಟಿ. ರಾಮಸ್ವಾಮಿ : ಆ ಶಬ್ಧ ಅನ್‌ಪಾರ್ಲಿಮೆಂಟರಿ ಆದರೆ ಮಾತ್ರ ತೆಗೆಸಲಿ. ನಾನೇ ವಾಪಸ್ ತೆಗೆಸುತ್ತೇನೆ. ನೀವ್ಯಾರು ಹೇಳುವುದಕ್ಕೆ?

(ಅಡಚಣೆ)

ಛೇರ್ಮನ್ : ರಾಮಸ್ವಾಮಿಯವರೆ, ನೀವು ಈ ಕಡೆ ಮಾತನಾಡಿ.

(ಅಡಚಣೆ)

ಛೇರ್ಮನ್ : ರಾಮಸ್ವಾಮಿಯವರೆ, ತಾವು ಮುಂದುವರೆಸಿ.

ಶ್ರೀ ಎ.ಟಿ. ರಾಮಸ್ವಾಮಿ : ಇಷ್ಟು ದಿವಸ ಯಾರನ್ನು ದೇವರು, ಯಾರನ್ನು ದೊಡ್ಡವರು ಎನ್ನುತ್ತಿದ್ದರು, ಏಕೆ ಇವತ್ತು ಆ ರೀತಿ ಮಾತನಾಡಬೇಕು? ಇನ್ನೊಬ್ಬರ ಮೇಲೆ ಆ ಪದ ಏಕೆ ತರಬೇಕು.

ಶ್ರೀ ಮಹದೇವು : ನೀವು ದೊಣ್ಣೆನಾಯಕ ಎಂದಿರಲ್ಲಾ.

ಶ್ರೀ ಎ.ಟಿ. ರಾಮಸ್ವಾಮಿ : ಹೌದು ನಾನು ಅಂದಿದ್ದೇನೆ ಮತ್ತು ನಾನು ಅದನ್ನು ಸಮರ್ಥಿಸಿಕೊಳ್ಳುತ್ತೇನೆ. ದೊಣ್ಣೆನಾಯಕನ ಅಪ್ಪಣೆ ಪಡೆದುಕೊಂಡು ನಾವು ತಿರುಗಾಡಬೇಕಾಗಿಲ್ಲಾ.

(ಅಡಚಣೆ)

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಆ ದೊಣ್ಣೆನಾಯಕ ಎನ್ನುವ ಪದ ಇದೆಯಲ್ಲಾ, ಅದನ್ನು ಹಳ್ಳಿಗಾಡಿನಲ್ಲಿ ಬಳಸುತ್ತಾರೆ. ಅಲ್ಲಿ ಯಾವಾಗ ಸಾಮಾನ್ಯವಾಗಿ ಉಪಯೋಗ ಮಾಡುತ್ತಾರೆಂದರೆ, ಕೆರೆ ನೀರು ತೆಗೆದುಕೊಳ್ಳುವುದಕ್ಕೆ ದೊಣ್ಣೆನಾಯಕನ ಅಪ್ಪಣೆ ಬೇಕೇ ಎಂದು ಹೇಳುತ್ತಾರೆ. ಆ ರೀತಿಯಾಗಿ ರಾಮಸ್ವಾಮಿಯವರು ಹೇಳಿರತಕ್ಕಂಥ ಪದ ಬಹಳ ಸರಿಯಾಗಿಯೇ ಇದೆ. ಹಳ್ಳಿಗಾಡಿನಲ್ಲಿ ಅಲ್ಲಿ ಯಾರೋ ಒಬ್ಬರು ಒಂದು ಗುಡಿಸಲು ಹಾಕಿಕೊಳ್ಳಬೇಕೆಂದರೂ ಅವನ ಅಪ್ಪಣೆ ಪಡೆಯಬೇಕೇನು? ರಾಮಸ್ವಾಮಿಯವರು ಹೇಳಿರುವ ಪದ ಅನ್‌ಪಾರ್ಲಿಮೆಂಟರಿ ಪದವಲ್ಲ.

ಛೇರ್ಮನ್ : ರಾಮಸ್ವಾಮಿಯವರೇ, ದಯವಿಟ್ಟು ತಾವು ಈಲ್ಡ್ ಆಗಬೇಡಿ. ತಾವು ಮುಂದುವರೆಸಿ. ಪ್ಲೀಸ್.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಛೇರ್ಮನ್‌ರವರೆ, ಒಪ್ಪಂದ ಆದ ಮೂರೂವರೆ ತಿಂಗಳಿನಲ್ಲಿ, ಕಂಪನಿಯವರು ಸುಮಾರು 26 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ಅವರ ಆಡಿಟ್ ವರದಿಯಲ್ಲಿರುವುದನ್ನು ನಾನು ನೋಡಿದ್ದೇನೆ. ಆಮೇಲೆ 2005–06ನೇ ಸಾಲಿನ ಬ್ಯಾಂಕರ್ಸ್‌ಗಳು ಸಿದ್ಧಪಡಿಸಿದ ವರದಿಯಲ್ಲೂ ಕೂಡ, 135 ಕೋಟಿ ರೂಪಾಯಿ ಪ್ರೀ–ಆಪರೇಟಿವ್ ಎಕ್ಸ್‌ಪೆಂಡಿಚರ್ ಆಗಿದೆಯೆಂದು ನಮೂದಾಗಿದೆ. ಈ 135 ಕೋಟಿ ರೂಪಾಯಿಗಳ ಪ್ರಿ–ಆಪರೇಟಿವ್ ಎಕ್ಸ್‌ಪೆಂಡಿಚರ್ ಏನಿದೆ ಇದು ಯಾವ ಯಾವ ಉದ್ದೇಶಗಳಿಗೆ ಈ ಹಣ ಖರ್ಚಾಗಿದೆ, ಎಲ್ಲೆಲ್ಲಿಗೆ ಈ ಹಣ ಹೋಯಿತು, ಎನ್ನುವುದರ ಬಗ್ಗೆ ಕೂಡ ಸರ್ಕಾರ ಗಮನ ಹರಿಸಬೇಕು. ಅದರ ಬಗ್ಗೆ ಬೆಳಕನ್ನು ಚೆಲ್ಲಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಪ್ರಾಜೆಕ್ಟ್‌ನ್ನು ಮಾಡುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಬೀಳುವುದಿಲ್ಲವೆಂದು, ಮೂಲ ಒಪ್ಪಂದದಲ್ಲಿ ಇದೆ. ಅಗ್ರಿಮೆಂಟ್ ಮಾಡಿಕೊಂಡಿದ್ದರು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ, 21 ಪರ್ಸೆಂಟ್ ಸರ್ವೀಸ್ ಛಾರ್ಜ್‌ನ್ನು ಕೊಡಬೇಕಾಗಿತ್ತು. ಇವೊತ್ತು ಅವರು ನೋಟಿಫೈ ಮಾಡಿರುವ ಪ್ರಕಾರ 29 ಸಾವಿರ ಎಕರೆ ನೋಟಿಫೈ ಮಾಡುವುದಕ್ಕೆ, ಸ್ವಾಧೀನ ಮಾಡಿಕೊಳ್ಳುವುದಕ್ಕೆ ಎಕರೆಗೆ ಹತ್ತು ಲಕ್ಷ ಎಂದರೂ ಕೂಡ 609 ಕೋಟಿ ರೂಪಾಯಿಗಳ ಸರ್ವೀಸ್ ಛಾರ್ಜ್ ಸರ್ಕಾರದ ಬೊಕ್ಕಸದಿಂದ ಹೋಗಿದ್ದು. ಇವೊತ್ತು ಸ್ಟ್ಯಾಂಪ್ ಡ್ಯೂಟಿ ಫ್ರೀ ಅವರಿಗೆ, ಅದು 10 ಪರ್ಸೆಂಟ್ ಎಂದರೂ ಕೂಡ ಅದು 290 ಕೋಟಿ ರೂ. ಆಗುತ್ತದೆ. ಸರ್ಕಾರಿ ಲ್ಯಾಂಡ್, 7 ಸಾವಿರ ಎಕರೆಗೆ 6956 ಎಕರೆ ಭೂಮಿ ಎಂದು ವರದಿಯಾಗಿದೆ. ಸುಮಾರು 7 ಸಾವಿರ ಎಕರೆಗೆ 10 ಲಕ್ಷ ರೂ. ಎಂದರೂ 700 ಕೋಟಿ ರೂ. ಆಗುತ್ತದೆ. ಇನ್ನು ಸೇಲ್ಸ್ ಟ್ಯಾಕ್ಸ್, ಎಂಟ್ರಿ ಟ್ಯಾಕ್ಸ್ Works Contract Tax ಕಾವೇರಿ ಸೆಸ್, ಹೀಗೆ ಇವೆಲ್ಲವನ್ನೂ ಸೇರಿಸಿಕೊಂಡರೆ ಒಟ್ಟು ಎರಡೂವರೆ ಸಾವಿರ ಕೋಟಿ ರೂಪಾಯಿಗಳ ಟ್ಯಾಕ್ಸ್ ಎಕ್ಸೆಂಪ್‌ಶನ್‌ನ್ನು ಅವರಿಗೆ ಕೊಟ್ಟಿದ್ದಾರೆ. ಇದು ಸರ್ಕಾರಕ್ಕೆ ಆರ್ಥಿಕ ಹೊರೆಯಲ್ಲವೇ? ಸರ್ಕಾರಕ್ಕೆ ಈ ಪ್ರಾಜೆಕ್ಟ್‌ನಿಂದ ಯಾವುದೇ ಆರ್ಥಿಕ ಹೊರೆ ಉದ್ಭವವಾಗುವುದಿಲ್ಲವೆಂದು ಹೇಳಿದಿರಲ್ಲಾ, ಇದು ಸರ್ಕಾರಕ್ಕೆ ಆರ್ಥಿಕ ಹೊರೆಯನ್ನೂ ಕೂಡ ಉಂಟುಮಾಡುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಈಗ ನಮ್ಮ ಕೆಲವು ಸ್ನೇಹಿತರು ರೈತರ ಭೂಮಿಯನ್ನು ಏನು ಹೆಚ್ಚು ತೆಗೆದುಕೊಂಡುಬಿಟ್ಟಿದ್ದಾರೆ ಅದನ್ನು ಮತ್ತೆ ತೆಗೆದುಕೊಂಡು ವಾಪಸ್ ರೈತರಿಗೇ ಕೊಟ್ಟು ಬಿಡೋಣವೆಂದೂ, ಅಲ್ಲಿಗೆ ಸಮಸ್ಯೆ ಬಗೆಹರಿದುಹೋಗುತ್ತದೆ ಎನ್ನತಕ್ಕಂಥ ಮಾತನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಭಾಸ್ಕರನ್ ಪಿಳ್ಳೈ ವರ್ಸಸ್ ಸ್ಟೇಟ್ ಆಫ್ ಕೇರಳ ಬಗ್ಗೆ ಒಂದು ಜಡ್ಜ್‌ಮೆಂಟ್‌ನಲ್ಲಿ ಸುಪ್ರೀಂಕೋರ್ಟ್ ಒಂದು ತೀರ್ಮಾನವನ್ನು ಕೊಟ್ಟಿದೆ "once the acquisition proceedings reached its finality and final notification is issued, under any circumstances, the land cannot be restored back in favour of

the land owners Rather, such land if taken back by the Government, it should be auctioned and the proceeds thereon, shall be spent for the development of infrstructure of that area". This is the law of the land ಆಗಿದೆ. ಇಲ್ಲಿ ನಾವು ಅಕ್ವಿಸಿಶನ್ ಆಗಿರತಕ್ಕಂಥ ಲ್ಯಾಂಡ್‌ನ್ನು ವಾಪಸ್ ತೆಗೆದುಕೊಂಡು ರೈತರಿಗೆ ಕೊಡುವುದಕ್ಕೆ ಈ ಒಂದು ಜಡ್ಜ್‌ಮೆಂಟ್ ಪ್ರಕಾರ, ಕಾನೂನಿನ ಪ್ರಕಾರ ಅವಕಾಶ ಇಲ್ಲ.

ನಮ್ಮ ಕೆಲವು ಸ್ನೇಹಿತರು, ಸುಪ್ರೀಂಕೋರ್ಟ್ ಹೇಳಿದ ಮೇಲೆ, that is the law of the land. ಸುಪ್ರೀಂ ಕೋರ್ಟ್ ಹೇಳಿದೆ ಹಾಗೆಂದು. ಅದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದನ್ನು ಬೇಕಾದರೆ ಸರ್ಕಾರ auction ಮಾಡಿ ಆ ಭಾಗದ ಅಭಿವೃದ್ಧಿಗಾಗಿ ಆ ಹಣವನ್ನು ಉಪಯೋಗ ಮಾಡಬೇಕು ಎನ್ನುವಂಥಾದ್ದು ಸುಪ್ರೀಂ ಕೋರ್ಟ್‌ನ ನಿಲುವು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀ ವೈಜನಾಥ್ ಪಾಟೀಲ್ : ಯಾವುದೇ ಜಡ್ಜ್‌ಮೆಂಟ್, that is not final. It is not an amendment. ಅದನ್ನು ಅಮೆಂಡ್‌ಮೆಂಟ್ ಮಾಡಿ ರೈತರಿಗೆ ವಾಪಸ್ಸು ಕೊಡಬಹುದಲ್ಲಾ, ಜಡ್ಜ್‌ಮೆಂಟ್ ಒಂದು ಸಲ ಆಯಿತೆಂದರೆ ಅದು ಫೈನಲ್?

Sri Basavaraja Raya Reddy : It is a Central Act.

ಶ್ರೀ ವೈಜನಾಥ್ ಪಾಟೀಲ್ : ಸೆಂಟ್ರಲ್ ಆ್ಯಕ್ಟ್ ಏನು ಮಾಡುವುದಕ್ಕೆ ಬರುತ್ತದೆ ನೋಡಿ ಮಾಡಿ.

ಶ್ರೀ ಬಸವರಾಜ್ ರಾಯರೆಡ್ಡಿ : ರೈತರಿಗೆ ಗ್ರಾಂಟ್ ಮಾಡಬಹುದು ಅಷ್ಟೆ.

ಶ್ರೀ ವೈಜನಾಥ್ ಪಾಟೀಲ್ : ಒತ್ತಾಯ ಹಾಕಿರಿ, ವಾಪಸ್ಸು ಕೊಡುವುದಕ್ಕೆ.......

ಶ್ರೀ ಬಸವರಾಜ್ ರಾಯರೆಡ್ಡಿ : ಮಾಡಬಹುದು, it can be granted. Free of costನಲ್ಲಿ grant ಮಾಡಬಹುದು.

ಶ್ರೀ ವೈಜನಾಥ್ ಪಾಟೀಲ್ : ಸರ್ಕಾರ ತೆಗೆದುಕೊಂಡಿದೆ ಎಂದರೆ ಅದು ಪ್ರೈವೇಟ್ ಪ್ರಾಪರ್ಟಿನೇ ಸರ್ಕಾರದಲ್ಲಿ ಪ್ರಾಜೆಕ್ಟ್ ವಾಪಸ್ಸು ತೆಗೆದುಕೊಳ್ಳುವುದು ಎಂದರೆ ಕೆಲವರ ಪ್ರೈವೇಟ್ ಪ್ರಾಪರ್ಟಿನೇ ಅದು ಎಲ್ಲಾ.

ಶ್ರೀ ಎ.ಟಿ. ರಾಮಸ್ವಾಮಿ : ಕೆಲವು ಅಗ್ರಿಮೆಂಟ್‌ನಲ್ಲಿ ಈಗಾಗಲೇ ಮಾತನಾಡಿದ ನಮ್ಮ ಕೆಲವು ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದ ಭೂಮಿ ಏನು ಸುಮಾರು 7,000 ಎಕರೆಯನ್ನು ನಾವು ಅವರಿಗೆ ಕೊಡುತ್ತೇವೆ, ಅದರ ಕನ್‌ಸ್ಟ್ರಕ್ಷನ್ ಪಿರಿಯಡ್ 10 ವರ್ಷ, ಟೋಲ್ ಪೀರಿಯಡ್ 30 ವರ್ಷ. ಒಂದು ಎಕರೆಗೆ ಒಂದು ವರ್ಷಕ್ಕೆ ಹತ್ತು ರೂಪಾಯಿಯ ರೇಟ್‌ನಲ್ಲಿ ಅವರಿಗೆ ಲೇಜ್‌ಗೆ ಕೊಡುವುದು. ಆ ಪಿರಿಯಡ್ ಮುಗಿದ ಮೇಲೆ ಇದನ್ನು ಕೂಡ 1999–2000 Guidance Value ನಲ್ಲಿ ಅವನಿಗೆ ಪರ್ಚೇಸ್ ಮಾಡಿಕೊಳ್ಳುವುದಿದ್ದರೆ ಕೊಡಬೇಕು. ಇದು ಎಂತಹ ಕಾನೂನಿನ ನಿಯಮ ಎನ್ನುವುದನ್ನು ಸರ್ಕಾರದವರು ತಿಳಿಸಬೇಕು ಎನ್ನುವಂತಹ ಮಾತನ್ನು ಹೇಳಿ, "Government

of Karnataka shall use its best efforts to assist NICE in obtaining all the necessary approvals and legislative amendments. It will also assist NICE in land acquisition and use its best efforts to prevent enforcement of any law. Government of Karnataka should amend the Acts for the convenience of the NICE. ಎಷ್ಟು ನೈಸ್ ಆಗಿದೆ. ಅದೆಲ್ಲಾ ಕಾನೂನುಗಳನ್ನು ಅವರ ಅನುಕೂಲಕ್ಕೆ ತಕ್ಕಂತೆ ತಿದ್ದುಪಡಿ ಮಾಡಿ ಕೊಡಬೇಕು. ಆ ಮಹಾನುಭಾವರಿಗೆ. ಎಂತಹ ಕರಾಳವಾದಂತಹ ಒಂದು ಒಪ್ಪಂದ ಎನ್ನುವುದನ್ನು ನಮ್ಮೆಲ್ಲಾ.........

ಶ್ರೀ ಬಿ. ಶಿವರಾಂ : ಅದು ಯಾವಾಗ ಆಗಿದ್ದು?

ಶ್ರೀ ಎ.ಟಿ. ರಾಮಸ್ವಾಮಿ : ನೀವು ತಡವಾಗಿ ಬಂದಿರಿ. ಯಾವಾಗ ಆಗಿದ್ದು ಎಂದು ಎಲ್ಲವನ್ನೂ ಹೇಳಿಯಾಯಿತು. ಯಾರ್‍ಯಾರು ಈಗ ಇದ್ದಾರೆ, ಹಿಂದೆ ಇದ್ದರು, ಎಲ್ಲವನ್ನೂ ಹೇಳಿಯಾಯಿತು. ನೀವು ತಡವಾಗಿ ಬಂದುಬಿಟ್ಟಿರಿ ಶಿವರಾಂರವರೇ, ನಾನು ಹೇಳಿದಾಗ ನೀವು ಇರಲಿಲ್ಲ. ಏನೋ ನಿಮಗೆ ಮಾತ್ರ ಹೇಳುತ್ತಿದ್ದೇನೆ ಎಂದು ತಿಳಿದುಕೊಂಡಿದ್ದೀರಿ ನೀವು. ನಿಮಗೆ ಮಾತ್ರ ಅಲ್ಲ, ಎಲ್ಲರಿಗೂ ಸೇರಿಸಿ ಹೇಳಿದ್ದೇನೆ. ನೀವು ಆಮೇಲೆ ಬಂದುಬಿಟ್ಟಿರಿ ನೀವು ಮೊದಲಿನಿಂದ ಮಾತನ್ನು ಕೇಳಲಿಲ್ಲ.

ಶ್ರೀ ಬಿ. ಶಿವರಾಂ : ಅರ್ಥವಾಯಿತು ರಾಮಸ್ವಾಮಿಯವರೇ, ಈಗ ಅದು ಯಾವಾಗ ಆಯಿತು ಹೇಳಿ ಎಂದರೆ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಯಾವಾಗ ಆಯಿತು ಎಂದು ಮಾನ್ಯ ಶಿವರಾಂರವರು ಕೇಳಿದರು. ಅದಕ್ಕೆ ನಾನು ಹೇಳುವುದೇನೆಂದರೆ ಅವರಿಬ್ಬರೂ ಈ ಕಡೆ ಇದ್ದಾಗ ಆಗಿದ್ದು.

ಶ್ರೀ ಹೆಚ್. ಆಂಜನೇಯ : ಈ ಕಡೆ ಇದ್ದಾಗ ಆಗಿದ್ದು, ಈಗ ಆ ಕಡೆ ಹೋಗಿ ಹೇಳುತ್ತಾರಲ್ಲಾ ಎಂದು ಅಷ್ಟೆ.

ಶ್ರೀ ಎ.ಟಿ. ರಾಮಸ್ವಾಮಿ : ನೋಡಿ ಸಾರ್, ಸ್ಥಾನದ ಮಹಿಮೆ. ತಾವು ಹಿರಿಯರಿದ್ದೀರಿ ಹೀಗೆ ಹೇಳಿಬಿಡುತ್ತೀರಲ್ಲಾ. ಈ ಕಡೆ ಕುಳಿತಿರಲಿ, ಆ ಕಡೆ ಕುಳಿತಿರಲಿ ಸರಿ ಇರುವುದನ್ನು ಸರಿ ಎಂದು ತಪ್ಪು ಇರುವುದನ್ನು ತಪ್ಪೆಂದು ಸ್ಪಷ್ಟವಾಗಿ ಹೇಳಿ. Toll revision annual 10% over the immediately preceding year. After the completion of the peripheral road, Government of Karnataka will prohibit through commercial traffic within the city of Bangalore. ನಾನು ಇದನ್ನೇ ಹೇಳಿದ್ದು. After the completion of the peripheral road, Government of Karnataka will prohibit through commercial traffic within the city of Bangalore to promulgate possible

acts, rules and regulations to bride it all trucks, LCVs, HCVs and multi-ax vehicles from entering into Bangalore city after the completion of the peripheral road. ಯಾರೂ ಕೂಡ ಅವರ ಅಪ್ಪಣೆ ಇಲ್ಲದೆ ಇಲ್ಲಿ ಬರುವ ಹಾಗೆ ಇಲ್ಲ. "as regards government land, it has already entered into lease agreement with NICE for the same and handed over the possession of the land to NICE. NICE in turn, sub lease parcels of land to customers. NICE are the sub-lessor intends to convert the lessee or sub lease in to out right sale, the consideration payable for will be the average district guideline value prevailing during the year 1999-2000. Further such sale will be exempt from payment of stamp duty. ಅವರಿಗಲ್ಲ, ಅವರು ಇನ್ನೊಬ್ಬರಿಗೆ ಲೀಜ್‌ಗೆ ಕೊಡುತ್ತಾರಲ್ಲಾ, ಅವನು ಮಾರಾಟ ಮಾಡುತ್ತಾನಲ್ಲಾ, ಅವನಿಗೂ ಕೂಡ ಸ್ಟಾಂಪ್ ಡ್ಯೂಟಿಯ ಎಗ್ಸಂಪ್‌ಷನ್ ಕೊಡಬೇಕೆಂದು ಹೇಳಿ ಒಪ್ಪಂದವನ್ನು ಮಾಡಿಕೊಂಡಿದ್ದಾರೆ. Rapid construction work commenced during July 2004. Disbursement started from banks and financial institutions from may 2004. ಮೇ 2004 ರಲ್ಲಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡರು. ಇವರು ಕನ್‌ಸ್ಟ್ರಕ್ಷನ್ ವರ್ಕ್ ಪ್ರಾರಂಭ ಮಾಡಿದ್ದು ಜುಲೈ 2004 ರಲ್ಲಿ. ಸರ್ಕಾರದ ಜಮೀನನ್ನು ಬ್ಯಾಂಕ್‌ನಲ್ಲಿ ಅಡ ಇಟ್ಟು ನೀವು ಅದಕ್ಕೆ ಶ್ಯೂರಿಟಿ ಕೊಟ್ಟು, ಅವನು ಕಟ್ಟದೇ ಇದ್ದರೆ ನಾವು ಕಟ್ಟುತ್ತೇವೆಂದು ಹೇಳಿ, ದುಡ್ಡು ಕೊಡಿಸಿದ ಮೇಲೆ ಕೆಲಸವನ್ನು ಪ್ರಾರಂಭ ಮಾಡಿದರು. ಅದಕ್ಕೇ ನಾನು ಕೇಳಿದ್ದು, ಎಷ್ಟು ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಹೊರದೇಶದಿಂದ ತಂದು ಈ ದೇಶದಲ್ಲಿ ಹೂಡಿದ್ದಾರೆ? ಅದಕ್ಕೆ ತಾನೇ ನೀವು ಅವರನ್ನು ಕರೆದುಕೊಂಡು ಬಂದಿದ್ದು? ಇಲ್ಲಿ ಯಾರೂ ಇಲ್ಲವೆಂದು ಹೇಳಿ. ಅದರ ಬಗ್ಗೆ ಕೂಡ ಸರ್ಕಾರದವರು ಸ್ಪಷ್ಟವಾದ ಮಾಹಿತಿಯನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಅವರೇ ಹೇಳುತ್ತಾರ, ಈ ಅಪ್ರೈಸಲ್ ರಿಪೋರ್ಟ್‌ನಲ್ಲಿ Bangalore city is experiencing a real estate boom. The project envisages sale of large parcels of land. The current scenavio would improve the cash flows of the project dramatically. The prospects of the project are further improved by the incentives provided by the government to the company like tax benefits, waiver of stamp duties etc. ಇದು ಕಂಪನಿಯವರು ಹೇಳುತ್ತಾರೆ. ಹಿಂದೆ ಈ ದೇಶದಲ್ಲಿ ರಾಜ ಪ್ರಭುತ್ವ ಇತ್ತು. ರಾಜ ಪ್ರಭುತ್ವ ಹೋಗಿ ಸಾಮ್ರಾಜ್ಯವಾಹಿ ಪ್ರಭುತ್ವ ಬಂತು. ಬ್ರಿಟಿಷ್‌ನವರು ವ್ಯಾಪಾರಕ್ಕೆ ಎಂದು ಹೇಳಿ ಸ್ಥಳ ಮಾಡಿಕೊಂಡು ಬಂದರು ಎಂದು ನಾವೆಲ್ಲಾ ಇತಿಹಾಸವನ್ನು ಓದಿದ್ದೇವೆ. ಆಮೇಲೆ 350 ವರ್ಷ ನಾವು ಪರಕೀಯರ ಆಡಳಿತದಲ್ಲಿ ಇದ್ದೆವು. ಅದು ನಮ್ಮ ರಾಜರುಗಳಲ್ಲಿ ಇದ್ದಂತಹ ಅನೈತಿಕತೆ, ಅವರಲ್ಲಿ ಒಗ್ಗಟ್ಟು ಇರಲಿಲ್ಲ. ಹೀಗಾಗಿ ನಮ್ಮ ದೌರ್ಬಲ್ಯವನ್ನು ಉಪಯೋಗ ಮಾಡಿಕೊಂಡು ನಮ್ಮ ದೇಶವನ್ನು 350 ವರ್ಷ ಆಳಿದರು. ಸಾಮ್ರಾಜ್ಯಷಾಹಿ ಆಡಳಿತ ಹೋಯಿತು. ರಾಜ ಪ್ರಭುತ್ವ ಹೋಗಿ,

ಸಾಮ್ರಾಜ್ಯಷಾಹಿ ಆಡಳಿತ ಹೋಗಿ ಈಗ ಪ್ರಜಾಪ್ರಭುತ್ವ ಬಂದಿದೆ. ಏನಾಯಿತು ಈ ಪ್ರಜಾಪ್ರಭುತ್ವದಲ್ಲಿ, ಏನಾಗುತ್ತಿದೆ ಈ ಪ್ರಜಾಪ್ರಭುತ್ವದಲ್ಲಿ ಎಂಬುದನ್ನು ಸ್ವಲ್ಪ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ನೀವ್ಯಾರು ಅನ್ಯಥಾ ಭಾವಿಸಬೇಡಿ, ಇದು ಎಲ್ಲರಿಗೂ ಅನ್ವಯವಾಗುವುದಿಲ್ಲ ಯಾರು ಮಂತ್ರಿಗಳು ಇದ್ದರು, ಇರುವವರು ಸರಿಯಾಗಿ ಇಲಾಖೆ ಮೇಲೆ ಹಿಡಿತ ಇದ್ದರೆ ಅಧಿಕಾರಿಶಾಹಿ ಲಂಗು ಲಗಾಮು ಇಲ್ಲದೆ ಇಡೀ ರಾಜ್ಯವನ್ನು ದಾರಿ ತಪ್ಪಿಸುವಂತಹ ಕೆಲಸವನ್ನು ಮಾಡುತ್ತಿರಲಿಲ್ಲ ಎಂದು ಹೇಳಿ, ಈ ರಾಜ್ಯ ಈ ಅಪಮಾನ ಅನುಭವಿಸಬೇಕಾದಂತಹ ಸಂದಿಗ್ಧತೆ ಬರುತ್ತಿರಲಿಲ್ಲ ಅಂತ ಹೇಳಿ ನಾನು ಭಾವಿಸಿಕೊಂಡಿದ್ದೇನೆ. ಈಗ ಕಿತ್ತೂರು ರಾಣಿ ಚೆನ್ನಮ್ಮನ ಆಸ್ಥಾನದಲ್ಲಿ ಮಲ್ಲಪ್ಪ ಶೆಟ್ಟಿ, ವೆಂಕಟರಾವ್ ಎಂದು ಇದ್ದರು. ತಮಗೆಲ್ಲಾ ಗೊತ್ತಿದೆ. ಅವರು ಬ್ರಿಟಿಷರ ಜೊತೆ ಅವರ ಆಸೆ ಆಮಿಷಕ್ಕೆ ಶಾಮೀಲಾಗಿ ಪಾಪ ಕಿತ್ತೂರು ರಾಣಿ ಚೆನ್ನಮ್ಮನ ಆಸ್ಥಾನವೇ ಪತನವಾಯಿತು. ಟಿಪ್ಪು ಆಳ್ವಿಕೆಯಲ್ಲೂ ಕೂಡ ಮೀರ್‌ಸಾಧಿಕ್ ಅವನು ಬ್ರಿಟಿಷರ ಆಸೆ ಆಮಿಷಕ್ಕೆ ಒಳಗಾಗಿ ಆ ಟಿಪ್ಪು ಸಂಸ್ಥಾನವೂ ಕೂಡ ಪತನವಾಯಿತು.

(ಅಡಚಣೆ)

ಮಾನ್ಯ ಚೇರ್ಮನ್‌ರವರೆ, ರಾಮಾಯಣದಲ್ಲಿ ರಾಜನಿಗೆ ಹತ್ತಿರವಾಗಿರುವ ಕೆಲವು ಮಂತ್ರಿಗಳು, ಪಶುಪತಿಗಳಾಗಿರುತ್ತಾರೆ. ಅವರಿಗೆ ಶಸ್ತಾಸ್ತ್ರ ತಿಳಿದಿರುವುದಿಲ್ಲ. ಅವರೂ ಅವರು ತಮ್ಮ ವಾಕ್‌ಜಾಲದಿಂದ, ರಾಜನಿಗೆ ಸಲಹೆಗಳನ್ನು ನೀಡುತ್ತಾ ಇರುತ್ತಾರೆ. ಪ್ರಭು ವಾದದ ಕೆಲವರನ್ನು ನಂಬಿಕೊಂಡು, ಅನೇಕ ಮಂತ್ರಿಗಳು ಇದ್ದರೂ, ಅವರಲ್ಲಿ ಕೆಲವರನ್ನು ನಿಕಟವರ್ತಿಗಳನ್ನಾಗಿ ಮಾಡಿಕೊಂಡಿರುತ್ತಾನೆ. ಅವರಲ್ಲಿ ಎಲ್ಲರನ್ನೂ ಅಲ್ಲ, ಕೆಲವರನ್ನು ಮಾತ್ರ. ಇವರೇ ಅಭ್ಯಂತರೀಕೃತರು, ಅಂದರೆ ಒಳಗೆ ಸೇರಿಸಿಕೊಳ್ಳಲ್ಪಟ್ಟವರು. ಇದು ರಾಮಾಯಣದ ನಿದರ್ಶನದ ಕತೆಗಳು ಆಗಿವೆ. ಇವರಿಗೆ ಯಾವ ವಿಷಯಗಳನ್ನಾದರೂ ರಾಜನಿಗೆ ಏಕಾಂತದಲ್ಲಿ ಹೇಳುವುದಕ್ಕೆ ಅನುಮತಿ ಇರುತ್ತದೆ. ಇಂಥವರಲ್ಲಿ ಕೆಲವರು ಪಶುಬುದ್ಧಿಗಳು ಇರುತ್ತಾರೆ. ಅಂದರೆ ಅವರಿಗೆ ರಾಜನೀತಿ ಮುಂತಾದ ಜ್ಞಾನಬಾಹಿಗಳ ಸಾರಾರ್ಥ ತಿಳಿದಿರುವುದಿಲ್ಲ. ಅವುಗಳ ಅಂತರಂಗ ಗೊತ್ತಿರುವಷ್ಟು ಬುದ್ಧಿ ಇರುವುದಿಲ್ಲ. ಆದರೆ ಅವರನ್ನು ನಂಬಿ ರಾಜ ಸ್ವಾತಂತ್ರ್ಯ ಕೊಟ್ಟಿರುವುದರಿಂದ, ಅವರು ಧೈರ್ಯವಾಗಿ ಮಾತಿನ ವರಸೆಯನ್ನು ಬೆಳೆಸಿ, ರಾಜ ನೀತಿಜ್ಞರಂತೆ, ಸಲಹೆಗಳನ್ನು ನೀಡುತ್ತಾ ಇರುತ್ತಾರೆ. ಪ್ರಭು ಕೆಡುವುದು ಅದರಿಂದ ಮತ್ತೆ ಆಡಳಿತ ಇಂಥವರಿಂದಲೇ ಕೆಡುವುದು. ಅಂಥವರನ್ನು ಗುರುತಿಸಿ ಆಡಳಿತವನ್ನು ನಡೆಸುವವರು ದೂರ ಇಡಬೇಕು. ಇವರನ್ನು ಸಾಧ್ಯವಾದರೆ ತೆಗೆದುಹಾಕಬೇಕು, ಇಲ್ಲದಿದ್ದರೆ ರಾಜನಿಗೆ ಪ್ರಿಯವಾದದ್ದನ್ನು ಹೇಳತೊಡಗುವ ಅವರ ಮಾತು ರಾಜನಿಗೆ ಅಪ್ಯಾಯಮಾನವಾಗಿ ಬಿಡುತ್ತದೆ. ಆದುದರಿಂದ ಸತ್ಯ ಏನೆಂಬುದು ಗೊತ್ತಾಗದೆ ತಪ್ಪು ಹೆಜ್ಜೆಯನ್ನು ಇಡುತ್ತಾನೆ. ಇಲ್ಲಿ ಅಪ್ರಿಯ ಸತ್ಯವನ್ನು ಹೇಳುವ ಶಾಸ್ತ್ರಗಳ ಅಂತರಂಗ ತಿಳಿದು, ಅದನ್ನು ಪ್ರಕೃತಕ್ಕೆ ಅನ್ವಯಿಸಿ ಹೇಳುವ ಸಾಮರ್ಥ್ಯ ಇರುವ ಮಂತ್ರಿಗಳ ಮಾತನ್ನೇ ಪ್ರಭುಗಳು ಕೇಳಬೇಕು. ರಾಜನಿಗೆ ಅಂಥವರೇ ಅಂತರಂಗದ ಸಲಹೆಗಾರರು ಆಗಬೇಕು, ಅಂಥವರೇ ನಿಕಟವರ್ತಿಗಳು ಆಗಬೇಕು. ಈ ರೀತಿಯ ಕೆಟ್ಟ ಸಲಹೆಗಳಿಂದ ಕೆಳಗೆ ಬಿದ್ದ ಎಷ್ಟೋ ಅಧಿಪತ್ಯಗಳನ್ನು, ಪ್ರಭುತ್ವಗಳನ್ನು ನೋಡಿದ್ದೇವೆ. ಅವೆಲ್ಲಾ ಆದದ್ದು ಪಶುಬುದ್ಧಿಯುಳ್ಳ ಸಲಹೆಗಾರರ ಸಲಹೆಗಾರರಿಂದ ಜನತ ಹಿತವನ್ನು ರಕ್ಷಿಸಿ ವಿವೇಕಯುತ ಸಲಹೆಗಳನ್ನು ಕೊಡುವವರೇ, ನಿಜವಾದ

ಮಂತ್ರಿಗಳು, ಅಂಥವರೇ ಪ್ರಭುಗಳಿಗೆ ಆಪ್ತರಾಗಬೇಕು. ಇದು ಮಹಾಭಾರತದ ಒಂದು ಭಾಗವಾಗಿದೆ. ಈಗ ಬಾಲ ಇರುವುದನ್ನೆಲ್ಲಾ ಕುದುರೆ ಎಂದು ತಿಳಿಯುವವರನ್ನಾಗಲಿ, ಹೇಳುವವರನ್ನಾಗಲಿ, ರಾಜನು ಹತ್ತಿರ ಇಟ್ಟುಕೊಳ್ಳಬಾರದು. ಇದನ್ನು ನಾನು ಏತಕ್ಕೆ ಹೇಳಿದೆ ಎಂದರೆ ಈ ಮೀರ್ ಸಾಧಕರು ಯಾರು ಇದ್ದರು, ಏನು ಮಾಡಿದರೆಂದು ಹೇಳಿದರಲ್ಲಾ, ಈ ಕಿತ್ತೂರು ರಾಣಿ ಸಂಸ್ಥಾನ, ಟಿಪ್ಪುಸುಲ್ತಾನರ ಸಂಸ್ಥಾನಗಳು ಯಾವ ರೀತಿಯಲ್ಲಿ ಪತನಗೊಂಡಿತು, ಎಂಬುದಕ್ಕೆ ಅವರ ಜೊತೆಗೆ ಇದ್ದಂತಹ ಅಧಿಕಾರಿಗಳೇ, ಮಂತ್ರಿಗಳೇ ಕಾರಣ ಆಗುತ್ತಾರೆ. ಅವರು ಆಸೆ, ಆಮಿಷಕ್ಕೆ ಒಳಗಾಗಿ ಆ ಸಂಸ್ಥಾನಗಳನ್ನು ಪತನಗೊಳಿಸಿದರು. ಸರ್ಕಾರ ಶಾಮಿಲು ಆಗಿದೆ, ಎಂದು ಹೇಳಿದ್ದೇನೆ, ಇನ್ನು ಏನು ಹೇಳಬೇಕು. ಇಲ್ಲೂ ಕೆಲವರು ಆಸೆ ಆಮಿಷಗಳಿಗೆ ಒಳಗಾಗಿ ಮಾನ್ಯ ರಾಜೇಂದ್ರನ್‌ರವರೆ, ನಾನು ಒಬ್ಬರ ಮೇಲೆ ಒಬ್ಬರು ಕೆಸರನ್ನು ಎರಚಾಡಬೇಡಿ ಎಂದು ಹೇಳಿದ್ದೇನೆ. ಅದು ಒಬ್ಬರದ್ದು ಹೆಚ್ಚು ಇರಬಹುದು ಒಬ್ಬರದು ಕಡಿಮೆ ಇರಬಹುದು.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ರಾಮಸ್ವಾಮಿಯವರೆ, ತಾವು ಬಹಳ ಚೆನ್ನಾಗಿ ಮಾತನಾಡಿದ್ದೀರಿ. We are listening because of your good speech. No Doubt. but What Sarkar? Which Sarkar? What is the stand? ಅದನ್ನು ಹೇಳಲೇ ಬೇಕು.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಚೇರ್ಮನ್‌ರವರೆ, ಯಾರು ಅಧಿಕಾರಿಗಳು ಇಂತಹ ಒಂದು criminal conspiracy ಯಲ್ಲಿ, ಮಾನ್ಯ ದೇಶಪಾಂಡೆಯವರು ಮಾತನಾಡುವಾಗ ಹೇಳಿದರು. ಎಲ್ಲಾ ಕಡೆಗಳಲ್ಲೂ ರೆಕಮಂಡ್ ಆಗಿ ಬಂತು. ನಾವು ಅದನ್ನು ಅಪ್ರೂವಲ್ ಮಾಡಿದ್ದೇವೆಂದು ಹೇಳಿದರು. ಇಂತಹ ಒಂದು Illegal and criminal conspiracy ಇರುವಂಥಾದ್ದನ್ನು ರೆಕಮಂಡ್ ಮಾಡಿ ಕಳುಹಿಸಿದಂಥ ಆ ಮಹಾನುಭಾವರು, ಅವರು ಯಾರ್‍ಯಾರೆಂಬುದನ್ನು ಸರ್ಕಾರ ಗುರುತು ಮಾಡಬೇಕು. ಅವರ ಮೇಲೆ ಬಹಳ ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇನ್ನು ನಿಮ್ಮ Project coordinator Public Works Department ಲೆಟರ್ ಬರೆಯುತ್ತಾರೆ. ದಿ: 7.6.2006 ರಲ್ಲಿ, "As per the frame work agreement executed, you were expected to have furnished the information. But, the information has not been received so far. Hence, it is once again requested to furnish detailed working drawings of road alignments, inter changes and alignment of townships". ಇನ್ನು ಇದುವರೆಗೂ ಕೂಡ alignment map ಅನ್ನೇ ಸಬ್‌ಮಿಟ್ ಮಾಡಿಲ್ಲ. ಇದುವರೆಗೂ ಈ ಪ್ರಾಜೆಕ್ಟ್ ಅನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಹೊರಟು ಬಿಟ್ಟರಲ್ಲಾ, ಇಂತಹ ಮೆಗಾ ಪ್ರಾಜೆಕ್ಟ್ ಅನ್ನು, ನಾನು ಸರ್ಕಾರಕ್ಕೆ ಏನೆಂದು ಹೇಳಬೇಕು. ಯಾವ ಮುಖವನ್ನು ಇಟ್ಟುಕೊಂಡು ನೀವು ಸರ್ಕಾರದಲ್ಲಿ ಇದನ್ನು ಸಮರ್ಥನೆ ಮಾಡಿಕೊಳ್ಳುತ್ತೀರಿ? ಇನ್ನು ಅಲೈನ್‌ಮೆಂಟ್ ಫಿಕ್ಸ್ ಆಗಿಲ್ಲ. ಮಾನ್ಯ ಚೇರ್ಮನ್‌ರವರೆ, ನಾನು ಒಂದು ಕಠಿಣವಾದ ಮಾತನ್ನು ಹೇಳುತ್ತೇನೆ ಎಲ್ಲಾ ಅಂಕಿ ಅಂಶಗಳನ್ನು ಈಗ

ಮಾತನಾಡುವವರು ಹೇಳುತ್ತಾರೆ, ಮುಂದೆ ಮಾತನಾಡುವವರು ಹೇಳುತ್ತಾರೆ. ಅದನ್ನೆ ಮತ್ತೆ ಮತ್ತೆ "ಚರ್ವಿತ ಚರ್ವಣ" ಮಾಡುವುದಕ್ಕೆ ನಾನು ಹೋಗುವುದಿಲ್ಲ. ನಾನು ಈಗ ಕೇಳಿರುವಂತಹ ವಿಷಯಗಳಿಗೆ ಅವರು ಸ್ಪಷ್ಟವಾದ ಉತ್ತರಗಳನ್ನು ಕೊಡಬೇಕೆಂದು ಹೇಳುತ್ತೇನೆ. ಈ ಬಡವರ ಮತ್ತು ರೈತರ ಗೋರಿಯ ಮೇಲೆ, ಸರ್ಕಾರದ ಖಜಾನೆಯನ್ನು ಲೂಟಿ ಮಾಡಿ, ಇಂತಹ ಅಭಿವೃದ್ಧಿ ಕೆಲಸವನ್ನು ಮಾಡಬೇಕಾ ಎಂದು, ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಮಂತ್ರಿಮಂಡಲದವರು ದಯಮಾಡಿ ತಿಳಿಸಬೇಕು. ಕೆಲವರೆಲ್ಲಾ ಧರ್ಮ ಸಂಕಟಕ್ಕೆ ಸಿಲುಕಿಕೊಂಡಿದ್ದೇವೆ. ನಮ್ಮ ಕೆಲವರು ಸ್ನೇಹಿತರು ಸಿಕ್ಕಿಹಾಕಿಕೊಂಡುಬಿಟ್ಟಿದ್ದಾರೆ. ಮಹಾಭಾರತದಲ್ಲಿ ದ್ರೋಣ, ಭೀಷ್ಮರು, ದುರ್ಯೋಧನನ ಪರವಾಗಿ ಇದ್ದರು. ಅವರಿಗೆ ಗೊತ್ತಿತ್ತು, ಇವನಿಗೆ ಧರ್ಮ ಇಲ್ಲ, ನ್ಯಾಯ ಇಲ್ಲ, ಸತ್ಯವಿಲ್ಲವೆಂದು ಗೊತ್ತಿತ್ತು. ಆದರೆ ಅವರು ಉಪ್ಪು ತಿಂದಿದ್ದರು. ಅದಕ್ಕಾಗಿ ಅವರು ಅವನ ಪರ ಇದ್ದರು. ಆಮೇಲೆ ಭೀಷ್ಮ ಶರಪಂಚರದ ಶಯ್ಯೆಯಲ್ಲಿ ಇರುವಾಗ ಉಪದೇಶವನ್ನು ಮಾಡುತ್ತಾನೆ. ಆಗ ದ್ರೌಪದಿಯು ನಗೆಯಾಡುತ್ತಾಳೆ. ನನ್ನ ಸೀರೆಯನ್ನು ಎಳೆಯುವಾಗ, ಅಪಮಾನವನ್ನು ಮಾಡುವಾಗ, ಅವತ್ತು ನಿಮ್ಮ ಈ ಆದರ್ಶದ ಮಾತುಗಳು ಎಲ್ಲಿ ಹೋಗಿದ್ದವು? ಇವತ್ತು ನೀವು ನಮಗೆಲ್ಲಾ ಭೋದನೆಯನ್ನು ಮಾಡುತ್ತಿದ್ದೀರಿ. ಆಗ ಭೀಷ್ಮಚಾರ್ಯರು ಹೇಳಿದ್ದು ನಿಮಗೆಲ್ಲಾ ನೆನಪು ಇರಬಹುದು. ನಾನು ಅವತ್ತು ದುರ್ಯೋಧನನ ಅನ್ನವನ್ನು ಊಟ ಉಂಡಿದ್ದೆ. ಆ ಅನ್ನದ ರಕ್ತ ಈ ಶರೀರದಲ್ಲಿ ಇತ್ತು. ಅದೆಲ್ಲಾ ಸೋರಿ ಹೋಗಿದೆ, ನನ್ನ ಮನಸ್ಸು, ಶರೀರ ಶುದ್ಧವಾಗಿದೆ. ಈಗ ನನಗೆ ಉಪದೇಶವನ್ನು ಮಾಡುವ ಶಕ್ತಿ ಬಂದಿದೆಯೆಂದು ಭೀಷ್ಮನು ಹೇಳುತ್ತಾನೆ. ದ್ರೌಪದಿಯ ಸೀರೆಯನ್ನು ಎಳೆಯುವಾಗ, ಅವಳು ಎಲ್ಲರನ್ನೂ ಅಂಗಲಾಚಿ ಬೇಡಿಕೊಳ್ಳುತ್ತಾನೆ, ನನ್ನನ್ನು ಕಾಪಾಡಿ, ಮಾನವನ್ನು ಉಳಿಸಿ ಎಂದು ಕೇಳಿಕೊಳ್ಳುತ್ತಾರೆ. ಆಗ ಯಾರೂ ಮುಂದೆ ಬರುವುದಿಲ್ಲ, ಅವಳು ತನ್ನ ಗಂಡಂದಿರನ್ನು ಬೇಡಿಕೊಳ್ಳುತ್ತಾಳೆ. ಆಗ ಗಂಡಂದಿರು ಮುಂದೆ ಬರುವುದಿಲ್ಲ. ಆಗ ಅವಳು ಕೊನೆಗೆ ಒಂದು ಮಾತನ್ನು ಹೇಳುತ್ತಾಳೆ, ನೀವು ಗಂಡಂದಿರೋ, ಷಂಡಂದಿರೋ ಎಂದು ಹೇಳುತ್ತಾಳೆ. ದ್ರೌಪದಿ ಆ ತುಂಬಿದ ಸಭೆಯಲ್ಲಿ "ನೀವು ಗಂಡಂದಿರೋ ಷಂಡಂದಿರೋ" ಎಂದು ಹೇಳುತ್ತಾಳೆ. ಆ ಸನ್ನಿವೇಶ ನನಗೆ ಇವತ್ತಿನ ದಿವಸ ನೆನಪು ಆಗುತ್ತಿದೆ. ತಾವು ಇಂತಹ ಒಂದು ಅತ್ಯಂತ ರೋಮಾಂಚನಕಾರಿ, ಕಳವಳಕಾರಿ, ಅಘಾತಕಾರಿ, ಈ ರಾಜ್ಯಕ್ಕೆ ಮಾರಕವಾಗಿರುವಂತಹ ಭ್ರಷ್ಟಚಾರದಿಂದ ಕೂಡಿರುವಂತಹ ಇಂತಹ ಒಂದು ಪ್ರಾಜೆಕ್ಟ್ ಅನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ನಾವು ಒಪ್ಪಿಗೆಯನ್ನು ಕೊಟ್ಟರೆ, ದ್ರೌಪದಿ ಹೇಳಿದ ಮಾತು "ಗಂಡಂದಿರೋ" ನಾನು ಮುಂದಿನದನ್ನು ಹೇಳುವುದಿಲ್ಲ. ಇದನ್ನು ನಾವೆಲ್ಲಾ ಗಮನದಲ್ಲಿ.........

ಶ್ರೀ ನೆ.ಲ. ನರೇಂದ್ರ ಬಾಬು : ಮಾನ್ಯ ರಾಮಸ್ವಾಮಿಯವರೆ, ತಾವು ಮಹಾಭಾರತದಲ್ಲಿ ಯಾವ ಪಾತ್ರವನ್ನು ವಹಿಸುತ್ತಿದ್ದೀರಾ?

ಶ್ರೀ ಎ.ಟಿ. ರಾಮಸ್ವಾಮಿ : ನಾನು ದ್ರೌಪದಿ ಹೇಳಿರುವಂಥಾದ್ದನ್ನು ನಾನು ಹೇಳಿದ್ದು. ಅವಳು "ನೀವು ಗಂಡಂದಿರೊ ಷಂಡಂದಿರೊ" ನನ್ನನ್ನು ರಕ್ಷಣೆ ಮಾಡಲಿಲ್ಲವೆಂದು ಹೇಳಿದಳು. ಆ ಸನ್ನಿವೇಶ ನನಗೆ ನೆನಪು ಬರುತ್ತಿದೆ. ದಯಮಾಡಿ ನಾನು ಎಲ್ಲರಲ್ಲೂ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇಂತಹ ಒಂದು ಅತ್ಯಂತ ಭ್ರಷ್ಟ ಪ್ರಾಜೆಕ್ಟ್ ಅನ್ನು, ನೆಲ ನುಂಗುವ ಪ್ರಾಜೆಕ್ಟ್

ಅನ್ನು, ರೈತರ ಮನೆಯನ್ನು ಹಾಳು ಮಾಡುವಂತಹ ಪ್ರಾಜೆಕ್ಟ್ ಅನ್ನು, ದಯವಿಟ್ಟು ಇದೇ ರೀತಿ ಮುಂದುವರೆಸಿಕೊಂಡು ಹೋಗುವುದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ, ಎಂದು ಮುಖ್ಯವಾಗಿ ನಿಮ್ಮೆಲ್ಲರಲ್ಲಿ ಅತ್ಯಂತ ಕಳಕಳಿಯಿಂದ, ನಾನು ಸರ್ಕಾರದವರಿಗೆ, ಹಾಗೂ ಎಲ್ಲರೂ ಸೇರಿಕೊಂಡು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಚೇರ್ಮನ್‌ರವರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಛೇರ್ಮನ್ : ಈಗ ಬಸವರಾಜ ರಾಯರೆಡ್ಡಿಯವರು.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು–ಮೈಸೂರು........

ಶ್ರೀ ವಾಟಾಳ್ ನಾಗರಾಜ್ : ಈ ಸಭೆಯನ್ನು ರಾತ್ರಿ 12 ಗಂಟೆಗೆ ಮುಗಿಸುತ್ತೀರೋ ಅಥವಾ ಒಂದು ಗಂಟೆಗೆ ಮುಗಿಸುತ್ತೀರೋ?

ಛೇರ್ಮನ್ : ಅವರು ಶುರು ಮಾಡಿ ಸ್ವಲ್ಪ ಮಾತನಾಡಲಿ. ನಂತರ ಮುಗಿಸೋಣ.

ಶ್ರೀ ವಾಟಾಳ್ ನಾಗರಾಜ್ : ಯಾವ ದಿಕ್ಕಿಗೆ ತಲುಪುತ್ತಿದ್ದೀರಿ ನೀವು? ಬೆಳಗ್ಗೆ ಒಂದು ಸಲ 10 ಗಂಟೆಗೆ ಸೇರುತ್ತೀರಿ, ಒಂದು ಸಲ 11 ಗಂಟೆಗೆ ಸೇರುತ್ತೀರಿ, ಒಂದು ದಿನ ಸಂಜೆ 5 ಗಂಟೆಗೆ ಮುಗಿಸುತ್ತೀರಿ, ಇನ್ನೊಂದು ದಿನ ರಾತ್ರಿ 12 ಗಂಟೆಗೆ ಮುಗಿಸುತ್ತೀರಿ, ಸಭೆಯೇ, ಏನಿದು? ಏನೆಂದು ನನಗರ್ಥವಾಗುತ್ತಿಲ್ಲ.

ಛೇರ್ಮನ್ : ವಾಟಾಳ್ ನಾಗರಾಜ್‌ರವರೇ, ಅವರು ಆರಂಭ ಮಾಡಿಬಿಡಲಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನೀವು ಸಭೆ ನಡೆಸಿ. ಗಂಡಂದಿರು ಮನೆಗೆ ಹೋಗುತ್ತೇವೆ, ಷಂಡರು ಇಲ್ಲೇ ಇರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ಆರೂವರೆ ಗಂಟೆಯಾಗಿದೆ. ಅವರು ನಾಳೆ ಮಾತನಾಡಲಿ. ಮಾತನಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನಾವು ಬೆಳಗ್ಗೆ 11 ಗಂಟೆಗೆ ಕರೆಕ್ಟಾಗಿ ಇಲ್ಲಿ ಬಂದು ಕುಳಿತರೆ, ಸದನ ಮುಗಿದಾಗಲೇ ಹೋಗುವುದು. ಹಾಗಾಗಿ, ಇದು ಸರಿಯಲ್ಲ. ಸಭೆಯನ್ನು ಎಷ್ಟು ಹೊತ್ತಿಗೆ ಮುಗಿಸುತ್ತೀರಿ ಎಂದು ಮುಖ್ಯಮಂತ್ರಿಗಳೂ ಹೇಳಬೇಕು.

ಛೇರ್ಮನ್ : ನಾಗರಾಜ್‌ರವರೇ, ಅವರು ಆರಂಭ ಮಾಡುತ್ತಿದ್ದಾರೆ. ಮಾಡಿಬಿಡಲಿ.

ಶ್ರೀ ಬಸವರಾಜ ರಾಯರೆಡ್ಡಿ : ಈಗ ನಾನು ಪ್ರಾರಂಭ ಮಾಡಿದ್ದೇನೆ. ನನಗೆ ನಾಳೆ ಮಾತನಾಡಲು ಅವಕಾಶ ಕೊಡಿ. ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯ ಬಗ್ಗೆ ಈ ಸದನದಲ್ಲಿ, ಹೊರಗಡೆ, ಪತ್ರಿಕೆಗಳಲ್ಲಿ ಹಾಗೂ ವಿವಿಧ ಮಾಧ್ಯಮಗಳಲ್ಲಿ ಈಗಾಗಲೇ ಬಹಳಷ್ಟು ಚರ್ಚೆಯಾಗಿದೆ. ಇವತ್ತು ನಾವು ಇಲ್ಲಿ ಚರ್ಚೆ ಮಾಡುತ್ತಿರುವ ಈ ವಿಚಾರ, ನನ್ನ ಪ್ರಕಾರ ಇದೊಂದು ಪೋಸ್ಟ್–ಮಾರ್ಟಂ ಕೆಲಸ. ಈ ಯೋಜನೆಯ ಬಗ್ಗೆ ವ್ಯಕ್ತಿಗತವಾಗಿ ಒಬ್ಬೊಬ್ಬರು ಒಂದೊಂದು ರೀತಿಯ ವ್ಯಾಖ್ಯಾನವನ್ನು ಮಾಡುತ್ತಿದ್ದಾರೆ. ಈ ಯೋಜನೆಯ ಬಗೆಗಿನ ಸತ್ಯಾಂಶವನ್ನು ಸರ್ಕಾರ ಸ್ಪಷ್ಟವಾಗಿ ಹೊರತರಬೇಕು. ಸ್ಪಷ್ಟವಾಗಿ ಹೊರಗೆ ತರದೇ ಇದ್ದರೆ, ಕರ್ನಾಟಕದಲ್ಲಿ ಬಂಡವಾಳವನ್ನು ಹೂಡುವಂಥ ಜನರ ಮೇಲೆ ದೊಡ್ಡ ಪರಿಣಾಮವನ್ನು ಬೀರುತ್ತದೆ ಎನ್ನುವಂಥ ಮಾತನ್ನು ಹೇಳಲಿಕ್ಕೆ

ನಾನು ಇಚ್ಛೆಪಡುತ್ತೇನೆ. ಬೆಂಗಳೂರು–ಮೈಸೂರು ಕಾರಿಡಾರ್ ಪ್ರಾಜೆಕ್ಟ್ ಬಗ್ಗೆ ಇಲ್ಲಿ ಏನು ಚರ್ಚೆಯಾಗುತ್ತಿದೆ ಎಂದರೆ, ಯಾರು ಇದನ್ನು ಹುಟ್ಟುಹಾಕಿದರು ಅಥವಾ ಇಂಥವರು ತಪ್ಪಿತಸ್ಥರಿದ್ದಾರೆ ಎಂದು ಕೆಲವು ಜನರು ಮಾತನಾಡುತ್ತಿದ್ದಾರಲ್ಲಾ, ಅಂಥ ತಪ್ಪಿತಸ್ಥರು ಯಾರಿದ್ದಾರೆ, ಅವರು ನಾವು ನಿರಪರಾಧಿಗಳೆಂದು ಪತ್ರಿಕೆಗಳಲ್ಲಿ ಮತ್ತು ಬೇರೆಬೇರೆ ಸೆಮಿನಾರ್‌ಗಳಲ್ಲಿ ಮಾತನಾಡುತ್ತಿದ್ದಾರೆ. ಯಾರು ತಪ್ಪಿತಸ್ಥರಾಗಬೇಕಾಗಿದೆ, ಅವರು ನಾವು ನಿರಪರಾಧಿಗಳು ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ಯಾರಿಗೆ ಸಂಬಂಧವಿಲ್ಲ, ಹಿಂದಿನ ಸರ್ಕಾರಗಳು ಮಾಡಿದಂಥಾದ್ದನ್ನು ಮುಂದುವರೆಸಿಕೊಂಡು ಹೋದಂಥ ನಿರಪರಾಧಿಗಳನ್ನು, ಅಪರಾಧಿಗಳು ಎಂದು ಮಾಡುವಂಥ ಚರ್ಚೆ ಕೆಲವು ಕಡೆ ಆಗುತ್ತಿದೆ. ಬಹಳ ವಿಪರ್ಯಾಸವಾದ ಚರ್ಚೆ ಇದರ ಮೇಲೆ ಆಗುತ್ತಿದೆ. ಅದರ ಮೇಲೆ ನಾವು ಸವಿಸ್ತಾರವಾಗಿ ಚರ್ಚೆ ಮಾಡಬೇಕು. ಈಗ ವೇಳೆಯ ಅಭಾವವಿರುವುದರಿಂದ, ನಾಳೆ ನಾನು ನನ್ನ ಮಾತನ್ನು ಮುಂದುವರೆಸುತ್ತೇನೆ. ನಾಳೆ ನಾನು ಡೀಟೇಲಾಗಿ ಮುಂದುವರಿಸುತ್ತೇನೆ. ಅದಕ್ಕೆ ಅನುಮತಿಯನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

ಛೇರ್ಮನ್ : ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 34 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 4–07–06ರ ಮಂಗಳವಾರ ಬೆಳಗ್ಗೆ 11.00 ಗಂಟೆಗೆ ಸಭೆ ಸೇರಲು ತೀರ್ಮಾನಿಸಿತು)

ಅನುಬಂಧ (ಅ)

ದಿನದ ಪಟ್ಟಿಯಲ್ಲಿ ಸೇರಿಸಲಾದ ಚುಕ್ಕೆ ಗುರುತಿನ ಪ್ರಶ್ನೆಗಳು.

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ವಿತ್ತೀಯ ಕೊರತೆ

203 (1109) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಎಷ್ಟು ಮೊತ್ತದ ವಿತ್ತೀಯ ಕೊರತೆಯಾಗಿರುತ್ತದೆ;

ಆ) ಈ ವಿತ್ತೀಯ ಕೊರತೆಯನ್ನು ನೀಗಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ರೂಪಿಸಿದೆ;

ಇ) ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ರಾಜ್ಯ ಸರ್ಕಾರವು ತನ್ನ ಪಾಲಿನ ತೆರಿಗೆಯನ್ನು ಕಡಿತ ಮಾಡುವುದೇ;

ಈ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) 2006–07ನೇ ಸಾಲಿನ ಆಯವ್ಯಯದಲ್ಲಿ 5210.56 ಕೋಟಿ ರೂಪಾಯಿ ವಿತ್ತೀಯ ಕೊರತೆಯನ್ನು ಅಂದಾಜಿಸಲಾಗಿದೆ.